# ಹೊಸ ಮನುಷ್ಯ ಸಮಾಜವಾದಿ ಮಾಸಿಕ

ಡಿಸೆಂಬರ್, ೨೦೧೨ ('ನವ ಮಾನವ ಮಾಸಿಕ'ದ ನೋಂದಿತ ಆವೃತ್ತಿ) ಸಂಪುಟ: ೧ ಸಂಚಿಕೆ: ೧

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ ವಿವರ:** ವಾರ್ಷಿಕ: ರೂ. ೧೨೫/- ದ್ವೈವಾರ್ಷಿಕ: ರೂ. ೨೨೫/- ತ್ರೈವಾರ್ಷಿಕ: ರೂ. ೩೫೦/-

**ವಿಳಾಸ:** ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ- ೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕನ ಟಿಪ್ಪಣಿಗಳು

ಪ್ರಿಯ ಓದುಗರೇ,

ಪತ್ರಿಕೆ ಹಲವು ಸಾಧಕ-ಬಾಧಕಗಳ ಪರಿಗಣನೆ ಮತ್ತು ಕಳೆದೊಂದು ತಿಂಗಳಿನಲ್ಲಿ ಮತ್ತೆ ನಿಮ್ಮಲ್ಲಿ ಹಲವಾರು ಜನ ತಿಳಿಸಿದ ಅಭಿಪ್ರಾಯಗಳಿಗೆ ಅನುಸಾರವಾಗಿ ಈ ಸಂಚಿಕೆಯಿಂದ ಪತ್ರಿಕೆ 'ಹೊಸ ಮನುಷ್ಯ' ಎಂಬ ಶೀರ್ಷಿಕೆಯೊಂದಿಗೆ ಹೊರಬರುತ್ತಿದೆ. ಓದುಗರೊಬ್ಬರು ಸೂಚಿಸಿರುವಂತೆ, ಈ ಹಿಂದಿನ ಮತ್ತು ಈ ಶೀರ್ಷಿಕೆಗಳ ಅರ್ಥ-ಉದ್ದೇಶಗಳ ನಡುವೆ ಯಾವ ವ್ಯತ್ಯಾಸವೂ ಇಲ್ಲದಿರುವುದರಿಂದ ನೀವು ಪತ್ರಿಕೆಯನ್ನು ಇನ್ನು ಮುಂದೆಯೂ ಈ ಹಿಂದಿನ ಪ್ರೀತಿ-ವಿಶ್ವಾಸಗಳಿಂದ ಸ್ವಾಗತಿಸುವಿರೆಂದು ನಂಬುತ್ತೇವೆ. ಹಾಗೇ, ಈ ಮಧ್ಯೆ 'ನವ ಮಾನವ ಮಾಸಿಕ' ಹೆಸರೇ ಚೆಂದ ಎಂದು ಭಾವಿಸಿದ ಕೆಲ ಅಭಿಮಾನಿ ಓದುಗರ ಸಲಹೆ ಮತ್ತು ಸಹಾಯದ ಭರವಸೆಯ ಮೇಲೆ ಆ ಶೀರ್ಷಿಕೆಗಾಗಿ ಸಂಬಂಧಪಟ್ಟವರಿಗೆ ಮತ್ತೊಂದು ಅರ್ಜಿ ಸಲ್ಲಿಸಲಾಗಿದ್ದು, ಅದೇನಾದರೂ ಫಲಪ್ರದವಾದರೆ, ಪತ್ರಿಕೆ ತನ್ನ ಮೂಲ ಹೆಸರನ್ನೇ ಉಳಿಸಿಕೊಂಡು ಮುಂದುವರೆಯುವ ಸಾಧ್ಯತೆಗಳಿವೆ ಎಂದೂ ಈ ಸಂದರ್ಭದಲ್ಲಿ ತಿಳಿಸಬಯಸುವೆವು.

* * *

ನಿರಂತರ ವಿವಾದಗಳ ಮೂಲಕವೇ ಸುದ್ದಿಯಲ್ಲಿರುತ್ತಿದ್ದ ಬಾಳ ಠಾಕ್ರೆ ತಮ್ಮ ಸಾವಿನಲ್ಲೂ ಸುದ್ದಿಯ ಧೂಳು ಎಬ್ಬಿಸಿ ಹೋಗಿದ್ದಾರೆ. ಮೂಲತಃ ಮುಂಬೈನಲ್ಲಿ ಮರಾಠಿ ಭಾಷಿಕರ ಲೌಕಿಕ ಹಿತ ಮತ್ತು ಸಂಸ್ಕೃತಿಯನ್ನು ಕಾಪಾಡುವ; ಮೇಲ್ನೋಟಕ್ಕೆ ನ್ಯಾಯಯುತವಾಗಿಯೇ ಕಾಣುವ ಆದರ್ಶದೊಂದಿಗೆ ಅವರು ಶಿವಸೇನೆಯನ್ನು ಸ್ಥಾಪಿಸಿದರು. ಆದರೆ ಅದು ಕ್ರಮೇಣ ದುಂಡಾವರ್ತಿಯ ಸೇನೆಯಾಗಿ ಮಾರ್ಪಟ್ಟಿತು. ಅದೀಗ ಹಿಂದುತ್ವ ಪ್ರತಿಪಾದನೆಯ ಕಠೋರತೆಯಲ್ಲಿ ಈ ತತ್ವದ ಮೂಲ ಸಂಘಟನೆಗಳನ್ನೇ ಹಿಂದಿಕ್ಕಿ ಒಂದು ಗಣನೀಯ ರಾಜಕೀಯ ಶಕ್ತಿಯಾಗಿ ಬೆಳೆದು ನಿಂತಿದೆ. ಭಾಷೆ ಮತ್ತು ಸಂಸ್ಕೃತಿಯ ಅಭಿಮಾನವು ಹೀಗೆ ನಿಧಾನವಾಗಿ ಅನ್ಯ ಭಾಷೆ ಮತ್ತು ಸಂಸ್ಕೃತಿಗಳನ್ನು ಕುರಿತ ಅಸಹನೆಯಾಗಿ, ಕೊನೆಗೆ ವಿಕ್ಷಿಪ್ತ ಮತೀಯತೆಯಾಗಿ ರೂಪಾಂತರಗೊಂಡದ್ದರ ಹಿಂದೆ ಕಳೆದ ಕಾಲು ಶತಮಾನದ ಅವಧಿಯಲ್ಲಿ 'ಸೆಕ್ಯೂಲರಿಸಂ'ನ ಹೆಸರಿನಲ್ಲಿ ಹಿಂದೂ ಮತ್ತು ಮುಸ್ಲಿಂ ಮತೀಯತೆಯನ್ನು ಸರದಿಯ ಮೇಲೆ ಓಲೈಸುತ್ತಾ ನಡೆದ ಭಾರತದ ಮುಖ್ಯ ವಾಹಿನಿ ರಾಜಕಾರಣದ ಆತ್ಮದ್ರೋಹಿ ಕಥೆಯೂ ಇದೆ ಎಂಬುದನ್ನೂ ನಾವು ಗಮನಿಸದಿರಲಾಗದು. ಇದರಿಂದಾಗಿ ದೇಶದ ಮಾನಸಿಕತೆ ಇಂದು ಎಷ್ಟು ವಕ್ರಗೊಂಡಿದೆ ಎಂದರೆ, ಭಯೋತ್ಪಾದಕ ಅಜ್ಮಲ್ ಕಸಬ್‌ನನ್ನು ಗಲ್ಲಿಗೇರಿಸಿದ್ದನ್ನು ಒಂದು ಕಡೆ ವಿಜಯೋತ್ಸವವಾಗಿ ಆಚರಿಸುವ ಧರ್ಮ ದುರಂಧರಿದ್ದರೆ ಇನ್ನೊಂದೆಡೆ ಅವನಿಗಾಗಿ ಕಾವ್ಯ ಕಂಬನಿ ಮಿಡಿವ ಒಕ್ಕಣ್ಣಿನ ಸೆಕ್ಯುಲರಿಸ್ಟ್ ಸಹೃದಯರೂ ಇದ್ದಾರೆ!

ಇಂತಹ ಮನೋಭೂಮಿಕೆಯ ಪರಿಣಾಮವಾಗಿಯೋ ಎಂಬಂತೆ ಇಂದು ಬಾಳ ಠಾಕ್ರೆ ಸಾವು ನಮ್ಮ ಎಲ್ಲ ಮಾಧ್ಯಮಗಳಲ್ಲಿ ಒಂದು ರಾಷ್ಟ್ರೀಯ ಸುದ್ದಿಯಾಗಿ ವಿಜೃಂಭಿಸಿದೆ. ಕೆಲವುಗಳಲ್ಲಂತೂ ಆತನನ್ನು ಓರ್ವ ರಾಷ್ಟ್ರೀಯ ನಾಯಕನಂತೆ ಆತನ ರಾಜಕೀಯ ಚರಿತ್ರೆಯನ್ನು ನಿರೂಪಿಸಲಾಗಿದೆ. ಯಾವುದೇ ವ್ಯಕ್ತಿಯ ಸಾವಿನ ಸಂದರ್ಭದಲ್ಲಿ ಆತನ ಬಗ್ಗೆ ಕಟುವಾಗಿ ಮಾತನಾಡುವುದು ಸದಭಿರುಚಿಯ ವರ್ತನೆಯಾಗಲಾರದು, ನಿಜ. ಆದರೆ ಆತನಲ್ಲಿ ಆವರೆಗೆ ಕಾಣಲಾಗದಿದ್ದ 'ಸದ್ಗುಣ'ಗಳನ್ನೆಲ್ಲ ಈಗ ಕಂಡು ಹಿಡಿದು ಚರಿತ್ರೆಯ ತಿಪ್ಪೆ ಸಾರಿಸುವುದು ಕೂಡಾ ಸದಭಿರುಚಿಯ ನಡಾವಳಿ ಎನಿಸುವುದಿಲ್ಲ. ನಮ್ಮ ಕೆಲವು ಮಾಧ್ಯಮಗಳು ಮಾಡಿದ್ದು ಇದನ್ನೇ. ಹುಲಿ ಘರ್ಜಿಸುವುದನ್ನು ನಿಲ್ಲಿಸಿದೆಯಂತೆ! ಚರಿತ್ರೆಯನ್ನು ಇದಕ್ಕಿಂತ ಅಗ್ಗ ಮಾಡಲಾಗದೇನೋ!

ಇಂತಹ ಅಗ್ಗದ ಮಸಾಲೆ ಮಾಧ್ಯಮ ಪ್ರಚಾರದ ಹಿನ್ನೆಲೆಯೇ, ಬಾಳ ಠಾಕ್ರೆ ಎಂಬ ಈ ವ್ಯಕ್ತಿ ಸಹಜ ಸಾವನ್ನಪ್ಪಿದರೆ ಮುಂಬೈ ನಗರವೇಕೆ ಬಂದ್ ಆಗಿ ಜನಜೀವನ ಅಸ್ತವ್ಯಸ್ತವಾಗಬೇಕು ಎಂದು ತಮ್ಮ ಫೇಸ್ ಬುಕ್‌ನಲ್ಲಿ ಹಸಿಮುಗ್ಧತೆಯಲ್ಲಿ ಬರೆದ ಮತ್ತು ಅದನ್ನೋದಿ ಮೆಚ್ಚಿ ಇನ್ನೊಬ್ಬರಿಗೆ ಕಳಿಸಿದ ಮಹಾರಾಷ್ಟ್ರದ ಇಬ್ಬರು ಎಳೆ ಬಾಲೆಯರನ್ನು ಶಿವಸೇನೆ ಕಾರ್ಯಕರ್ತರ ದೂರಿನನ್ವಯ ರಾಜ್ಯ ಪೋಲೀಸರು ರಾತ್ರೋ ರಾತ್ರಿ ಬಂಧಿಸಿ ಮೊಕದ್ದಮೆ ಹೂಡುವಂತಹ ಅಸಂಬದ್ಧ ಮತ್ತು ಭಯೋತ್ಪಾದನೆಯ ವಾತಾವರಣವನ್ನು ಸೃಷ್ಟಿಸಿರುವುದು. ಈ ಬಾಲೆಯರು ತಮ್ಮ ಖಾಸಗಿ ಫೇಸ್ ಬುಕ್ ಖಾತೆಯಲ್ಲಿ ವಿನಿಮಯ ಮಾಡಿಕೊಂಡ ಅವರ ವ್ಯಕ್ತಿಗತ ಅಭಿಪ್ರಾಯ ಠಾಕ್ರೆ ಅಭಿಮಾನಗಳ ಮನಸ್ಸನ್ನು ಘಾಸಿಗೊಳಿಸಿ ಸಾರ್ವಜನಿಕ ಅಶಾಂತಿಗೆ ಕಾರಣವಾಗಬಲ್ಲುದಾಗಿತ್ತಂತೆ!

ಇದು ಕಾಂಗ್ರೆಸ್ ನೇತೃತ್ವದ ಸರ್ಕಾರ ಇರುವ ಮಹಾರಾಷ್ಟ್ರ ಪೋಲೀಸರ ವ್ಯಾಖ್ಯಾನ ಮತ್ತು ಕಾರ್ಯಾಚರಣೆ ಎಂಬುದೂ ಇಲ್ಲಿ ಮುಖ್ಯ. ಏಕೆಂದರೆ ಬಾಳ ಠಾಕ್ರೆ ಬೆಳೆಸಿ ಪ್ರತಿನಿಧಿಸಿದ್ದ ರಾಜಕಾರಣ ಅವರ ಪಕ್ಷಕ್ಕಷ್ಟೇ ಸೀಮಿತವಾಗದೆ ಇಂದಿನ ತೀವ್ರ ಸ್ಪರ್ಧಾತ್ಮಕ ರಾಜಕಾರಣದ ಒತ್ತಡಗಳಲ್ಲಿ ಸಾರ್ವತ್ರಿಕ ರಾಜಕೀಯ ಸಂಸ್ಕೃತಿಯಾಗಿ ಹೇಗೆ ಇತರೆಲ್ಲ ಪಕ್ಷಗಳಿಗೂ ಹಬ್ಬಿದೆ ಎಂಬುದನ್ನು ಇದು ಸೂಚಿಸುತ್ತದೆ. ಭಾರತದ ರಾಜಕಾರಣ ಪಕ್ಷಬೇಧವಿಲ್ಲದೇ ದಿನೇ ದಿನೇ ಅಧಿಕಾರ ಮತ್ತು ಆ ಮೂಲಕ ಸುಲಭ ಸಂಪತ್ತು ಗಳಿಕೆಯ ಸಾಧನವಾಗುವ ಹಾದಿಯಲ್ಲಿ ಪ್ರಜಾಪ್ರಭುತ್ವದ ಎಲ್ಲ ನಾಗರೀಕ ಸಲ್ಲಕ್ಷಣಗಳನ್ನೂ ಕೊಡವಿ ಬಿಸಾಡುತ್ತಾ ಪ್ರಜಾಪೀಡಕ ಶಕ್ತಿಯಾಗುತ್ತಿರುವ ವಿದ್ಯಮಾನವನ್ನು ನಾವಿಂದು ತೀವ್ರವಾಗಿ ಗಮನಿಸಬೇಕಾಗುತ್ತದೆ.

ಹೌದು ಕೆಲವು ಮಾಧ್ಯಮಗಳ ಸಕ್ರಿಯ ಹಸ್ತಕ್ಷೇಪದಿಂದಾಗಿ ಈ ಪ್ರಕರಣ ವ್ಯಾಪಕ ಸಾರ್ವಜನಿಕ ಚರ್ಚೆಗೆ ಒಳಗಾಗಿ ಸಾರ್ವತ್ರಿಕ ಖಂಡನೆಗೆ ಗುರಿಯಾಗಿದೆ. ಇದರಿಂದ ಒತ್ತಡಕ್ಕೆ ಸಿಕ್ಕಿದ ಮಹಾರಾಷ್ಟ್ರ ಸರ್ಕಾರ ಮುಖ ಉಳಿಸಿಕೊಳ್ಳುವ ತಂತ್ರವಾಗಿ ಈ ಬಗ್ಗೆ ತನಿಖೆಗಾಗಿ ಆದೇಶಿಸಿದೆ. ಕೇಂದ್ರದ ಕಾಂಗ್ರೆಸ್ ಮಂತ್ರಿಗಳು ಪೋಲೀಸರ ಕ್ರಮವನ್ನು ಅಸಾಧು ಎಂದು ಟೀಕಿಸಿದ್ದಾರೆ. ಈ ಸಂಚಿಕೆ ನಿಮ್ಮ ಕೈ ಸೇರುವ ವೇಳೆಗೆ ಈ ಪ್ರಕರಣ ಬಾಲೆಯರ ವಿರುದ್ಧದ ಮೊಕದ್ದಮೆಗಳ ವಾಪಸಾತಿ ಮತ್ತು ಸಂಬಂಧಿತ ಪೋಲೀಸರ ಮೇಲೆ ಶಿಸ್ತು ಕ್ರಮಗಳ ಪ್ರಕಟಣೆಯ ಮೂಲಕ ಕಾಂಗ್ರೆಸ್ ವಕ್ತಾರ ಮನು ಸಿಂಘ್ವಿ ಹೇಳಿದ ಹಾಗೆ 'ಸುಖಾಂತ್ಯ' ಕಂಡಿರಬಹುದು. ಆದರೆ ಇದು ನಮ್ಮ ರಾಜಕೀಯ ಪಕ್ಷಗಳು ಸಾರ್ವಜನಿಕ ನಿಗಾ ಇಲ್ಲದಿದ್ದಲ್ಲಿ ಹೇಗೆ ಸಾಮಾನ್ಯ ಪ್ರಜೆಗಳ

ನಾಗರಿಕ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ದಮನ ಮಾಡಬಲ್ಲ ರಾಕ್ಷಸ ಶಕ್ತಿಗಳಾಗಬಲ್ಲವುಬೆಂಬುದರ ಒಂದು ದರ್ಶನ ಮಾಡಿಸಿದೆ.

ಏಕೆಂದರೆ, ಇದೇ ಸಿಂಘ್ವಿಗೆ ಮಹಾರಾಷ್ಟ್ರದ ಪೋಲೀಸರ ಕ್ರಮ ಸರಿಯೋ ತಪ್ಪೋ ಎಂಬುದು ತನಿಖೆಯ ನಂತರ ಗೊತ್ತಾಗಬೇಕಂತೆ! ಆದರೆ ಈ ಕಾಂಗ್ರಸ್ಸಿಗರಿಗೆ ಹಣಕಾಸು ಮಂತ್ರಿ ಚಿದಂಬರಂರ ಮಗ ಕಾರ್ತೀಕನ ಆಸ್ತಿ ಬಗ್ಗೆ ಟ್ವೀಟ್ ಮಾಡಿದ ವ್ಯಕ್ತಿಯನ್ನು ತನಿಖೆ ಇಲ್ಲದೆ ಬಂಧಿಸಿದ್ದು ಸರಿಯಾಗಿ ಕಂಡಿದೆ;ಆದರೆ, ಬಂಗಾಳದಲ್ಲಿ ಮಮತಾ ತಮ್ಮನ್ನು ಕುರಿತ ವ್ಯಂಗ್ಯ ಚಿತ್ರ ಬರೆದ ಪ್ರಾಧ್ಯಾಪಕರನ್ನು ಮತ್ತು ತಮ್ಮನ್ನು ಸಾರ್ವಜನಿಕವಾಗಿ ಪ್ರಶ್ನಿಸಿದ ರೈತನನ್ನು ಸೆರೆಮನೆಗೆ ದೂಡಿದ್ದು ನಾಗರಿಕ ಹಕ್ಕುಗಳ ಉಲ್ಲಂಘನೆಯಾಗಿ ಕಾಣುತ್ತದೆ! ಇನ್ನು ಶಿವಸೇನೆಯ ಮಿತ್ರ ಪಕ್ಷ ಬಿಜೆಪಿ ಶಿವಸೇನೆ ಕಾರ್ಯಕರ್ತರು ಬಾಲೆಯರ ಮೇಲೆ ಬಾಲಿಷವಾದ ದೂರು ನೀಡಿದ್ದಲ್ಲದೆ, ಆ ಬಾಲೆಯೊಬ್ಬಳ ಚಿಕ್ಕಪ್ಪ ನಡೆಸುತ್ತಿದ್ದ ಚಿಕಿತ್ಸಾಲಯದ ಮೇಲೆ ನಡೆಸಿದ ದಾಳಿಯನ್ನು ಖಂಡಿಸಲು, ಅದು ತಪ್ಪೆಂದು ಹೇಳಲು ನಿರಾಕರಿಸುತ್ತಾ ಬರೀ ಮಹಾರಾಷ್ಟ್ರ ಪೋಲೀಸರ ಕ್ರಮವನ್ನಷ್ಟೇ ಸಾರ್ವಜನಿಕವಾಗಿ ವೀರಾವೇಶದಿಂದ ಖಂಡಿಸುವ ಕ್ಷುಲ್ಲಕ ಮತ್ತು ಸಂಕುಚಿತ ರಾಜಕಾರಣವನ್ನು ಪ್ರದರ್ಶಿಸುತ್ತಿದೆ. ಶಿವಸೇನೆಯಂತೂ ತನ್ನ ಕಾರ್ಯಕರ್ತರ ಪುಂಡಾಟಿಕೆಯನ್ನು ಪರೋಕ್ಷವಾಗಿ ಸಮರ್ಥಿಸಿಕೊಳ್ಳುತ್ತಾ, ಆ ಬಾಲೆಯರು ಹೆದರಿ ಕ್ಷಮೆ ಕೋರಬೇಕಾದಂತಹ ವಾತಾವರಣವನ್ನು ಸೃಷ್ಟಿಸಿ, ಈಗವರು ಕ್ಷಮೆ ಕೇಳಿರುವುದರಿಂದ ಅವರಿನ್ನು ಭಯಪಡುವ ಅಗತ್ಯವಿಲ್ಲ ಎಂದು ಹೇಳುತ್ತಾ, ಅಭಿಪ್ರಾಯ ಸ್ವಾತಂತ್ರ್ಯ ಎನ್ನುವುದು ಆಳುವ ವರ್ಗಕ್ಕೆ ತೋರಬೇಕಾದ ಭಯ–ಭಕ್ತಿಗಳಿಗೆ ಬದ್ಧವಾಗಿರತಕ್ಕಂಥದ್ದು ಎಂಬ ಎಚ್ಚರಿಕೆಯನ್ನು ರಾಷ್ಟಕ್ಕೆ ರವಾನಿಸಿದ್ದಾರೆ.

ಇನ್ನು ನಮ್ಮದೇ ರಾಜ್ಯದಲ್ಲಿ ಮಂಗಳೂರಿನ ಹೋಂ ಸ್ಟೇಯೊಂದರಲ್ಲಿ ಸ್ವಯಂಘೋಷಿತ ಸಂಸ್ಕೃತಿ ರಕ್ಷಕರು ನಡೆಸಿದ ಪುಂಡಾಟಿಕೆಯನ್ನೂ ಹಾಗೂ ಅದಕ್ಕೆ ಸಂಬಂಧಿಸಿದ ಪೋಲಿಸ್ ನಿಷ್ಕ್ರಿಯತೆಯನ್ನೂ ಸಾರ್ವಜನಿಕವಾಗಿ ಬಹಿರಂಗಗೊಳಿಸಿದ ಮಾಧ್ಯಮ ಪ್ರತಿನಿಧಿಯನ್ನು ಬಂಧಿಸಿದ್ದಲ್ಲದೆ, ಕೈಕೋಳ ತೊಡಿಸಿ ವಿಚಾರಣೆಗೆ ಕರೆತರುವ ಭಂಡ ಧೈರ್ಯವನ್ನು ಸರ್ಕಾರ ಪ್ರದರ್ಶಿಸಿದೆ.

ಇದೆಲ್ಲವೂ ಬರಲಿರುವ ದಿನಗಳು ಪ್ರಜೆಗಳ ಪಾಲಿಗೆ ಭೀಕರವಾಗಲಿವೆ ಎಂಬುದನ್ನು ಸೂಚಿಸುತ್ತದೆ. ಸದ್ಯದ ಈ ರಾಜಕೀಯ ಸಂಸ್ಕೃತಿ ಭ್ರಷ್ಟವಷ್ಟೇ ಅಲ್ಲ, ಬಲು ದುಷ್ಟವೂ ಆಗಿದೆ. ಆ ದುಷ್ಟತನ ವಿವೇಕಕ್ಕಿರಲಿ, ಸರಳ ತರ್ಕಕ್ಕೂ ಸಿಗದಷ್ಟು ಭಂಡವಾಗಿದೆ ಎಂಬುದು ಈ ಎಲ್ಲ ಪಕ್ಷಗಳು ಆತ್ಮಸಾಕ್ಷಿಯನ್ನೇ ಕಳೆದುಕೊಂಡಂತೆ ಮಾಡುತ್ತಿರುವ ವಾದಗಳ ವೈಖರಿಯನ್ನು ಗಮನಿಸಿದರೇ ತಿಳಿಯುತ್ತದೆ. ಹಾಗಾಗಿಯೇ ಇದನ್ನು ಕಾನೂನುಗಳ ತರ್ಕದ ಮೂಲಕ ಎದುರಿಸಲು ಸಾಧ್ಯವಾಗದಾಗಿದೆ. ಏಕೆಂದರೆ ಕಾನೂನುಗಳಿಗೆ ಆತ್ಮಸಾಕ್ಷಿಯ ದರ್ದಿಲ್ಲ. ಅಂತೆಯೇ ಎಲ್ಲ ಪಕ್ಷಗಳೂ ತಮ್ಮ ಬಿಕ್ಕಟ್ಟಿನ ಸಂದರ್ಭಗಳಲೆಲ್ಲ ತನಿಖೆಯ ಮತ್ತು ನ್ಯಾಯಾಲಯಗಳ ಮಾತನಾಡುವುದು. ಏಕೆಂದರೆ ಅವಕ್ಕೆ ಗೊತ್ತು, ಈ ಎರಡೂ ಏನನ್ನೂ ಅಂತಿಮವಾಗಿ ಇತ್ಯರ್ಥಪಡಿಸುವುದಿಲ್ಲ ಎಂದು.

ಹಾಗಾದರೆ ಆತ್ಮಸಾಕ್ಷಿಯಂತೆ ಬದುಕ ಬಯಸುವ ಜನ ಏನು ಮಾಡಬೇಕು? ಮೊದಲು ನಮ್ಮ ಬದುಕನ್ನು ಇತ್ತೀಚಿನ ದಿನಗಳಲ್ಲಿ ಎಲ್ಲ ಮೌಲ್ಯಗಳಿಂದ ಮುಕ್ತಗೊಳಿಸಿ ಪೂರ್ಣವಾಗಿ ಹಣ ಮತ್ತು ಸಂಪತ್ತಿನ ಆಟವನ್ನಾಗಿ ಪರಿವರ್ತಿಸುತ್ತಿರುವ ಸದ್ಯದ ಅಶ್ಲೀಲ ಆರ್ಥಿಕ ನೀತಿಯನ್ನು ಪ್ರಜ್ಞಾಪೂರ್ವಕವಾಗಿ ವಿರೋಧಿಸುತ್ತಾ, ಅದನ್ನು ಆಧರಿಸಿ ಬೆಳೆದಿರುವ ಇಂದಿನ ಈ ರಾಜಕೀಯ ಸಂಸ್ಕೃತಿಯನ್ನು ಸಾರಾಸಗಟಾಗಿ ತಿರಸ್ಕರಿಸಬೇಕು. ಪರ್ಯಾಯ ರಾಜಕೀಯ ಸಂಸ್ಕೃತಿಯನ್ನು ಪ್ರತಿಪಾದಿಸುತ್ತಿರುವ ವಿವಿಧ ಗುಂಪು, ಪಕ್ಷ, ಚಳುವಳಿಗಳೊಂದಿಗೆ ಗುರುತಿಸಿಕೊಂಡು ಅವನ್ನು ವಿಮರ್ಶಾತ್ಮಕವಾಗಿ ಬೆಳೆಸುವ ಜವಾಬ್ದಾರಿ ಪ್ರದರ್ಶಿಸಬೇಕು.

ಇಂತಹ ಜವಾಬ್ದಾರಿ ಇಲ್ಲದ/ಒಲ್ಲದ ಸಮಾಜ ಅಂತಿಮವಾಗಿ ಪಶು ಸಮಾನ ಬದುಕಿಗೆ ಮಾತ್ರ ಅರ್ಹವಾದೀತು. ಇದು ಇತಿಹಾಸ ಕೊಡುತ್ತಿರುವ ಎಚ್ಚರಿಕೆ!

**–ಸಂಪಾದಕ**

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

ಪತ್ರಿಕೆ ನೋಡಿ, ಓದಿ ಸಂತೋಷಪಟ್ಟೆ. ಇಂದಿನ ದಿನಮಾನಗಳಲ್ಲಿ ಇಂತಹ ಪತ್ರಿಕೆಯ ಅವಶ್ಯಕತೆ ಅಷ್ಟಿಷ್ಟಲ್ಲ. ಸ್ವತಃ ವಕೀಲನಾದ ನನಗೆ ಅಕ್ಟೋಬರ್ ಸಂಚಿಕೆಯಲ್ಲಿನ ನ್ಯಾಯಾಂಗ ಕುರಿತ ಎರಡೂ ಲೇಖನಗಳು ಅರ್ಥಪೂರ್ಣವೆನಿಸಿದವು.

ಈ ಮೂಲಕ ಐದುನೂರು ರೂಪಾಯಿಗಳ ಚಂದಾ ಕಳಿಸುತ್ತಿರುವೆ. ನನ್ನ ಹಲವು ಗೆಳೆಯರಿಗೂ ಚಂದಾದಾರರಾಗಲು ಹೇಳುವೆ.

**–ಎಂ. ಸುದರ್ಶನ ರಾಜ್**, ಧಾರವಾಡ

ಕುಪ್ಪಳ್ಳಿಯ ಸಮಾಜವಾದಿ ಶಿಬಿರ ಒಂದು ಅಚ್ಚಳಿಯದ ನೆನಪು. ನಿಮ್ಮ ಬದ್ಧತೆ ಮತ್ತು ಶ್ರಮಗಳಿಗಾಗಿ ಅಭಿನಂದನೆಗಳು.

'ಹೊಸ ಮನುಷ್ಯ' ಶೀರ್ಷಿಕೆಯನ್ನು ನೊಂದಾಯಿಸಿಕೊಂಡು ಸರ್ಕಾರದ ಎಲ್ಲ ಸೌಲಭ್ಯಗಳನ್ನೂ ಬಳಸಿಕೊಳ್ಳಿರಿ. ಅದು ನಮ್ಮ ಆಜನ್ಮ ಸಿದ್ಧ ಹಕ್ಕು. ನಮ್ಮ ಹಣ ಅದು. ನವ ಮಾನವ ಅಥವಾ ಹೊಸ ಮನುಷ್ಯ ಈ ಎರಡರ ಅರ್ಥ ಮತ್ತು ಉದ್ದೇಶಗಳೂ ಒಂದೇ ಅಲ್ಲವೇ?

**–ಎನ್. ವಿಶುಕುಮಾರ್,** ಬೆಂಗಳೂರು

ಕೇಜ್ರಿವಾಲರ ಭಾಷಣದ ನಿಮ್ಮ ಅನುವಾದ ಮತ್ತು ಅವರ ನಿಲುವಿನ ಬಗ್ಗೆ ನಿಮ್ಮ ಸಂಪಾದಕೀಯ ಪ್ರಶಂಸನೀಯ ಮತ್ತು ಸಾಂದರ್ಭಿಕ.

**–ಗಂಗಾಧರ ಬೀಚನಹಳ್ಳಿ,** ತುಮಕೂರು

ನವ ಮಾನವ ಮಾಸಿಕ ಮೈದುಂಬಿ ಬರುತ್ತಿದೆ. ಪತ್ರಿಕೆಯ ಶೀರ್ಷಿಕೆಯ ವಿಚಾರದಲ್ಲಿ ನಾವು 'ಹೊಸ ಮನುಷ್ಯ'ನೊಂದಿಗಿದ್ದೇವೆ. ಜಾಹಿರಾತನ್ನು ನಂಬಿ ಸಣ್ಣ ಪತ್ರಿಕೆಗಳನ್ನು ನಡೆಸುವುದು ಅಷ್ಟು ಜಾಣತನವೆನ್ನಿಸದು.

ನವೆಂಬರ್ ಸಂಚಿಕೆಯಲ್ಲಿ ಚರ್ಚಿತವಾಗಿರುವ ಕೇಜ್ರಿವಾಲ್ ತಂಡದ ಹೊಸ ರಾಜಕೀಯ ಪ್ರಯತ್ನ ಮತ್ತು ಕನ್ನಡ ಮಾಧ್ಯಮ ಕುರಿತ ಲೇಖನಗಳು ಮನ ಮುಟ್ಟುವಂತಿವೆ; ಜೊತೆಗೆ ಜಯದೇವಿತಾಯಿ ಲಿಗಾಡೆ ಅವರ ನೂರರ ನೆನಪಿನ ಲೇಖನವೂ ಸಹ. ಮಾಧ್ಯಮದ ವಿಚಾರದಲ್ಲಿ ನಮ್ಮ ಜನರಲ್ಲಿರುವ ದ್ವಂದ್ವ/ಜಾರಿಕೆಯ ತೀರ್ಮಾನಗಳು ತಿಳಿದರೆ ಮರಾಠಿ ಮನೆ ವಾತಾವರಣದಲ್ಲೂ ಕನ್ನಡವನ್ನು ಅದಮ್ಯವಾಗಿ ಪ್ರೀತಿಸಿದ ಲಿಗಾಡೆಯವರ ಆತ್ಮ ವಿಲ ವಿಲ ಒದ್ದಾಡೀತು.

**–ರೋಹಿತ್ ಕೆ, ಸುಜಾತ ಎಫ್ ತಳವಾರ್,** ಮಡಿಕೇರಿ.

'ನವ ಮಾನವ ಮಾಸಿಕ'ವನ್ನು ಆರಂಭದಿದಲೂ ಗಮನಿಸುತ್ತಿದ್ದೇನೆ. ಸಮಾಜವಾದಕ್ಕೆ ಬದ್ಧವಾದ ನಿಮ್ಮಂತೆಯೇ, ಪತ್ರಿಕೆ ಕೂಡ ಸಮಾಜವಾದಿ ಆಶಯಗಳನ್ನು ಬಿತ್ತಿ ಬೆಳೆಸುವಲ್ಲಿ ಪ್ರಮುಖ ವೇದಿಕೆಯಾಗಿ ಕೆಲಸ ಮಾಡುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಯಾವ ಚೌಕಾಸಿ ಮುಲಾಜುಗಳಿಗೂ ಒಳಗಾಗದೇ ತನ್ನ ಜೀವಂತಿಕೆಯನ್ನು ತೋರಿಸುತ್ತಿದೆ. ಸಮಕಾಲೀನ ವಿಷಯಗಳಿಗೆ ನಿರ್ಭಿಡೆಯಿಂದ ಪ್ರತಿಕ್ರಿಯಿಸುವ ಕೆಲವೇ ಪತ್ರಿಕೆಗಳಲ್ಲಿ 'ನವ ಮಾನವ' ಕೂಡ ಒಂದು ಎಂಬುದು ಹೆಮ್ಮೆಯ ವಿಷಯ.

ವ್ಯಾವಹಾರಿಕ ಬದುಕೇ ದೊಡ್ಡದಾಗಿ, ಮಾನವ ಸಂಬಂಧಗಳನ್ನು ನುಂಗಿ ಹಾಕುತ್ತಿರುವ ಈ ಹೊತ್ತಿನಲ್ಲಿ 'ನವ ಮಾನವ' ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಂದಕಗಳನ್ನು ಕಡಿಮೆ ಮಾಡುವ ವೇದಿಕೆಯಾಗಿ ಕೆಲಸ ಮಾಡಲಿ ಎಂದು ಹಾರೈಸುತ್ತೇನೆ.

**–ಇಂದೂಧರ ಹೊನ್ನಾಪುರ,** ಬೆಂಗಳೂರು

ಕಳೆದ ಸಂಚಿಕೆಯ ಒಂದು ಮನನೀಯ ಸಾಲು ಎಂದರೆ ಜಯವಂತ ಕಾಮತ್ ತಮ್ಮ ಕನ್ನಡ ಮಾಧ್ಯಮದ ಅನುಭವವನ್ನು ಹೃದಯಸ್ಪರ್ಶಿಯಾಗಿ ಬರೆಯುತ್ತಾ ಹೇಳಿರುವ, ' ಇದು ಅಭಿಮಾನದ ಮಾತಲ್ಲ... ನೀರು, ವಿದ್ಯುಚ್ಛಕ್ತಿ, ವಸತಿ, ರಸ್ತೆ, ಉದ್ಯೋಗ, ನೈರ್ಮಲ್ಯದಂತಹ ಮೂಲಭೂತ ಅವಶ್ಯಕತೆಗಳೊಂದಿಗೆ ಕನ್ನಡವೂ ಸೇರ್ಪಡೆಯಾಗಬೇಕು' ಎಂಬ ಆಳದ ಒಳನೋಟದ ಮಾತು. ಹಾಗೇ, ಜಯಂತ ಕಾಯ್ಕಿಣಿಯವರು ಅರವತ್ತು ವರ್ಷಗಳ ಹಿಂದಿನ ಛಾಯಾಚಿತ್ರವೊಂದನ್ನು ತಮ್ಮದೇ ವಿಶಿಷ್ಟ ವ್ಯಾಖ್ಯಾನ ಶೈಲಿಯ ಮೂಲಕ ಇಂದಿಗೂ ಜೀವಂತಗೊಳಿಸಿರುವ ಪರಿ ಕೂಡಾ.

**–ಎಂ. ಎನ್, ಪ್ರಶಾಂತ್‌ಶೆಟ್ಟಿ ,** ಮಂಗಳೂರು

## ನಮ್ಮ ಸಮಾಜವಾದಿಗಳು | ಹೋರಾಟವನ್ನೇ ಬದುಕಾಗಿಸಿಕೊಂಡ ವೀರಣ್ಣ ತಿಮ್ಮಾಜಿ

ದಿ. ವೀರಣ್ಣ ತಿಮ್ಮಾಜಿಯವರನ್ನು ಬಹುಶಃ ನಾನು ಮೊದಲ ಬಾರಿಗೆ ಕಂಡದ್ದು ೧೯೭೮ರಲ್ಲಿ ಎಂದು ಕಾಣುತ್ತದೆ. ಹೈದರಾಬಾದ್‌ನ ಲೋಹಿಯಾ ವಿಚಾ ಮಂಚ್‌ನ ಸಮವೇಶದಲ್ಲಿ. ಜವಾರಿ ವ್ಯಕ್ತಿತ್ವದ ತಿಮ್ಮಾಜಿ ಮೊದಲ ನೋಟದಲ್ಲೇ ಅಂದು ನನ್ನನ್ನು ಸೆಳೆದಿದ್ದರು. ಅವರ ಧ್ವನಿಪೂರ್ಣ ಶೀರ್ಷಿಕೆಯ ಕಿರುಪುಸ್ತಕ 'ಕೊನೆಯ ಹೋರಾಟ'ವನ್ನು ನಾನು ಓದಿದ್ದೆ. ಅದನ್ನು ಸಾರಾಂಶೀಕರಿಸಿ ನಾನು ಸಂಪಾದಿಸಿರುವ 'ಲೋಹಿಯಾ: ವ್ಯಕ್ತಿ–ವಿಚಾರ ವಿಮರ್ಶೆ' ಸಂಪುಟದ ಮೊದಲ ಆವೃತ್ತಿಯಲ್ಲೇ೧೯೭೭) ಪ್ರಕಟಿಸಿದ್ದೆ. ಲೋಹಿಯಾ ಮರಣಶಯ್ಯೆಯಲ್ಲಿದ್ದಾಗ ಅವರ ಹಲವು ಅಭಿಮಾನಿಗಳಂತೆ ತಿಮ್ಮಾಜಿಯೂ ದೆಹಲಿಗೆ ಧಾವಿಸಿ ಅವರು ಕೊನೆಯುಸಿರೆಳೆಯುವವರೆಗೂ ಅಲ್ಲೇ ವಾಸ್ತವ್ಯ ಹೂಡಿ ಅವರ ಆರೋಗ್ಯದ ಬಗ್ಗೆ ಪ್ರತಿ ಕ್ಷಣ ನಿಗಾ ಇಟ್ಟಿದ್ದಾಗ ಕಂಡ ದೃಶ್ಯಗಳು ಮತ್ತು ತಮ್ಮ ಎದೆಯಾಳಗಳಿಂದ ಉಕ್ಕಿ ಬಂದ ಭಾವನೆಗಳ ಜೀವಂತ ನಿರೂಪಣೆಯನ್ನೊಳಗೊಂಡ ಈ ಕಿರುಪುಸ್ತಕ, ಲೋಹಿಯಾ–ತಿಮ್ಮಾಜಿ ಎಂಬ 'ಎತ್ತಣ ಮಾಮರ, ಎತ್ತಣ ಕೋಗಿಲೆ!' ಎಮಬಂತಹ ವಿಚಿತ್ರ ಗುರು–ಶಿಷ್ಯ ಸಂಬಂಧವನ್ನು ಓದಿದವರ ಕಣ್ಣು ಒದ್ದೆಯಾಗುವಷ್ಟು ಆರ್ದ್ರವಾಗಿ ಮತ್ತು ಆರ್ತವಾಗಿ ಚಿತ್ರಿಸುತ್ತದೆ.

ರಾಜ್ಯದಲ್ಲಿ ಸಮಾಜವಾದಿ ಆಂದೋಲನ ಅವನತಿಗೊಳ್ಳಲು ಮುಖ್ಯ ಕಾರಣ, ದೊಡ್ಡ ನಾಯಕರ ವಿಜೃಂಭಣೆಯಲ್ಲಿ ತಿಮ್ಮಾಜಿಯವರಂತಹ ನೆಲಮೂಲ ಹೋರಾಟಗರರಿಗೆ ಮಾನ್ಯತೆ ಸಿಗದೇ ಹೋದುದೇ ಎಂದು ಹಲವು ಬಾರಿ ನನಗನ್ನಿಸಿದೆ. ಇವರ ಬಗ್ಗೆ ಒಂದು ಪುಟ ಬರೆಸಲು ಅವರ ಕಾರ್ಯಕ್ಷೇತ್ರವಾಗಿದ್ದ ಗುಲ್ಬರ್ಗ ಮತ್ತು ಸುತ್ತಮುತ್ತಲಿನ ಹಲವು ಮಾಜಿ ಸಮಾಜವಾದಿಗಳನ್ನೂ, ಚಿಂತಕರನ್ನೂ ವಿಚಾರಿಸಿ ನೋಡಿದೆ. ಯಾರಿಗೂ ಬಿಡುವಿಲ್ಲ ಅಥವಾ ಯಾರೂ ತಯಾರಿಲ್ಲ. ಕೊನೆಗೆ ಅವರ ಛಾಯಾಚಿತ್ರಕ್ಕಾಗಿ ಪರಿ ಪರಿಯ ಪ್ರಯತ್ನಪಟ್ಟೆ. ಅವರ ಬಗ್ಗೆ ವಿಚಾರ ಗೋಷ್ಠಿ ಮಾಡಿದೆವೆಂದು ಹೇಳಿಕೊಂಡವರ ಹಿಂದೆ ಬಿದ್ದೆ. ಇಲ್ಲವೆಂದರು. ಕೊನೆಗೆ ನೆನಪಾಯಿತು, ೧೯೯೦ರಲ್ಲಿ ನಾವು ಕೆಲವು ಗೆಳೆಯರು ಹಾಸನದಲ್ಲಿ ಆಯೋಜಿಸಿದ್ದ ಸಮಾಜವಾದಿ ಅಧ್ಯಯನ ಶಿಬಿರಕ್ಕೆ ಅವರು ಬಂದಿದ್ದರೆಂದು. ನನ್ನ ಮನೆಯಲ್ಲಿದ್ದ ಎಲ್ಲ ಚಿತ್ರ ಸಂಪುಟಗಳನ್ನು ಜಾಲಡಿದಾಗ ಸಿಕ್ಕಿದ ಒಂದು ಗುಂಪು ಚಿತ್ರದಲ್ಲಿನ ತಿಮ್ಮಾಜಿಯವರ ಮುಖ ಭಾಗವನ್ನು ಕತ್ತರಿಸಿ ಇಲ್ಲಿ ಮುದ್ರಿಸಲಾಗಿದೆ. ತಿಮ್ಮಾಜಿಯವರನ್ನು ಕುರಿತ ಈ ಕೆಳಗಿನ ಬರಹ ರಂಗಕರ್ಮಿ ಮತ್ತು ಅಂಕಣಕಾರ ಗೆಳೆಯ ಮಲ್ಲಿಕಾರ್ಜುನ ಕಡಕೋಳ ಅವರ 'ಫಲ್ಗುಣೆಯಲಿ ಕೇಳಿ ಬಂದ ರುದ್ರವೀಣೆ' ಎಂಬ ಅಂಕಣ ಬರಹಗಳ ಸಂಗ್ರಹದಿಂದ ಆಯ್ದದ್ದು. ಈ ಬರಹ ಸುಮಾರು ಒಂದೂವರೆ ದಶಕದಷ್ಟು ಹಿಂದಿನದು;ಆದರೂ ಇನ್ನೂ ಜೀವಂತವಾಗಿದೆ, ತಿಮ್ಮಾಜಿಯವರ ನೆನಪಿನಂತೆಯೇ. –ಡಿಎಸ್ಸೆನ್



ಉಸಿರಾಡಲು ಇಂಬು ಸಿಗದ ಇಕ್ಕಟ್ಟು ಗಲ್ಲಿಗಳು, ನಿಜಾಮನ ಪಳೆಯುಳಿಕೆಯಂತಿರುವ ದೈತ್ಯಾಕಾರದ ಹಾಳು ಕಮಾನು ಗೋಡೆಗಳು. ಎಡವಿ ಬಿದ್ದರೆ *ಖ್ವಾಜಾ ಬಂದೇ ನವಾಜ ದರ್ಗಾ*. ನಮಾಜು ಮುಗಿಸಿಕೊಂಡು ಹಿಂಡು ಹಿಂಡಾಗಿ ಬರುತ್ತಿರುವ ಮುಸ್ಲಿಂ ಬಂಧುಗಳು. ಹಾಗೇ ಸಾಗಿದೆವು. ಅಪ್ಪಿತಪ್ಪಿಯೂ ಕನ್ನಡ ಮಾತನಾಡದ 'ಲಾಯೋಂಮೆ ಏಕ್' ಎನ್ನುವಂತೆ 'ಕನ್‌ನಡ' ಮಾತಿನ ಸ್ವರ ಕೇಳಿದರೆ ಅದೇ ಸೋಜಿಗ. ತಾಜುಬಾ! ಅಂಕುಡೊಂಕಾದ ಏಳೆಂಟು ತಿರುವು ದಾಟಿದೆವು. ಅದು ಕಲಬುರ್ಗಿ ಶಹರವೆಂಬ ಶರೀರದ ಮುಖ್ಯ ಅಂಗ 'ಖುರ್ದ ರೋಜ್ಹಾ'. ಅಲ್ಲಿರುವುದೇ ವೀರಣ್ಣ ತಿಮ್ಮಾಜಿಯವರ ಪುಟ್ಟ ಮನೆ. ಅದು ಮನೆ ಅಲ್ಲ. ಸಮಾಜವಾದಿ ಆಂದೋಲನದ ಸ್ಮಾರಕ. ಡಾ. ರಾಮಮನೋಹರ ಲೋಹಿಯಾ ಒಂದಲ್ಲ ಹತ್ತಾರು ಬಾರಿ ವಸ್ತಿ ಮಾಡಿದ ಮನೆ ಅದು. ಶಾಂತವೇರಿ ವಾರಗಟ್ಲೇ ವಾಸ್ತವ್ಯ ಹೂಡಿದ ಮನೆ ಅದು.

ಮೇಲೆತ್ತರ ನಿಲುವಿನ ಔಡಲ ಗಿಡದಂತಹ ಶರೀರ. ಅದಕ್ಕೊಂದು ಶುಭ್ರ ಬಿಳುಪಿನ ಧೋತರ, ಬಕ್ಕಣವಿರುವ ಒಳಾಂಗಿ ತೊಟ್ಟ ಸರ್ವಸಾಧಾರಣ ಹಿರಿ ಗಡಿಯೊಬ್ಬ ಪರಿಚಿತನಂತೆ 'ನಮಸ್ಕಾರ ಬರ್ರಿ ಬರ್ರೀ' ಅಂತ ನಮ್ಮನ್ನು ಬರಮಾಡಿಕೊಂಡ. ನೆಲಗೋಡೆ ಸಮೇತ ಶಾಬಾದಿಯ ಸೇದಿಕಲ್ಲು ತುರುಕಿದ ವಾರೀ ಚಪ್ಪರದ ಪುರಾತನ ಜಮಾನಾದ ಮನೆಯೊಂದರೊಳಗೆ ಕರಕೊಂಡು ಹೋಗಿ ತಾವೇ ಚಾಪೆ ಹಾಕಿ ಆ ಮುದುಕ ನಮ್ಮನ್ನು ಕೂಡಿಸಿದರು. ವೀರಣ್ಣ ತಿಮ್ಮಾಜಿಯವರು ಎಲ್ಲಿ? ನಾನು ಕೇಳಿದೆ. 'ನಾನೇ' ಅಂದಿತು ಹಿರಿಯ ಚೇತನ! ಹೌದು, ಇವರೇ ತಿಮ್ಮಾಜಿ ಎಂದು ಗೆಳೆಯ ಬಸವರಾಜ ಸಗರ ಸಾಕ್ಷಿ ನುಡಿದರು. ಒಂದು ಘಳಿಗೆ ತೋಚದೇ ಬವಳಿ ಬಂದವನಂತೆ ಕುಂತೆ.

ಪಾಕಿಸ್ತಾನದಂತೆ ಭಾಸವಾಗಿರುವ ವಾತಾವರಣದ ನಡುವೆ ಇದ್ದೀರಲ್ಲ, ನಿಮಗೇನೂ ಅನಿಸಿಲ್ಲವೇ? ನನ್ನ ಮೊದಲ ಪ್ರಶ್ನೆ ಹೊರಡುತ್ತಿದ್ದಂತೆ ತಿಮ್ಮಾಜಿ ಹೃದಯಪೂರ್ವಕ ನಕ್ಕು, 'ಇದೇ ಮನೆಯಲ್ಲಿ ನಾನು ಹುಟ್ಟಿ ಬೆಳೆದು ಎಂಭತ್ತೇಳು ವರ್ಷ(ಹುಟ್ಟಿದ್ದು: ೨೩.೧೦.೧೯೧೦)ಗಳಾದವು. ಅದಕ್ಕೂ ಮುಂಚೆ ನನ್ನಪ್ಪ, ತಾತ, ಮುತ್ತಾತರು ಇಲ್ಲೇ ಹುಟ್ಟಿ ಬಾಳಿದರು. ನಾನಲ್ಲಿ ತಿಮ್ಮಾಜಿ ನಾನಾ, ಬಡೇ ಬಯ್ಯಾ, ಮಾಮು ಆಗಿ ಎಲ್ಲರ ಹೃದಯ ಗೆದ್ದಿದ್ದೇನೆ. ಅವರೂ ನನ್ನ ಹೃದಯ ಗೆದ್ದಿದ್ದಾರೆ. ನಮಗೆಂದೂ ಜಾತಿ ಮತ ಕಾಡಿಲ್ಲ. ಅಪ್ಪಟ ಲೋಹಿಯಾವಾದಿಯಾಗಿ ಬಾಳಿರುವ, ಡಾ. ರಾಮಮನೋಹರ ಲೋಹಿಯಾ ಹಗೂ ಶಾಂತವೇರಿಯವರ ಒಡನಾಡಿ, ಹಿರಿಯ ಸಮಾಜವಾದಿ ವೀರಣ್ಣ ತಿಮ್ಮಾಜಿ ಇರುವುದನ್ನೇ ಹೇಳಿದರು. ಹೇಳಿದಂತೆಯೇ ಇರುವರು.

ಎಂಬತ್ತೇಳು ಸಂವತ್ಸರಗಳಿಂದ ಅಸಮಾನತೆಯ, ಶೋಷಣೆ ವಿರುದ್ಧವೇ ಹೋರಾಡುತ್ತಾ ಬಂದಿರುವ ಈ ಮುಪ್ಪಿನ ಕೂಗಿಗೆ ಮುಪ್ಪಿಲ್ಲ. ಪ್ರತಿಭಟನೆಯ ಕಿಚ್ಚು ತಪ್ಪಿಲ್ಲ. ಅಂದು ಬ್ರಿಟಿಷರು ಮತ್ತು ನಿಜಾಮನ ವಿರುದ್ಧ ಇಂದು ನವ ವಸಾಹತುಶಾಹಿಗಳಾದ ನಮ್ಮವರ ವಿರುದ್ಧ ಅವರ ಚಳುವಳಿ. ಅಂದು ಯುವಕ ತಿಮ್ಮಾಜಿ ಧನಶೆಟ್ಟಿ ಕಾಕ, ಬನ್ಸಿಲಾಲ ಸಾರಡಾ, ಜಗನ್ನಥ ಸಿಂಧೆ, ಖುರ್ಬಾನ ಹುಸೇನ ಮೊದಲಾದ ಹಿರಿಯ ಸ್ವಾತಂತ್ರ್ಯ ಸೇನಾನಿಗಳೊಂದಿಗೆ ಸೊಲ್ಲಾಪುರದಲ್ಲಿ ಭೂಗತರಾಗಿದ್ದರು. ಆ ಹಿರಿಯ ಸೇನಾನಗಳು ಮೂರಾಣೆ ಗಾಂಧಿ ಟೊಪ್ಪಿಗೆ ಹಾಕಿಕೊಂಡು ಸೇಂದಿ ಬನ ಕಡಿದದ್ದಕ್ಕೆ ಫಾಂಸಿಗೆ ಬಲಿಯಾದರು.

ಈ ಹಿರಿಯರ ಗಲ್ಲು ಶಿಕ್ಷೆ ಪರಿಣಾಮ ಯುವಕ ತಿಮ್ಮಾಜಿಯ ಕರುಳು ಕಲಕಿತು. ನೆತ್ತರು ಕುದಿಯಿತು. ದೇಶದಲ್ಲಿನ ವಿದ್ಯಮಾನ ಅರಿಯಲು ಓದು ಬರಹ ಕಲಿಯತೊಡಗಿದರು. ಓದಿದ್ದು ಕೇವಲ ಎರಡನೇ ಈಯತ್ತೆ... ಬಹು ವರ್ಷಗಳ ತರುವಾಯ  ಭಿನ್ನ ಈಯತ್ತೆ ಕನ್ನಡ ಕಲಿತರು. ಓಂಕಾರ ಶರದ ಅವರು ಹಿಂದಿಯಲ್ಲಿ ಪ್ರಕಟಿಸಿರುವ ಲೋಹಿಯಾ ಜೀವನ ಚರಿತ್ರೆಯನ್ನು ತಿಮ್ಮಾಜಿ ತಮ್ಮದೇ ಆದ ಸಮರ್ಥ ಕನ್ನಡದಲ್ಲಿ ಅರ್ಧ ಸಾವಿರ ಪುಟದಷ್ಟು ಸಿದ್ಧಗೊಳಿಸಿದ್ದಾರೆ. ಪ್ರಕಾಶಕರಿಗಾಗಿ ಈ ಜೀವ ಚಾತಕ ಪಕ್ಷಿಯಂತೆ ಕಾಯುತ್ತಿದೆ.

ಸೊಲ್ಲಾಪುರದಿಂದ ಮರಳಿ ಬರುವಷ್ಟರಲ್ಲಿ ಇತ್ತ ಕಲಬುರ್ಗಿಯ ಮನೆಯನ್ನು ಪಠಾಣರು ಕಬ್ಜಾ ಮಾಡಿಕೊಂಡಿದ್ದರು. ಒಂದು ಪುಟ್ಟ ಸೈಕಲ್ ಅಂಗಡಿ, ಪಾನ್ ಬೀಡಾ ಅಂಗಡಿ ಇಟ್ಟು ಹೊಸ ಜಿಂದಗಾನ ಶುರು ಮಾಡಿದರು. ಆರ್ಯ ಸಮಾಜದ ಸಂಪರ್ಕ, ಬಡಿಗೆ ತಲವಾರ ಹತ್ಯಾರ ಹಿಡಿದು ಹೋರಾಟ ಮಾಡುವ ಸ್ಥಿತಿ. ೧೯೪೨ರ ಚಳುವಳಿಯಲ್ಲಿ

ಬಾಂಬ್ ತಯಾರಿಸುವ ಕೆಲಸಕ್ಕೂ ಕೈಹಾಕಬೇಕಾಯ್ತು. ತದ ನಂತರ ಲೋಹಿಯಾ ಸಾಂಗತ್ಯ. ೧೯೫೪ರ ಸುಮಾರಿಗೆ ಪ್ರಜಾ ಸಮಾಜವಾದಿ ಪಕ್ಷದಿಂದ ಸಿಡಿದು ಬಂದ ಲೋಹಿಯಾ ನೇತೃತ್ವದಲ್ಲಿ ಹೈದ್ರಾಬಾದ್‌ನಲ್ಲಿ ಸಮಾಜವಾದಿ ಪಕ್ಷದ ಸ್ಥಾಪನಾ ಸಮ್ಮೇಳನದಲ್ಲಿ ಸಕ್ರಿಯ ಭಾಗಿ. ಆ ನಂತರ ಮದ್ರಾಸ್ ನಲ್ಲಿ ಒಂದು ತಿಂಗಳ ಕಾಲ ಡಾ. ಲೋಹಿಯಾರ ಜೊತೆ ಅಧ್ಯಯನ ಶಿಬಿರ.

ನಂತರ ಕರ್ನಾಟಕದ ತುಂಬೆಲ್ಲ ಓಡಾಟ. ಲೋಹಿಯಾ ಭಾಷಣವನ್ನು ಕನ್ನಡಕ್ಕೆ ಭಾಷಾಂತರಿಸುವ ಅವಕಾಶ ಹತ್ತಾರು ಕಡೆ. ಜೊತೆಗೆ ಗುಲಬರ್ಗಾ ಜಿಲ್ಲಾ ಸೋಷಲಿಸ್ಟ್ ಪಾರ್ಟಿ ಪೂರ್ಣ ಹೊಣೆ. ಅಂದು ವೀರೇಂದ್ರ ಪಾಟೀಲ್ ವಿರುದ್ಧ ಸ್ಪರ್ಧೆ. ಆಗ ಇವರನ್ನು ಲೋಹಿಯಾ 'ಹಿಮ್ಮತ್ ವಾಲಾ ತಿಮ್ಮಾಜಿ' ಎಂದು ಕರೆದರು. ಲೋಹಿಯಾ ಸಂಪಾದಿಸುತ್ತಿದ್ದ 'ಚೌಕಾಂಬಾ' ಪತ್ರಿಕೆಯ ೧೫೦ ಪ್ರತಿಗಳನ್ನು ಅಂದು ತಿಮ್ಮಾಜಿ ಕಲಬುರ್ಗಿಯಲ್ಲಿ ಮಾರಾಟ ಮಾಡುತ್ತಿದ್ದರು. ಅವರು ಅದೇ ಪತ್ರಿಕೆಯ ಬಾತ್ಮೀದಾರ ಕೂಡ. ಮಿಲಾಪ್, ನವಯುಗ, ಲೋಕಸತ್ತಾ, ಪ್ರಭಾತ್ ಮುಂತಾದ ಹಿಂದಿ, ಮರಾಠಿ ಪತ್ರಿಕೆಗಳಿಗೆ ಸುದ್ದಿ ಬರೆದು ತಿಂಗಳಿಗೆ ೫೦ ರೂಪಾಯಿ ಸಂಪಾದನೆ ಮಾಡುತ್ತಿದ್ದ ಅವರು. ಅಖಿಲ ಭಾರತ ಸೋಷಲಿಸ್ಟ್ ಪಕ್ಷದ ವರ್ಕಿಂಗ್ ಕಮಿಟಿ ಸದಸ್ಯರೂ ಆಗಿದ್ದರು.

ಮೂರು ಬಾರಿ ಎಂ.ಪಿ. ಮತ್ತು ಆರು ಬಾರಿ ಎಂ.ಎಲ್.ಎ. ಚುನಾವಣೆಗೆ ನಿಂತು ಸೋತರು. ಊರೂರು ತಿರುಗಿ ಜನರ ಬಿಡುವಿನ ವೇಳೆಯಲ್ಲಿ ಸಮಾಜವಾದಿ ಚಳುವಳಿ ಕುರಿತು ತಿಳಿ ಹೇಳುವುದು, ಆ ಊರಲ್ಲಿ ಯಾರಾದರೂ ಕರೆದರೆ ಅವರ ಮನೆಯಲ್ಲಿ ಉಂಡು ದೇವಸ್ಥಾನದ ಕಟ್ಟೆಯ ಮೇಲೆ ಮಲಗಿ ಮುಂದಿನ ಊರಿಗೆ ಕಾಲ್ನಡಿಗೆ ಪಯಣ. ಇದು ಅವರ ಚುನಾವಣಾ ಪ್ರಚಾರ ವೈಖರಿ. ಹೇಳಿ ಹೇಗೆ ಗೆದ್ದಾರು ಇವರು? ನೊಂದವರ, ದುಃಖಿತರ ಕಥೆ ಹೇಳುವ ಇವರ ಆದರ್ಶಗಳಿಗೆ ಕಿಮ್ಮತ್ತು ಬಂದೀತು ಹೇಗೆ?

ರಾಮಜನ್ಮಭೂಮಿ ಉಪದ್ವ್ಯಾಪಗಳ ಬಗ್ಗೆ ಜಾಡಿಸಿ ಸುದೀರ್ಘ ಲೇಖನಗಳನ್ನು ಅನೇಕ ಪತ್ರಿಕೆಗಳಲ್ಲಿ ಬರೆದಿದ್ದಾರೆ. ಬುದ್ಧ, ಬಸವ, ಅಂಬೇಡ್ಕರ್ ಬಗ್ಗೆ ಪ್ರೀತಿ ಉಕ್ಕಿಸುವ ಅನೇಕ ಬರಹ ಪ್ರಕಟಿಸಿದ್ದಾರೆ. ಹೀಗೆ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳಿಗೆ ಲೆಕ್ಕವಿಲ್ಲ. 'ಶೋಷಿತರ ಕೂಗು' ಎಂಬ ಕನ್ನಡ ವಾರಪತ್ರಿಕೆ ಮೂರು ವರ್ಷ ನಡೆಸಿದರು. ಇವರ ಪಾನ್ ಬೀಡಾ ಅಂಗಡಿ ಮುಂದೆ ನಿಂತು ರಾಜಕರಣ ಕಲಿತ ಬಚ್ಚಾಗಳು ಮಂತ್ರಿ, ಮುಖ್ಯಮಂತ್ರಿಗಳಾದರು. ಆ ಬಗ್ಗೆ ಅವರಲ್ಲಿ ವ್ಯಾಕುಲವಿಲ್ಲ. ಜನ ಕೆಟ್ಟಿದ್ದಾರೆ. ರಾಜಕಾರಣಿಗಳನ್ನು ಬೈಯುವುದರಲ್ಲಿ ಅರ್ಥವಿಲ್ಲ. ನಾನು ಕೀರ್ತಿಗಾಗಿ, ಅಧಿಕಾರಕ್ಕಾಗಿ ಹೋರಾಡಲಿಲ್ಲ. ಚಳುವಳಿಗಾಗಿ ಇಬ್ಬರು ಮಕ್ಕಳನ್ನು ಕಳೆದುಕೊಂಡೆ. ಬದುಕುಳಿದವರನ್ನು ತಿಂಗಳಿಗೊಂದು ಕುಸ್ತಿ ಆಡಿ ಏಳೆಂಟು ರೂಪಾಯಿ ಕಮಾಯಿಸಿ ಸಾಕಿದೆ. ಈ ಜಮನಾ ತುಫಾನದಂತೆ ಓಡುತ್ತಿದೆ. ಪ್ರವಾಹದಂತೆ ಹರಿಯುತ್ತಿದೆ. ಇದನ್ನು ತಡೆಯಲು ದಡಕತ್ ಇದ್ದರೆ ಮಾತ್ರ ಇದುರು ಈಸಬೇಕು. ಅದು ಹಿಮಾಲಯಕ್ಕೆ ಅಪ್ಪಳಿಸುತ್ತದೆ. ಎಲ್ಲವನ್ನೂ ಚೂರು ಚೂರಾಗಿ ಚೆಲ್ಲುತ್ತದೆ. ಅಂತಹ ಚೂರುಗಳಿಂದ ಪುನಃ ದೇಶ ಕಟ್ಟಬೇಕಿದೆ. ಅದು ನನ್ನ ಕೊನೆಯ ಕನಸು ಅನ್ನುತ್ತಾರೆ ತಿಮ್ಮಾಜಿ.

೧೪ ಜನ ಮರಿಮಕ್ಕಳು, ೧೧ ಜನ ಮೊಮ್ಮಕ್ಕಳು. ಈ ಅಜ್ಜನನ್ನು ಮರಿಮೊಮ್ಮಗಳು ಬಂದು, 'ಮುತ್ತ್ಯಾ ಐದು ರೂಪಾಯಿ ಕೊಡು' ಎಂದು ಕೇಳಿದಳು. ತಿಮ್ಮಾಜಿ ಒಳಾಂಗಿ ಕಿಸೆಯಿಂದ ಕಮಟು ವಾಸನೆ ಸೂಸುವ ತೇಪೆಯಾದ ನೋಟು ಕೊಟ್ಟರು. ಪ್ರಾಯಶ: ಅದೇ ಹಣದಿಂದ ನಮಗೆ ಚಹ ತಯಾರಾಗಿ ಬಂತೆಂದು ಕಾಣುತ್ತದೆ. ಎಂಭತ್ತೇಳರ ಮುಪ್ಪಿನಲ್ಲೂ ಈ ಜೀವ ಚಾಳೀಸು ಇಲ್ಲದೇ ಓದಬಲ್ಲದು. ನಲವತ್ತು ವರ್ಷಗಳ ಹಿಂದೆಯೇ ಶ್ರೀನಿವಾಸ ಸರಡಗಿಯಲ್ಲಿ ತಮ್ಮ ನೂರೈವತ್ತು ಎಕರೆ ಜಮೀನನ್ನು ಭೂರಹಿತರಿಗೆ ಹಂಚಿದ್ದು, ಕಾರ್ಹುಣ್ಣಿಮೆ ಆಚರಿಸಿದ್ದು, ಅಸ್ಪೃಶ್ಯರೊಂದಿಗೆ ಒಂದೇ ಗಂಗಾಳದಲ್ಲಿ ಉಂಡದ್ದು, ಹದಿಮೂರು ಬಾರಿ ಸೆರೆಮನೆ ಸೇರಿದ್ದು, ಹೀಗೆ ಒಂದೇ, ಎರಡೇ... ಹತ್ತು ಅನುಭವಗಳನ್ನು ತುಂಬಿಕೊಂಡಿರುವ ಹಿರಿಯ ಜೀವಕ್ಕೆ ಮೊನ್ನೆ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿದೆ. ಸಮಾಜವಾದಿಗಳೆಲ್ಲ ಸ್ವ-ಮಜಾವಾದಿಗಳಾಗಿರುವಾಗ ವೀರಣ್ಣ ತಿಮ್ಮಾಜಿಯವರಂಥ ಅಪ್ಪಟ ಸಮಾಜವಾದಿಯೋರ್ವರನ್ನು ಜೀವಂತವಾಗಿ ನೋಡಲು ಸಿಗುತ್ತದೆಂಬುದೇ ಸಮಾಧಾನ. ಮೈಸೂರು-ಬೆಂಗಳೂರು ಕಡೆ ಈ ಜೀವ ಹುಟ್ಟಿದ್ದರೆ ಆ ಕಥೆ ಬೇರೆಯೇ ಆಗ್ತಿತ್ತು.

ತಿಮ್ಮಾಜಿಯವರೊಂದಿಗೆ ಮೂರು ತಾಸು ಕಳೆದು ಹೊರ ಬಂದಾಗ ಅವರು ನಮ್ಮನ್ನು ಹೊಸ್ತಿಲೀಚೆ ರಸ್ತೆವರೆಗೂ ಕಳಿಸಲು ಬಂದು 'ಹೋಗಿ ಬರ್ರಿ' ಎಂದು ಕೈಮುಗಿದರು. 'ಲೋಗ್ ಮೇರೆ ಬಾತ್ ಸುನೇಂಗೆ. ಶಾಯದ್ ಮೈ ಮರ್‌ನೇ ಕೇ ಬಾದ್... ಲೇಕಿನ್ ಕಿಸಿ ದಿನ್ ಸುನೇಂಗೆ ಜರೂರ್!' ರಾಮಮನೋಹರ ಲೋಹಿಯಾ ಅವರ ಈ ಮಾತುಗಳು ನನ್ನ ಮೆದುಳಿನಲ್ಲಿ ಮತ್ತೆ ಮತ್ತೆ ಕೇಳಿ ಬಂದವು. ನನಗೆ ಗೊತ್ತಿಲ್ಲದೇ ನನ್ನ ಕಣ್ಣು ಮಂಜು ಮಂಜಾದವು.

**-ಮಲ್ಲಿಕಾರ್ಜುನ ಕಡಕೋಳ**

---

# ಜಾಗತೀಕರಣ: ಸಾಮ್ರಾಜ್ಯಶಾಹಿಯ ಹೊಸ ಸ್ವರೂಪ

***ಫಾರೂಕ್ ಸುಲೇರಿಯಾ**



**ಜಾ**ಗತೀಕರಣ ಇತ್ತೀಚಿನ ದಿನಗಳಲ್ಲಿ ಒಂದು ಮೋಹಕವಾದ ಆದರೆ ಅಸ್ಪಷ್ಟ ಶಬ್ದವಾಗಿದೆ. ಇದರ ಈ ಅಸ್ಪಷ್ಟತೆಗೆ ಮುಖ್ಯ ಕಾರಣ, ಇದರ ಉತ್ಸಾಹಿ ಪ್ರತಿಪಾದಕರು ಅದನ್ನು ಒಂದು ವಿಶೇಷ ಕೌತುಕವೆಂಬಂತೆ ಪ್ರಸ್ತುತ ಪಡಿಸಿರುವುದು. ಜಾಗತೀಕರಣದ ಬಗ್ಗೆ ಇರುವ ಇಂತಹ ಎಲ್ಲ ವ್ಯಾಖ್ಯೆಗಳನ್ನು ಸಂಗ್ರಹ ರೂಪಕ್ಕಿಳಿಸುವ ಪ್ರಯತ್ನ ನಡೆಸಿದ ಡೇವಿಡ್ ಹೆಲ್ಡ್ ಮತ್ತು ಅಂಥನಿ ಮ್ಯಾಗ್ರ್ಯೂ ಅವರ ಪ್ರಕಾರ:

" ಜಾಗತೀಕರಣವನ್ನು ದೂರದಿಂದಲೇ ಪ್ರಭಾವ ಬೀರುವ ಒಂದು ಪ್ರಕ್ರಿಯೆ ಎನ್ನಬಹುದು. ಇದರಿಂದಾಗಿ ಜಗತ್ತಿನ ಒಂದು ಮೂಲೆಯಲ್ಲಿ ನಡೆಯುವ (ಸಾಮಾಜಿಕ/ಆರ್ಥಿಕ/ರಾಜಕೀಯ) ಪ್ರಕ್ರಿಯೆಗಳು ಇನ್ನೊಂದು ಮೂಲೆಯಲ್ಲಿ ತಕ್ಷಣದ ಪ್ರಭಾವ ಬೀರುತ್ತವೆ. ಇತ್ತೀಚೆಗಷ್ಟೇ ಪ್ರವರ್ಧಮಾನಕ್ಕೆ ಬಂದಿರುವ ವಿದ್ಯುನ್ಮಾನ ಸಂಪರ್ಕ ತಂತ್ರ ಜ್ಞಾನದ ಬೆಳವಣಿಗೆಗಳು ದೂರದೂರದ ಸಮುದಾಯಗಳನ್ನು ಬೆಸೆಯುವಲ್ಲಿ ಪ್ರಮುಖ ಪಾತ್ರ ವಹಿಸಿ ಜಾಗತೀಕರಣವನ್ನು ದೇಶ-ಕಾಲದ ಎಲ್ಲೆಗಳನ್ನು ದಾಟುವ ಒಂದು ಪ್ರಕ್ರಿಯೆಯನ್ನಾಗಿಸಿವೆ. ಇಂತಹ ಬೆಸೆಯುವಿಕೆಯಿಂದಾಗಿ, ಜಾಗತೀಕರಣವೆಂಬುದು ಬಿಡಿ ಬಿಡಿಯಾಗಿದ್ದ ಸಮುದಾಯಗಳನ್ನು ಇಡಿಯಾಗಿಸಿ ಪರಸ್ಪರಾವಲಂಬನೆಯನ್ನು ಹೆಚ್ಚಿಸುವ ಪ್ರಕ್ರಿಯೆ? ಎಂದೂ ತಿಳಿಯಬಹುದು. ಹೀಗೆ ಹೆಚ್ಚಿದ ಆರ್ಥಿಕ/ಸಾಮಾಜಿಕ ಅವಲಂಬನೆಯಿಂದಾಗಿ ಜಗತ್ತಿನ ರಾಷ್ಟ್ರಗಳ ಸಾರ್ವಭೌಮತ್ತ್ವ ಕುಗ್ಗಿ ಅವುಗಳ ನಡುವಿನ ಗಡಿರೇಖೆಗಳು ಮಸುಕಾಗಿ ಇಡೀ ಜಗತ್ತನ್ನೇ ಒಂದು ಪರಸ್ಪರಾವಲಂಬನೆಯ ವಿಶ್ವಗ್ರಾಮ

---

**ಫಾರೂಕ್ ಸುಲೇರಿಯಾ ಪಾಕಿಸ್ತಾನದ ಮುಖ್ಯ ಎಡಪಂಥೀಯ ಪತ್ರಕರ್ತ ಮತ್ತು ರಾಜಕೀಯ ವಿಶ್ಲೇಷಕರಲ್ಲೊಬ್ಬರು ಹಾಗೂ ಆ ದೇಶದ ಲೇಬರ್ ಪಕ್ಷದ ಓರ್ವ ಮುಖ್ಯ ಸದಸ್ಯ ಕೂಡ.**




ಸಮುದಾಯವನ್ನಾಗಿ ಮಾಡಿರುವುದೂ ಜಾಗತಿಕರಣದ ಒಂದು ವಿಶೇಷ ಲಕ್ಷಣ. ಹೆಚ್ಚಿದ ಅರ್ಥಿಕ/ಸಾಮಾಜಿಕ ಪರಸ್ಪರಾವಲಂಬನೆಯಿಂದಾಗಿ ಮೂಡಿರುವ 'ನೀ ನನಗಿದ್ದರೆ ನಾ ನಿನಗೆ' ಎಂಬ ಅನವಾರ್ಯತೆ, ಬಿಡಿಸಲಾಗದ ನಂಟು, ಬದಲಾದ ಅಧಿಕಾರ ಸಮೀಕರಣಗಳು, ಪ್ರಾದೇಶಿಕ ಹಂಗುಗಳನ್ನು ತೊರೆದು, ಇಡೀ ವಿಶ್ವದ ಭಾಗ ನಾನು ಎಂಬ ತಿಳುವಳಿಕೆಯ ಉದಯ ಇವೆಲ್ಲ ಜಾಗತೀಕರಣದ ಪ್ರಮುಖ ಲಕ್ಷಣಗಳು."

ಜಾಗತೀಕರಣ ತಜ್ಞರ ಅಭಿಪ್ರಾಯಗಳನ್ನೆಲ್ಲ ಹೀಗೆ ಕ್ರೋಢೀಕರಿಸಿದ ನಂತರ, ಡೇವಿಡ್ ಹೆಲ್ಡ್ ಮತ್ತು ಅಂಥನಿ ಮ್ಯಾಗ್ರ್ಯೂ ಅವರುಗಳು ಜಾಗತೀಕರಣದ ಬಗ್ಗೆ ತಮ್ಮದೇ ವ್ಯಾಖ್ಯೆಯನ್ನು ಹೀಗೆ ಮಂಡಿಸಿದ್ದಾರೆ: "ಇದು ಕೇವಲ ಸಮುದಾಯಗಳ ನಡುವಿನ ಸಾಮಾಜಿಕ ಸಂಬಂಧಗಳನ್ನು ಪ್ರಾದೇಶಿಕ ಗಡಿಗಳಾಚೆಗೆ ವಿಸ್ತರಿಸುವ ಪ್ರಕ್ರಿಯೆಯಷ್ಟೇ ಅಲ್ಲ; ಬದಲಿಗೆ ಇಡೀ ವಿಶ್ವದ ಸಮುದಾಯಗಳ ನಡುವೆ ನಡೆಯುತ್ತಿರುವ 'ವಿನಿಮಯ' ಗಳನ್ನು ವರ್ಧಿಸಿ ರಾಷ್ಟ್ರಗಳ ನಡುವಿನ ಅರ್ಥಿಕ ಹಾಗೂ ರಾಜಕೀಯ ಅಧಿಕಾರ ಸಮೀಕರಣಗಳನ್ನು ಬದಲಿಸುತ್ತಾ, ಇಡಿ ಜಗತ್ತನ್ನು ಒಂದು ಸಮಾನತೆಯ, ಪರಸ್ಪರ ಸಹಕಾರಿ ಸಮುದಾಯಗಳ ಜಾಲವನ್ನಾಗಿ ಬೆಸೆಯುವ ಪರಿವರ್ತನೆಯ ಹರಿಕಾರನೇ ಜಾಗತೀಕರಣ."

ಈ ಜಾಗತೀಕರಣದ ಪರಿಕಲ್ಪನೆಯ ಮೂಲ ಯಾವುದು ಎಂಬ ಪ್ರಶ್ನೆಗೆ ಸಿಗುವ ನೇರ ಉತ್ತರವೆಂದರೆ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ಕ್ಷೇತ್ರದಲ್ಲಿ ಕಂಡು ಬಂದ ಹೊಸ ಆವಿಷ್ಕಾರಗಳು ಜಾಗತೀಕರಣದ ಹುಟ್ಟಿಗೆ ಬೇಕಿದ್ದ ಮೂಲ ಸಂರಚನೆಯನ್ನು ಒದಗಿಸಿದ್ದು ಎಂಬುದು.ಈ ತಾಂತ್ರಿಕ ಕಾರಣವನ್ನು ವಿವರಿಸುತ್ತಾ ಹೋಗುವ ಸ್ಟ್ಯಾನ್ಲೀ ಹಾಫ್‌ಮನ್ನರ ಪ್ರಕಾರ ಜಾಗತೀಕರಣ ಮೂರು ಪ್ರಕಾರಗಳಲ್ಲಿ ಪ್ರಸ್ತುತಗೊಂಡಿದೆ:

ಆರ್ಥಿಕ ಜಾಗತೀಕರಣ ಈ ಪೈಕಿ ಮೊದಲನೆಯದು. ತಂತ್ರಜ್ಞಾನದ ಹೊಸ ಆವಿಷ್ಕಾರಗಳ ಮೇಲೆ ನೇರ ಅವಲಂಬಿತವಾಗಿರುವ ಇದು, ಸರಕು ಮತ್ತು ಮಾಹಿತಿಯ ವ್ಯಾಪಾರ ವಿನಿಮಯ, ದೂರ ದೇಶಗಳಲ್ಲಿ ಬಂಡವಾಳ ಹೂಡಿಕೆ ಮತ್ತು ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟುಗಳ ವರ್ಧನೆ, ಹೊರ ಗುತ್ತಿಗೆ ಕ್ರಮ ಇತ್ಯಾದಿಗಳ ಮೂಲಕ ಪ್ರಕಟಗೊಂಡಿದೆ. ಇದರ ಫಲರೂಪವಾಗಿ ನಂತರ ಹುಟ್ಟಿದ್ದು ಸಾಂಸ್ಕೃತಿಕ ಜಾಗತೀಕರಣ. (ಇದು ಜಗತ್ತಿನ ಎಲ್ಲ ಸಮುದಾಯಗಳ ಸಂಸ್ಕೃತಿಗಳಿಗೂ ಇಡೀ ಜಗತ್ತೆಂಬ ಒಂದೇ ರಂಗಸ್ಥಲವನ್ನು ನೀಡಿದೆ. ಒಂದು ಸಮುದಾಯದ ವಿದ್ಯುನ್ಮಾನ ಮಾಧ್ಯಮಗಳ ಕಾರ್ಯಕ್ರಮಗಳು, ಜಗತ್ತಿನ ಯಾವುದೇ ಮೂಲೆಯಲ್ಲಿ ದೊರೆಯುವಂತಾಗಿರುವುದು ಇದಕ್ಕೆ ಉದಾಹರಣೆ– ಅನುವಾದಕ). ಇವೆರಡರ ಪ್ರಭಾವದಿಂದ ಮೂಡುತ್ತಿರುವ ಹೊಸ ಕ್ರಮವೆಂದರೆ ರಾಜಕೀಯ ಜಾಗತೀಕರಣ. (ಜಗತ್ತಿನ ಒಂದು ಕಡೆ ಉಂಟಾದ ರಾಜಕೀಯ ವಿಪ್ಲವಗಳು ಇಡೀ ಜಗತ್ತನ್ನೇ ವಿಚಲಿತ ಗೊಳಿಸುವಷ್ಟು ಪ್ರಭಾವಶಾಲಿಯಾಗಿ ಪರಿವರ್ತನೆ ಹೊಂದುವುದು ರಾಜಕೀಯ ಜಾಗತೀಕರಣದ ಲಕ್ಷಣ– ಅನುವಾದಕ)

ಈ ಎಲ್ಲ ಆಧುನಿಕೋತ್ತರ ಉದಾರವಾದಿ ವ್ಯಾಖ್ಯೆಗಳು ಜಾಗತೀಕರಣವನ್ನು ಸಮುದಾಯಗಳನ್ನು ಒಗ್ಗೂಡಿಸುವ ಅಪೇಕ್ಷಣೀಯ, ಪ್ರಗತಿಪರ ಕ್ರಿಯೆ ಎಂದು ಬಿಂಬಿಸುತ್ತವೆ. ಆದರೆ ಇದೆಲ್ಲವೂ ಒಂದು ರೀತಿಯ 'ಮಿಥ್ಯಾ ಪ್ರಪಂಚ'ವನ್ನು ಚಿತ್ರಿಸುತ್ತಿವೆಯೇ ಹೊರತು ತಥ್ಯವನ್ನಲ್ಲ ಎಂದು ನನ್ನ ನಂಬಿಕೆ. ರಾಬರ್ಟ್ ಮ್ಯಾಕ್ ಚೆಸ್ನೀಯವರ ಪ್ರಕಾರ ಬಂಡವಾಳಶಾಹಿ ವ್ಯವಸ್ಥೆ ತನ್ನ ವ್ಯಾಪಾರ ಮತ್ತು ಸರಕು ವಿನಿಮಯಕ್ಕೆ ಬೇಕಾದ ಮಾರುಕಟ್ಟೆಯನ್ನು ಇಡೀ ಜಗತ್ತಿಗೆ ವಿಸ್ತರಿಸುವುದಷ್ಟೇ ಅಲ್ಲ, ತನ್ನ ನಿಯಂತ್ರಣದಲ್ಲಿರುವ ಬಂಡವಾಳ ಹೂಡಿಕೆ ಹಾಗೂ ಹಣಕಾಸು ವ್ಯವಹಾರಕ್ಕೆ ಇಡೀ ಜಗತ್ತನ್ನೇ ಆಡುಂಬೊಲವಾಗಿಸುವ ಹುನ್ನಾರವೇ ಜಾಗತೀಕರಣ. ಅದಷ್ಟೇ ಅಲ್ಲ; ಬಾಯ್ಡ್ ಬೆರೆಟ್ ಅವರು ಹೇಳುವಂತೆ ಈ ವಿಸ್ತರಣಾ ಕ್ರಿಯೆಯ ರೂಪುರೇಷೆಗಳು ಸಾಮ್ರಾಜ್ಯಶಾಹಿಯ ಮೂಲ ಲಕ್ಷಣಗಳ ಅಪರಾವತಾರ. ಜಾಗತೀಕರಣವೆಂಬುದು ಸಾಮ್ರಾಜ್ಯಶಾಹಿ ಪ್ರಾರಂಭಿಸಿದ ಶೋಷಣೆ ಮತ್ತು ಅಧಿಕಾರ ದಾಹದ ಹೊಸ ಅಧ್ಯಾಯವಷ್ಟೆ.

ತಮ್ಮನ್ನು ತಾವೇ 'ಜಾಗತಿಕ' ರೆಂದು ಕರೆದು ಕೊಳ್ಳುವ ಡೇವಿಡ್ ಹೆಲ್ಡ್ ಮತ್ತು ಅಂಥನಿ ಮ್ಯಾಗ್ರ್ಯೂರಂತಹ ಅನುಕೂಲ ಸಿಂಧುಗಳಿಗೆ ಜಾಗತೀಕರಣದ ಸಂರಚನೆಯಲ್ಲೇ ಅಡಗಿರುವ ಅಧಿಕಾರ ವಿಷಮತೆಗಳು ಕಾಣುವುದಿಲ್ಲ. ಜಾಗತಿಕ ವಿನಿಮಯಗಳ ಸಂವರ್ಧನೆಯ ಚುಕ್ಕಾಣಿ ಯಾರ ಕೈಯಲ್ಲಿದೆ ಎಂಬುದರ ಬಗ್ಗೆ ಅವರು ಚಕಾರವೆತ್ತುವುದಿಲ್ಲ. ಅಧಿಕಾರದ ಕೇಂದ್ರಸ್ಥಾನದಲ್ಲಿರುವ ಆಧುನಿಕ ಪಾಶ್ಚಾತ್ಯ ಮೇಲ್ವರ್ಗ ಜಗತ್ತಿನ ಇತರ ಸಾಮಾನ್ಯ ವರ್ಗದ ಮೇಲೆ ತನ್ನ ಹಿಡಿತವನ್ನೂ ಶೋಷಣೆಯನ್ನೂ ಮುಂದುವರಿಸುವ ಸಾಧನವೇ ಜಾಗತೀಕರಣ ಎಂಬುದನ್ನು ಧೃಡಪಡಿಸಲು ಕೆಳಗೆ ಕಾಣಿಸಿರುವ ಸಂಗತಿಗಳೇ ಸಾಕು:

**೧. ಆರ್ಥಿಕ ಜಾಗತೀಕರಣ:** ಈ ಪ್ರಪಂಚದಲ್ಲಿ ೬೫,೦೦೦ ಬಹುರಾಷ್ಟ್ರೀಯ ಕಂಪನಿಗಳು ಮತ್ತು ೮,೬೦,೦೦೦ ಸಹಚರಿ ಕಂಪನಿಗಳಿದ್ದರೂ ಅವುಗಳಲ್ಲಿ 'ಭಾರಿ ತಿಮಿಂಗಿಲ'ಗಳೆಂದರೆ ಸುಮಾರು ೨೦೦ ಕಂಪನಿಗಳು. ಇವುಗಳ ಒಟ್ಟು ವಹಿವಾಟು ಜಗತ್ತಿನ ಅತಿ ಶ್ರೀಮಂತ ೯ ರಾಷ್ಟ್ರಗಳನ್ನು ಬಿಟ್ಟು, ಉಳಿದೆಲ್ಲಾ ರಾಷ್ಟ್ರಗಳ ಒಟ್ಟಾರೆ ವಹಿವಾಟಿಗಿಂತ ಹೆಚ್ಚಿಗೆ ಇದೆ. ಈ ೨೦೦ ದೈತ್ಯ ಕಂಪನಿಗಳ ಪ್ರಧಾನ ಕಚೇರಿಗಳಿರುವುದು ಜಗತ್ತಿನ ಎಂಟು ಶ್ರೀಮಂತ ದೇಶಗಳಲ್ಲಿ. ಹೀಗಾಗಿ ೧೯೭೨ ರಿಂದ ೧೯೫ರವರೆಗೆ ನಡೆದ ವಹಿವಾಟಿನಲ್ಲಿ ಬಡರಾಷ್ಟ್ರಗಳಿಂದ ಶ್ರೀಮಂತ ರಾಷ್ಟ್ರಗಳಿಗೆ ಹರಿದು ಹೋದ ಹಣ ಸರಿ ಸುಮಾರು ೪.೫ ಲಕ್ಷ ಕೋಟಿ ಡಾಲರುಗಳು. ೧೯೦ರಿಂದ ೧೯೮ರ ಅವಧಿಯಲ್ಲಿ ಕೇವಲ ಲ್ಯಾಟಿನ್ ಅಮೆರಿಕದ ಬಡ ರಾಷ್ಟ್ರಗಳಿಂದ ಯೂರೋಪ್ ಮತ್ತು ಅಮೆರಿಕಾಕ್ಕೆ ಹರಿದ ಹಣ ಸರಿಸುಮಾರು ೭೦೦೦ ಕೋಟಿ ಡಾಲರುಗಳು.

**೨. ಸಾಂಸ್ಕೃತಿಕ ಜಾಗತೀಕರಣ:** ಜಾಗತೀಕರಣದ ಮುಖ್ಯ ಪ್ರತಿನಿಧಿಯೆಂದು ಬಿಂಬಿತವಾಗಿರುವ 'ಜಾಗತಿಕ ಮಾಧ್ಯಮ' ಸಂಸ್ಥೆಗಳ ಹಿಡಿತ ಇರುವುದು ನೂರಕ್ಕಿಂತಲೂ ಕಡಿಮೆ ಕಂಪನಿಗಳ ಕೈಯಲ್ಲಿ. ೬೮ ಪ್ರತಿಶತದಷ್ಟು ಕಾರ್ಯಕ್ರಮಗಳನ್ನು ರಫ್ತು ಮಾಡುವ ಅಮೇರಿಕ ಈ ವಹಿವಾಟಿನ ಪ್ರಥಮ ಸ್ಥಾನದಲ್ಲಿದೆ. ದೂರದ ಎರಡನೆಯ ಸ್ಥಾನ ಕೇವಲ ೯ ಪ್ರತಿಶತದಷ್ಟು ರಫ್ತುಮಾಡುವ ಬ್ರಿಟನ್ನಿನದು. ಹಾಗಿದ್ದೂ ಬ್ರಿಟನ್ನಿನ ರಫ್ತು ಮೂರನೆಯ ಸ್ಥಾನದ ಫ್ರಾನ್ಸ್ ಮತ್ತು ಆಸ್ಟ್ರೇಲಿಯಾದ ಮೂರರಷ್ಟಿದೆ! ಈ ಸಾಂಸ್ಕೃತಿಕ ಕಾರ್ಯಕ್ರಮಗಳ ರಫ್ತು ಅಮೇರಿಕಕ್ಕೆ ಪ್ರತಿವರ್ಷ ೧೧೦ ಕೋಟಿ ಡಾಲರಿನ ಆದಾಯ ಒದಗಿಸಿದರೆ ಬ್ರಿಟನ್ನಿಗೆ ೧೧.೬ ಕೋಟಿ ಪೌಂಡ್ ಆದಾಯ ಒದಗಿಸುತ್ತದೆ.

**೩. ರಾಜಕೀಯ ಜಾಗತೀಕರಣ:** ಜಿ–೮ ರಿಂದ ಹಿಡಿದು WTO (ವಿಶ್ವ ವ್ಯಾಪಾರ ಸಂಸ್ಥೆ)ಯವರೆಗಿನ ಎಲ್ಲ ಜಾಗತಿಕ ಸಂಸ್ಥೆಗಳೂ ಅಮೆರಿಕದ ಪಾಳೇಗಾರಿಕೆಯನ್ನು ಬಲಪಡಿಸಲೆಂದೇ ಸೃಷ್ಟಿಯಾದವು; ಅವು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿವೆ. ಇನ್ನು NATO ಎಂಬ ಯೂರೋ–ಅಮೆರಿಕದ ಜಂಟಿ ಸೈನ್ಯ ಅಮೆರಿಕವನ್ನು ಜಗತ್ತಿನ ಪೋಲೀಸನನ್ನಾಗಿ ಪರಿವರ್ತಿಸಿವೆ.

ಇಂತಹ ಪರಿಸ್ಥಿತಿಯಲ್ಲಿ ಜಾಗತೀಕರಣದ ಬಗ್ಗೆ ಹಾಡಿಹೊಗಳಲು ಉಳಿದಿರುವುದಾದರೂ ಏನು?

**(ಕನ್ನಡಕ್ಕೆ : ಎಂ.ಆರ್. ರಾಮಶೇಷ)**

# ಬರಲಿದೆಯಂತೆ ಕರ್ನಾಟಕ ಆರೋಗ್ಯ ವ್ಯವಸ್ಥೆ ಆಯೋಗ !



**ಬೆ**ಳ್ಳಂಬೆಳಿಗ್ಗೆ ಹಾಲು ತರಲು ಹೊರಡಲು ಅನುವಾಗುತ್ತಿದ್ದೆ. 'ಅಕ್ಕ' ಎಂಬ ಕೂಗು ಕೇಳಿಬಂತು. ಯಾರಪ್ಪಾ ಈ ತಮ್ಮ ಎಂದು ಬಾಗಿಲು ತೆರೆದರೆ, ಹದಿಹರೆಯದ ಹುಡುಗನೊಬ್ಬ ಕಣ್ಣುಜ್ಜಿಕೊಳ್ಳುತ್ತಾ ನಿಂತಿದ್ದ. ಕೈಯಲ್ಲಿ ಒಂದು ಕತ್ತಿ ಇತ್ತು! ಗಾಬರಿಯಿಂದ 'ಏನಪ್ಪಾ?' ಎಂದೆ. 'ಏನಾರ ಕೆಲಸ ಕೊಡಿ' ಎಂದ. ಮನೆಯ ಎರಡೂ ಇಕ್ಕೆಲಗಳಲ್ಲಿ ಒಣಗಿದ್ದ ತರಗೆಲೆಗಳಿಂದ ಮೋರಿ ತುಂಬಿ ಹೋಗಿತ್ತು. ಆಸುಪಾಸಿನಲ್ಲಿ ಕಳೆ ದಟ್ಟವಾಗಿ ಬೆಳೆದಿತ್ತು. "ಇದನ್ನೆಲ್ಲ ಕ್ಲೀನ್ ಮಾಡಿ ಬೆಂಕಿ ಹಾಕಬೇಕು. ಕೂಲಿ ಎಷ್ಟು ಕೊಡಬೇಕು?' ಎಂದೂ ಕೇಳಿದೆ.

ಅವನು ಕಣ್ಣುಜ್ಜಿಕೊಳ್ಳುತ್ತಾ, ಒಮ್ಮೆ ಜೋಲಿ ಹೊಡೆದು ಉಗ್ಗುತ್ತಾ 'ಇದೆಲ್ಲ ನನ್ನ ಕೈಲಿ ಆಗೊಲ್ಲ, ಬೇಕಾದ್ರೆ ಮರ ಕಡೀತೀನಿ!' ಅಂದ. ಸೊಂಪಾಗಿ ಬೆಳೆದ ಹೊಂಗೆ ಮರದ ನೆರಳಿನಲ್ಲಿ ನಿಂತು ಇಂತಹ ಮಾತಾಡಬಹುದೇ? ನನಗೆ ರೇಗಿ ಹೋಯಿತು. 'ಯಾಕಪ್ಪಾ ನನ್ನ ಮನೆ ಮುಂದಿನ ಮರ ನಿನಗೇನು ಕಷ್ಟ ಕೊಟ್ಟಿದೆ? ಮುಂದೆ ನಡಿ.' ಎಂದೆ. 'ಮರ ಅಂದ್ರೆ ಇಡೀ ಮರ ಅಲ್ಲ. ಜೋತು ಬಿದ್ದಿದ್ದಾವಲ್ಲಾ ಒಂದೆರಡು ರೆಂಬೆ ಕೊಂಬೆಗಳನ್ನ ಕಡಿದ್ರೆ ಮತ್ತೆ ಚೆನ್ನಾಗಿ ಚಿಗುರ್ತಾವೆ' ಅಂದ. ಒಂದು ಚಿಕ್ಕ ಕೊಂಬೆ ರಸ್ತೆಗೆ ಚಾಚಿ ನಿಂತಿತ್ತು. ಅದನ್ನು ಬೇಕಾದ್ರೆ ಕಡಿದು ಹಾಕು. ಆಮೇಲೆ ಕಳೆ ಕಿತ್ತು ಹಾಕು. ಎಷ್ಟು ಕೊಡಬೇಕು ಹೇಳು ಅಂದೆ. ಅಷ್ಟೋ ಇಷ್ಟೋ ಕೊಡಿ ಅಂದ. ಅಬ್ಬಬ್ಬಾ ಅಂದರೆ ಅರ್ಧ ತಾಸಿನ ಕೆಲಸ. ಐವತ್ತು ರೂಪಾಯಿ ಕೊಡ್ತೀನಿ. ಮನಸ್ಸಿದ್ರೆ ಮಾಡು. ಇಲ್ಲಾಂದ್ರೆ ಬಿಡು ಅಂದೆ.

ಅವನು ರಸ್ತೆಗೆ ಚಾಚಿದ್ದ ಕೊಂಬೆ ಮುಟ್ಟಿ ನೋಡಿ ನನ್ನ ಕತ್ತಿ ಸರಿ ಇಲ್ಲ. ಕೊಡ್ಲಿನೇ ಬೇಕು ಅನ್ನುತ್ತಾ ಎರಡು ಪುಟ್ಟ ರೆಂಬೆ ಸವರಿ, ನಾನು ಯಾವತ್ತೂ ಕಳೆ ಕಿತ್ತೋನಲ್ಲ. ನಂದೇನಿದ್ರೂ ಮರ ಕಡಿಯೋ ಕೆಲಸ ಅನ್ನುತ್ತಾ ಆಯ್ತಲ್ಲ, ರೆಂಬೆ ಸವರಿದ್ದೀನಿ. ನೂರು ರೂಪಾಯಿ ಕೊಡಿ ಅಂದ. ನೀನು ಮಾಡಿರೋ ಎರಡು ನಿಮಿಷದ ಕೆಲಸಕ್ಕೆ ನೂರು ರೂಪಾಯಿ ಏನು, ಹತ್ತು ರೂಪಾಯಿ ಕೂಡ ಕೊಡಕ್ಕೆ ಸಾಧ್ಯವಿಲ್ಲ. ಕಳೆ ಕಿತ್ತು ಕೊಂಬೆ ಸವರಿದರೆ ಮಾತ್ರ, ಅದೂ ಐವತ್ತು ರೂಪಾಯಿ ಕೊಡೋದು. ಬೆಳಬೆಳಿಗ್ಗೆ ತಲೆ ತೆಗೀಬೇಡ ಅಂದೆ. ಏನು ಜನಾನೋ ಕೆಲಸ ಮಾಡ್ಸಿಕೊಳ್ತಾರೆ ಕಾಸು ಬಿಚ್ಚೊಲ್ಲಾ ಎಂದು ನನ್ನನ್ನೇ ದೂಷಿಸುತ್ತಾ ಮತ್ತೊಂದು ಎಳೆಯ ರೆಂಬೆಗೆ ಕತ್ತಿ ಬೀಸಿದ. ಬೀಸಿದ್ದೇ ಅಲ್ಲಿಯೇ ಕುಸಿದು ಕುಳಿತ.

ನನಗೆ ಭಯವಾಯಿತು. ರಾತ್ರಿಯಿಂದ ಏನೂ ತಿಂದಿಲ್ಲವೇನೋ, ಹಸಿವಿನಿಂದ ಬಳಲಿ ಕುಸಿದಿರುವನೇನೋ ಏನೋ ಅಂದುಕೊಳ್ಳುತ್ತಾ ಒಂದಿಷ್ಟು ನೀರು ಕುಡಿಯಲು ಕೊಡೋಣ ಎಂದು ನೀರು ತರಲು ಒಳಗೆ ಹೋದೆ. ನಾನು ನೀರು-ಬೆಲ್ಲ ಹಿಡಿದುಕೊಂಡು ಹೊರ ಬರುವಷ್ಟರಲ್ಲಿ ಮನೆಗೆಲಸದ ಮಂಜಮ್ಮ ಹಾಜರಾಗಿ 'ಯಾರಮ್ಮಾ ಈಯಪ್ಪ, ಇಂಗೇಕೆ ಮಕ ಮುಚ್ಚಿ ಮನೆ ಮುಂದೆ ಕುಳಿತವನೆ?' ಎಂದು ಕೇಳಿದಳು. ಮೊದಲು ನೀರು ಬೆಲ್ಲ ಕೊಡು. ನಿಶ್ಶಕ್ತಿಯಿಂದ ಕುಸಿದು ಕೂತವನೆ ಎಂದೆ. ನಾನು ಮಾತು ಮುಗಿಸುವಷ್ಟರಲ್ಲಿ ಕೂತವನು ಜೋಲಿ ಹೊಡೆಯುತ್ತಾ ಎದ್ದು-ಕೂತು ನೂರು ರೂಪಾಯಿ ಕೊಡ್ತೀರೋ ಇಲ್ವೋ ಎಂದು ಮತ್ತೆ ಎಳೆಯ ರೆಂಬೆಗೆ ಕತ್ತಿ ಬೀಸಿದ. ಆ ಎಳೆಯ ರೆಂಬೆ ಅವನ ಕತ್ತಿ ಬೀಸನ್ನು ತಪ್ಪಿಸಿಕೊಂಡು ಅಚೀಚೆ ತೂಗಾಡಿತು. ಮಂಜಮ್ಮ ಸೂಕ್ಷ್ಮವಾಗಿ ಅವನನ್ನು ಅವಲೋಕಿಸಿ 'ತುಂಬಾ ಕುಡಿದುಬಿಟ್ಟವನೆ, ಅದಕ್ಕೇ ಜೋಲಿ ಹೊಡಿತಾವ್ನೆ. ಎದ್ದೇಟಿಗೆ ಕುಡಿದು ಬಂದವನೆ. ಇವನು ಮರ ಕಡಿಯೋದು ಅಷ್ಟರಲ್ಲೇ ಅದೆ. ರೆಂಬೆ ಕೊಂಬೆ ನಾನೇ ಸವರಿ ಹಾಕ್ತೀನಿ. ರೆಂಬೆ ಕಡಿಯೋಕೆ ಇವನಿಗೆ ಕತ್ತಿ ಬೇರೆ ಕೇಡು' ಎಂದು ಕೈಯಿಂದಲೇ ರೆಂಬೆಯನ್ನು ಲಟ ಲಟ ಮುರಿದು ಹಾಕಿದಳು.

ಅವನು ನಿಧಾನವಾಗಿ ಸಾವರಿಸಿಕೊಂಡು ಕೂತಲ್ಲಿಂದಲೇ ನೂರು ರೂಪಾಯಿ ಎಂದ. ಇವನು ಬಿಡೋ ಹಾಗೆ ಕಾಣಲ್ಲ. ಏನು ಮಾಡಲಿ ಎಂದು ಮಂಜಮ್ಮನನ್ನು ಕೇಳಿದೆ.



ಇಪ್ಪತ್ತು ರೂಪಾಯಿ ಕೊಟ್ಟು ಕಳಿಸಿ. ಅದೂ ಜಾಸ್ತೀನೇ ಎಂದು ಮೂತಿ ತಿರುವಿದಳು. ಸರಿ ಎಂದು ನಾನು ದುಡ್ಡು ತರಲು ಒಳಹೋದೆ. ಹೋಗಿ ಬರುವಷ್ಟರಲ್ಲಿ ಅವನು ಎದ್ದು ನಿಂತಿದ್ದು, ಜೇಬಿಂದ ಗುಟ್ಕಾ ಸರವನ್ನು ಎಳೆದು ಹಲ್ಲಿನಿಂದ ಅದರ ಪಾಕೀಟು ಕಚ್ಚತೊಡಗಿದ. ಎಷ್ಟು ಕಚ್ಚಿದರೂ ಉಗುರಿನಿಂದ ಸೀಳಿದರೂ ಅದು ತೆರೆದುಕೊಳ್ಳದಿರಲು 'ಅಕ್ಕ ಯಾಕೋ ಬರ್ತಿಲ್ಲ ನೀವೇ ಓಪನ್ ಮಾಡಿಕೊಡಿ' ಎಂದು ನನ್ನನ್ನು ಕೇಳುವುದೇ? ಮಂಜಮ್ಮನಿಗೆ ಸಿಟ್ಟು ಬಂದು, ಕೈಯ್ನಾಗೆ ಕತ್ತಿ ಹಿಡ್ಕೊಂಡು ಹೆಮ್ಮಕ್ಕಳಿಗೆ ಕೇಳ್ತೀಯಲ್ಲಾ, ಬುದ್ದಿ ಗಿದ್ದಿ ಐತಾ ಎಂದು ಬೈದಳು. ಅರ್ಧ ಅಡಿ ಗುಂಡಿ ತೋಡಿದರೆ ಗವರಮೆಂಟವರು ಅರವತ್ತು ರೂಪಾಯಿ ಕೊಡ್ತಾರೆ. ಅದಕ್ಕೇ ಈ ಹುಡುಗ್ರು ಹಿಂಗಾಗವರೆ... ಇವನ ಹತ್ತರ ಏನು ಮಾತು ಎಂದು ಅವನ ಕೈಗೆ ಇಪ್ಪತ್ತು ರೂಪಾಯಿ ಬಡಿದು ನನ್ನನ್ನು ಒಳಗೆ ತಳ್ಳಿದಳು.

'ನರೇಗಾ' ಫಲಾನುಭವಿಗಳಲ್ಲಿ ಇವನೂ ಒಬ್ಬನಿರಬೇಕು ಎಂದುಕೊಳ್ಳುತ್ತಾ ನಾನು ಅಲ್ಲೆ ಬಿದ್ದಿದ್ದ ಅವನನ್ನು ದಾಟಿಕೊಂಡು ಹಾಲು ತರಲು ಹೊರಟೆ. ಹಾಲಿನ ಅಂಗಡಿಯಲ್ಲಿ ನನ್ನ ಸರದಿಗಾಗಿ ಕಾದು ನಿಂತೆ. ಒಬ್ಬ ಕಣ್ಣುಜ್ಜಿಕೊಳ್ಳುತ್ತಾ ಬಂದವನೇ ಒಂದು ಸಿಗರೇಟು ಇಸಿದುಕೊಂಡು ಹಚ್ಚಿ ಒಂದು ಗುಟ್ಕಾ ಮಾಲೆಯನ್ನೇ ಕೊಂಡ! ಚಿಲ್ಲರೆ ಕಮ್ಮಿ ಬೀಳಲು ಅರ್ಧ ಲೀಟರಿನ ಕೆಂಪು ಹಾಲಿನ ಪಾಕೆಟು ವಾಪಸ್ ನೀಡಿ ಹನ್ನೆರಡು ರೂಪಾಯಿಯ ನೀರು ಹಾಲು ಕೊಂಡ! ನಾನು ಹಾಲು ಕೊಂಡು ಪಕ್ಕದ ರಸ್ತೆಗೆ ತಿರುಗಿದರೆ, ಹಂಸಗಳು ಸರೋವರದಲ್ಲಿ ಈಜಾಡಿದಂತೆ ಪ್ಲಾಸ್ಟಿಕ್ ಚೀಲಗಳಿಂದ ತುಂಬಿದ ಖಾಲಿ ನಿವೇಶನದಲ್ಲಿ ಹಂದಿಗಳು ಈಜಾಡುತ್ತಿದ್ದವು. ಬಣ್ಣ ಬಣ್ಣದ ಗುಟ್ಕಾ ಖಾಲಿ ಪಾಕೀಟುಗಳು, ಮದ್ಯದ ಖಾಲಿ ಸೀಸೆಗಳು, ಸಿರಿಂಜುಗಳು, ಹಳೇ ಔಷಧ ಸಾಮಗ್ರಿಗಳು, ಕುರಕಲು ತಿಂಡಿಗಳ ಬಣ್ಣಬಣ್ಣಗಳ ಖಾಲಿ ಪಾಕೀಟುಗಳು, ತಂಪು ಪಾನೀಯಗಳ ಪುಟ್ಟ ಡಬ್ಬಗಳು, ಹರಿದ ಬಟ್ಟೆಯ ಗಂಟುಗಳು, ತ್ಯಾಜ್ಯ ವಸ್ತುಗಳಿಂದ ತುಂಬಿದ್ದ ಪ್ಲಾಸ್ಟಿಕ್ ಚೀಲಗಳು ರಾಶಿ ಬಿದ್ದಿದ್ದವು. ನೀರಿನ ಬಾಟಲಿಗಳಂತೂ ಕೊಳಚೆ ತುಂಬಿದ ಮೋರಿಯಲ್ಲಿ ನಿಂತ ನೀರಿನಲ್ಲಿ ತೇಲುತ್ತಿದ್ದವು.

ನೀವು ನಂಬುತ್ತೀರೋ ಇಲ್ಲವೋ, ನಮ್ಮ ಬಡಾವಣೆಯ ಎರಡು ಕಿ.ಮೀ. ಆಸುಪಾಸಿನಲ್ಲಿ ಹತ್ತು ನರ್ಸಿಂಗ್ ಹೋಂಗಳು, ಇಪ್ಪತ್ತು ಔಷಧಿ ಅಂಗಡಿಗಳೂ ಇವೆ. ಹೋಮಿಯೋಪತಿ, ನ್ಯಾಚುರೋಪತಿ, ಅಲೋಪತಿ, ಆಯುರ್ವೇದ ಹೀಗೆ ಬಗೆ ಬಗೆಯ ಚಿಕಿತ್ಸಾಲಯಗಳೂ ಇವೆ. ಹಾಗೇ ಸರ್ವಾಂಗಗಳ ಸ್ಪೆಶಲಿಸ್ಟ್‌ಗಳೂ ಇರುವರು. ನಾಟಿ-ಘಾಟಿ ವೈದ್ಯರೂ ಇರುವರು. ಇದು ಸಾಲದು ಎಂದು ಕೈಮೀರಿದ ರೋಗಗಳ ಇಲಾಜಿಗೆ ಹರಕೆ ಹೊರಲು ಏಳೆಂಟು ದೇಗುಲಗಳೂ ಇವೆ. ಅಲ್ಲದೆ, ಜ್ಯೋತಿಷ್ಯಾಲಯ, ಯೋಗ ಮಂದಿರಗಳೂ, 'ಜಿಂ'ಗಳೂ ಇವೆ. ಜೊತೆಗೆ ಸ್ವಲ್ಪ ದೂರದಲ್ಲೇ ಮನೋ ವೈದ್ಯಾಲಯಗಳೂ! ಗಣ್ಯರು ಅತಿ ಗಣ್ಯರು ವಾಸಿಸುವ ಈ ಬಡಾವಣೆಯಲ್ಲಿ ಲಭ್ಯವಿರುವ ಆರೋಗ್ಯಕ್ಕೆ ಸಂಬಂಧಪಟ್ಟ ಈ ಸೌಲಭ್ಯಗಳಿಗಾಗಿ ಹೆಮ್ಮೆ ಪಡಬೇಕೋ ಅಥವಾ ನಮ್ಮ ಜನ ಇಷ್ಟೇಕೆ ಅನಾರೋಗ್ಯ ಪೀಡಿತರಾಗಿದ್ದಾರೆಂದು ವಿಷಾದ ಪಡಬೇಕೋ ತೋಚದೆ ಮನೆ ತಲುಪಿದೆ.

ಬಾಗಿಲಲ್ಲೇ ಪತ್ರಿಕೆ ಬಿದ್ದಿತ್ತು. ದಿನದ ವ್ಯಂಗ್ಯಚಿತ್ರಕ್ಕಾಗಿ ಹುಡುಕಿದೆ. ಏಕೋ ಅಂದು ಆ ಜಾಗದಲ್ಲಿ ಸರ್ಕಾರ 'ಕರ್ನಾಟಕ ಆರೋಗ್ಯ ವ್ಯವಸ್ಥೆ ಆಯೋಗ' ರಚಿಸಿದ ಸುದ್ದಿ ಇತ್ತು. ತಕ್ಷಣ ಏಕೋ ನಗು ಬಂದಿತಾದರೂ ಮರುಕ್ಷಣವೇ ವಿಷಾದ ಮನಸ್ಸನ್ನು ಮುತ್ತಿತು.ಸ್ವಲ್ಪ ಹಗುರಾಗೋಣ ಎಂದು ಕಿಟಕಿಯಲ್ಲಿ ಕಣ್ಣು ಹಾಕಿ ಕೂತೆ. ಬೆಕ್ಕಿನ ಮರಿಗಳೆರಡು ಬೆಳಗಿನ ಬಿಸಿಲಲ್ಲಿ ಚಿನ್ನಾಟವಾಡುತ್ತಿದ್ದವು. ಸುಮ್ಮನೆ ನೋಡುತ್ತ ಕೂತೆ

**-ಸವಿತಾ ನಾಗಭೂಷಣ**

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ-೧

–ಇಂದಿರಾ ಬಿ. ಕೃಷ್ಣಪ್ಪ



**ಡಿಸೆಂಬರ್ ಎಂದರೆ ಡಾ. ಅಂಬೇಡ್ಕರ್‌ರ ಪರಿನಿರ್ವಾಣ ದಿನದ ತಿಂಗಳು. ಹಾಗಾಗಿ ಇದು ಅಂಬೇಡ್ಕರ್ ನೆನಪಿನ ತಿಂಗಳೂ ಹೌದು. ನಾವು ಈ ಸಂಚಿಕೆಯಲ್ಲಿ ಈ ನೆನಪನ್ನು ಪರೋಕ್ಷವಾಗಿ, ಕರ್ನಾಟಕದಲ್ಲಿ ಅಂಬೇಡ್ಕರರ ನೆನಪನ್ನು ದಲಿತ ಚಳುವಳಿಯನ್ನು ಕಟ್ಟುವ ಮೂಲಕ ಕ್ರಿಯಾಶೀಲಗೊಳಿಸಿದ ಅದರ ಮುಂಚೂಣಿ ನಾಯಕರಲ್ಲೊಬ್ಬರಾದ ಪ್ರೊ. ಬಿ. ಕೃಷ್ಣಪ್ಪನವರ ಆತ್ಮೀಯ ಜೀವನ ಚಿತ್ರವನ್ನು ಕಟ್ಟಿಕೊಡುವ ಲೇಖನ ಮಾಲೆಯೊಂದನ್ನು ಆರಂಭಿಸುವ ಮೂಲಕ ದಾಖಲಿಸುತ್ತಿದ್ದೇವೆ.**

**ಕೃಷ್ಣಪ್ಪನರನ್ನು ಪ್ರೇಮಿಸಿ ಕೈಹಿಡಿದು ಅವರ ವೈಯುಕ್ತಿಕ ಮತ್ತು ಹೋರಾಟದ ಬದುಕಿಗೆ ಆಸರೆಯಾಗಿ ನಿಂತ ಅವರ ಪತ್ನಿ ಶ್ರೀಮತಿ ಇಂದಿರಾ ಬಿ. ಕೃಷ್ಣಪ್ಪ ಅವರು ಈ ಲೇಖನ ಮಾಲೆಯಲ್ಲಿ ತಮ್ಮ ದಿವಂಗತ ಪತಿಯ ಆಪ್ತ ಚಿತ್ರವೊಂದನ್ನು ಕಟ್ಟಿಕೊಡುತ್ತಿದ್ದಾರೆ.**–ಸಂ.

**ಪ್ರೊ.** ಬಿ. ಕೃಷ್ಣಪ್ಪನವರನ್ನು ಕುರಿತು ಬರೆಯುವುದೆಂದರೆ ಸಾಹಸಿ ಈಜುಗಾರ ಸಾಗರದಲ್ಲಿ ಮುಳುಗಿ ಮುತ್ತಿನ ಚಿಪ್ಪುಗಳನ್ನಾಯ್ದು, ಅದರೊಳಗಿನ ಮುತ್ತನ್ನು ಹೊರ ತೆಗೆಯುವ ಕಸುಬಿನಷ್ಟೇ ಕಠಿಣವಾದ ಮತ್ತು ಕೌಶಲ್ಯದ ಕೆಲಸ. ಅಂಥಹ ಒಂದು ಪ್ರಯತ್ನ ಇಲ್ಲಿದೆ.

ನಾನು ಒಬ್ಬ ವಿದ್ಯಾರ್ಥಿಯಾಗಿ, ಕೃಷ್ಣಪ್ಪನವರನ್ನು ಒಬ್ಬ ಅಧ್ಯಾಪಕನಾಗಿ ಮೊದಲು ಕಂಡದ್ದು ಭದ್ರಾವತಿಯ ಭದ್ರಾ ಕಾಲೇಜಿನಲ್ಲಿ. ೧೯೬೯– ೭೦ನೇ ಸಾಲಿನಲ್ಲಿ. ಭದ್ರಾವತಿಯ ನಾಗರೀಕರೆಲ್ಲರೂ ಸೇರಿ ಭದ್ರಾವತಿಯಲ್ಲಿ 'ಭದ್ರಾ ಕಾಲೇಜು' ಎಂಬ ಒಂದು ಪದವಿ ಕಾಲೇಜನ್ನು ಪ್ರಾರಂಭಿಸಿದ್ದರು. ಅದೀಗ ಬೆಳೆದು ಸರ್ ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜುಗಳಾಗಿವೆ) ಆದಾಗ ತಾನೇ ಪಿ.ಯು.ಸಿ. ಮುಗಿಸಿದ ನಾನು ನನ್ನ ತಂದೆಯನ್ನು ಕಾಡಿ ಬೇಡಿ, ಅತ್ತು ಕರೆದು ಆ ಪದವಿ ಕಾಲೇಜಿಗೆ ಸೇರಿದ್ದೆ.

ಕಾಲೇಜು ಪ್ರಾರಂಭವಾಗಿ ಒಂದೆರಡು ತಿಂಗಳುಗಳಾಗಿರಬಹುದು ಆಗ ಒಂದು ದಿನ ಕನ್ನಡ ಪಿರಿಯಡ್‌ನಲ್ಲಿ ಪ್ರಿನ್ಸಿಪಾಲರಾಗಿದ್ದ ಆರ. ಬಿ.ನಾಯಕರು ನಮ್ಮ ವಿಭಾಗಕ್ಕೆ ಒಬ್ಬರನ್ನು ಕರೆತಂದು, "ಇವರು ಬಿ. ಕೃಷ್ಣಪ್ಪ. ಕನ್ನಡ ವಿಷಯವನ್ನು ತೆಗೆದುಕೊಳ್ಳುವರು" ಎಂದು ಪರಿಚಯಿಸಿದರು. ಆಗ ಕೃಷ್ಣಪ್ಪನವರನ್ನು ಒಬ್ಬ ಸಾಮಾನ್ಯ ವಿದ್ಯಾರ್ಥಿ ಅಧ್ಯಾಪಕನೊಬ್ಬನನ್ನು ಕಾಣುವ ದೃಷ್ಟಿಯಲ್ಲಿ ಕಂಡಿದ್ದೆ. ಅವರ ಠಾಕುಠೀಕಿನ ನಡಿಗೆ, ಬೋಧನಾ ಕ್ರಮ, ವಿದ್ವತ್ಪೂರ್ಣ ಪಾಠಗಳು, ಸಮಯ ಪರಿಪಾಲನೆ ಇವುಗಳಲ್ಲಿ ಅವರಿಗಿದ್ದ ಶಿಸ್ತು ಹಾಗೂ ಬದ್ಧತೆ ನನ್ನನ್ನು ಸೆಳೆದವು. ಮಕ್ಕಳು ಓದಲು ಬವಣೆ ಪಡುತ್ತಿರುವುದನ್ನು ಗಮನಿಸಿ ಆಗ ಅವರು ಪ್ರಾರಂಭಿಸಿದ್ದೇ 'Poor Boys Fund'. ಇದರಿಂದ ಧನಸಹಾಯ ಪಡೆದು, ಅನೇಕ ಬಡ ವಿದ್ಯಾರ್ಥಿಗಳು ಓದು ಮುಂದುವರಿಸಿದ್ದರು.

ಇಂಥಹ ಅಧ್ಯಾಪಕನೊಬ್ಬನನ್ನು ಜಾತಿಯ ಕಾರಣದಿಂದು ಕೆಲಸದಿಂದ ತೆಗೆದು ಹಾಕಲು ನಡೆಯುತ್ತಿದ್ದ ಪುರೋಹಿತಶಾಹಿಯ ಪಿತೂರಿ ಸುದ್ದಿಯ ರೂಪದಲ್ಲಿ ನನ್ನ ಕಿವಿಯನ್ನೂ ತಲುಪಿತ್ತು. ಜೊತೆಗೆ, ಕೃಷ್ಣಪ್ಪ ತಂದೆ ತಾಯಿ ಎಲ್ಲರನ್ನೂ ಬಿಟ್ಟು ಬಂದಿದ್ದಾರೆ; ಅವರಿಗೆ ಯಾರೂ ಇಲ್ಲ ಎಂಬ ಗಾಳಿಸುದ್ದಿಗಳು ಹರಡುತ್ತಿದ್ದವು. ಅವುಗಳೆಲ್ಲದರ ಒಟ್ಟಂದವಾಗಿ ಅವರ ಬಗ್ಗೆ ಅನುಕಂಪ ಮಿಶ್ರಿತ ಪ್ರೀತಿ, ಸ್ಪಂದನೆಗಳು ನನ್ನಲ್ಲಿ ಮೂಡಲಾರಂಭಿಸಿತ್ತು. ಹೀಗೆ ಒಲವು ನಮ್ಮಿಬ್ಬರಲ್ಲಿ ಮೂಡುತ್ತಿದ್ದ ಆ ದಿನಗಳಲ್ಲಿ, ಬಿ.ಕೆ. ಯವರು ಕಾಲೇಜಿನ ತಿಚಿಟುಜುಭಿಣಿಂಡಿಥಿ ಜಿಣಾಟಿಭಿಣುಠಿಟಿನಲ್ಲಿ ಪು.ತಿ.ನ. ಅವರ 'ಶಬರಿ' ಗೀತನಾಟಕವನ್ನು ನನಗಾಗಿ ನಿರ್ದೇಸಿದ್ದರು.'"ಕಾದಿರುವಳು ಶಬರಿ ರಾಮ ಬರುವನೆಂದು, ತನ್ನ ಪೂಜೆಗೊಳ್ಳುವನೆಂದು," ಎಂಬ ಕವನದೊಂದಿಗೆ ಪ್ರಾರಂಭವಾಗುವ ಈ ನಾಟಕದಲ್ಲಿ ನನ್ನದು ಶಬರಿಯ ಪಾತ್ರ. ಬಹಳ ಪ್ರಶಂಸೆಗೂ, ಚರ್ಚೆಗೂ ಒಳಗಾದ ಪ್ರದರ್ಶನವದು. ಈಗ ನಾನು ಆ ಸನ್ನಿವೇಶವನ್ನು ಮೆಲುಕು ಹಾಕಿದರೆ ಕೃಷ್ಣಪ್ಪ, ನನ್ನನ್ನು ಏಕೆ ಶಬರಿಯ ಪಾತ್ರದಲ್ಲಿ ನೋಡಲಿಕ್ಕೆ ಇಚ್ಛಿಸಿದರು? ಪ್ರೀತಿಯ ಬಳ್ಳಿ ಹಬ್ಬುತ್ತಿದ್ದ ಆ ದಿನಗಳಲ್ಲಿ ನಾನು ಅವರಿಗೆ ಶಕುಂತಲೆಯೋ, ಮೇನಕೆಯೋ ಅಥವಾ ರಾಧೆಯೋ ಆಗಿ ಏಕೆ ಕಂಡು ಬರಲಿಲ್ಲ? ಶಬರಿಯ ರೂಪದಲ್ಲಿ ಆ ಪಾತ್ರದಲ್ಲಿ ನನ್ನನ್ನು ನೋಡ ಬಯಸಿದ್ದೇಕೆ? ಎಂಬ ಹತ್ತಾರು ಪ್ರಶ್ನೆಗಳು ಏಳುತ್ತವೆ. ಹಾಗೆಯೇ ಅವರ ಜೀವನದ ವಿವಿಧ ಘಟ್ಟಗಳನ್ನು ಅವಲೋಕಿಸಿದಾಗ, ಇಡೀ ದಲಿತ ಚಳುವಳಿಯನ್ನು ತಾಯಿಯ ಹೃದಯವಂತಿಕೆಯಿಂದ ಕಟ್ಟಿದ್ದು ನೆನಪಾಗುತ್ತದೆ. ಅದು ಅವರ ನರನಾಡಿಗಳಲ್ಲಿ ಪ್ರವಹಿಸುತ್ತಿದ್ದುದರಿಂದ ಇಡೀ ಸಮುದಾಯವನ್ನು 'ಅವ್ವ'ನ ಸ್ಥಾನದಲ್ಲಿ ನಿಂತು ಬೆಸೆದರು ಹಾಗೂ ಬೆಳೆಸಿದರು. ಆದ್ದರಿಂದಲೇ ಅವರು ಅಪ್ರಜ್ಞಾಪೂರ್ವಕವಾಗಿ ಅಮ್ಮನ ನಿರ್ವಾಜ್ಯ ಪ್ರೀತಿ ಅಭಿವ್ಯಕ್ತವಾಗುವ ಶಬರಿಯ ಪಾತ್ರವನ್ನು ನನ್ನಿಂದ ಮೂಡಿಸಿದರೇನೋ ಎನಿಸುತ್ತದೆ.

ಕೃಷ್ಣಪ್ಪ ಸಿರಿಕಂಠದ ಸರದಾರ, ವಿದ್ಯಾರ್ಥಿ ದೆಸೆಯಿಂದ ಹಿಡಿದು, ಅಧ್ಯಾಪಕ ವೃತ್ತಿಯಲ್ಲೂ, ಪ್ರೇಮಗೀತೆಗಳಿಗಿಂತ ಹೆಚ್ಚಾಗಿ ಇಡೀ ಜನಸಮುದಾಯವನ್ನು ಒಳಗೊಳ್ಳುವ ಭಾವಗೀತೆಗಳನ್ನು ಹಾಡುತ್ತಿದ್ದರು. ದ.ರಾ. ಬೇಂದ್ರೆಯವರ 'ಇಳಿದು ಬಾ ತಾಯೇ ಇಳಿದು ಬಾ', 'ಕುರುಡು ಕಾಂಚಾಣ ಕುಣಿಯುತಲಿತ್ತೋ, ಕಾಲಿಗೆ ಬಂದವರ ತುಳಿಯುತಲಿತ್ತೋ' ಜಿ.ಎಸ್. ಶಿವರುದ್ರಪ್ಪನವರ 'ಎದೆ ತುಂಬಿ ಹಾಡುವೆನು ಅಂದು ನಾನು', ಗೋಪಾಲಕೃಷ್ಣ ಅಡಿಗರ 'ಕಟ್ಟುವೆವು ನಾವು ಹೊಸ ನಾಡೊಂದನು', 'ನಾವೆಲ್ಲರೂ ಒಂದೇ ಜಾತಿ, ಒಂದೇ ಮತ ನಾವು ಮನುಜರು', ಗೋಂವಿಂದ ಪೈ ಅವರ 'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೇ' ಗೀತೆಗಳನ್ನು ಜೀವ ಭಾವ ತುಂಬಿ, ಕಣ್ಮುಚ್ಚಿ ಹಾಡಿದರೆಂದರೆ, ಕಾಲೇಜು ಸಭಾಂಗಣ ನಿಶ್ಚಲವಾಗಿ ಬಿಡುತ್ತಿತ್ತು. ತಾಯಿಯನ್ನು ಕುರಿತು, ಅವರು ಬರೆದ ಕವನದಲ್ಲಿ "ನಮ್ಮಮ್ಮ ಓದಿದವಳಲ್ಲ, ನಮ್ಮ ಬರೆದವಳಲ್ಲಿ ಹಳ್ಳಿಯ ಮುಗ್ದೆ, ಕರಣಾಮಯಿ" ಎಂಬ ಸಾಲುಗಳು ಅವರ ಅಪರಿಮಿತವಾದ ತಾಯಿ ವಾತ್ಸಲ್ಯವನ್ನು ಅಭಿವ್ಯಕ್ತಿಸುತ್ತವೆ,

ಒಮ್ಮೆ ನಮ್ಮ ತಂದೆಯ ಮನೆಯಲ್ಲಿ ಸತ್ಯನಾರಾಯಣ ಪೂಜೆ ಇಟ್ಟುಕೊಂಡಿದ್ದರು. ಆಗ ನಾನು ನಮ್ಮ ಕಾಲೇಜಿನ ಅಧ್ಯಾಪಕರಲ್ಲಿ ಕೆಲವರನ್ನು ಕರೆದಿದ್ದೆ. ಅವರಲ್ಲಿ ಕೃಷ್ಣಪ್ಪನವರೂ ಒಬ್ಬರು. ಹೀಗೆ ನಮ್ಮ ಮನೆಯಲ್ಲಿ ಅವರು ಪರಿಚಿತರಾದರು. ಅವರ ಬಳಿ ಒಂದು ಹೀರೋ ಸೈಕಲ್ ಇತ್ತು. ಒಮ್ಮೆ ರಜಾದಿನದಂದು ಇದ್ದಕ್ಕಿದ್ದಂತೆ ಸಂಜೆ ವೇಳೆ ಸೈಕಲ್‌ನಲ್ಲಿ ನಮ್ಮ ಮನೆಗೆ ಬಂದರು. ಮಾತಿನ ಮಧ್ಯೆ ನಾನು ಇದರ ಬಗ್ಗೆ ಪ್ರಶ್ನಿಸಿದೆ. ಆಗ ಅವರು "If Mohammed does not come to Mountain, Mountain has to come to Mohammed". ಎಂದಿದ್ದರು. ಆ ಕ್ಷಣ ನನಗೆ ಅವರ ಈ ಮಾತುಗಳ ಅರ್ಥ ಹೊಳೆದಿರಲಿಲ್ಲ. ಮುಂದಿನ ದಿನಗಳಲ್ಲಿ ಅದರರ್ಥದ ಅನುಭವವಾಯ್ತು.

ಈಗಿನಂತೆ ಸಂಪರ್ಕ ಸಾಧನಗಳಿಲ್ಲದ ದಿನಗಳವು. ಅಂಚೆಯೇ ಪ್ರಮುಖ ಸಂಪರ್ಕ ಮಾಧ್ಯಮ. ಕಾಲೇಜಿನ ಉಪನ್ಯಾಸಗಳು, ಕಾದಂಬರಿಗಳು, ಗೆಳತಿಯರ ನಡುವಿನ ಮಾತುಕತೆಗಳು, ಸಿನಮಾಗಳನ್ನು ಕುರಿತು ನಾನು ಅವರಿಗೆ ಪತ್ರ ಬರೆಯಲಾರಂಭಿಸಿದೆ. ಅವರ ಲೇಖನಗಳು, ಅವರ ಪತ್ರ ಸಮರಗಳು, ನನ್ನ ಅಭಿಪ್ರಾಯಗಳು, ಅವರ ಮುಂದಿನ ಲೇಖನಗಳ ಬಗ್ಗೆ ನಮ್ಮ ನಡುವೆ ಚರ್ಚೆಯಾಗುತ್ತಿತ್ತು. ನನಗೆ ಅವರು ಫ್ರೆಂಚ್ ಕ್ರಾಂತಿಯ ಜನಕ ರೂಸೋನ್ ಬಗ್ಗೆ ಹೇಳುತ್ತಿದ್ದರು. ಅವನ ಒಂದು ಗ್ರಂಥವನ್ನೇ ನನಗೆ ಕೊಟ್ಟಿದ್ದರು. ನಾನು ಅವರ ಸೂಚನೆ ಮೇರೆಗೆ ಆ ದೊಡ್ಡ ಗ್ರಂಥದ ಕಾಲು ಭಾಗ ಕನ್ನಡಕ್ಕೆ ತರ್ಜುಮೆ ಮಾಡಿದ್ದೆ. ನಾನು ಕೇಳುತ್ತಿದ್ದ ಅನೇಕ ಪುಸ್ತಕಗಳನ್ನು–ಲೋಹಿಯಾರ ಇತಿಹಾಸ *ಚಕ್ರ*, ವಿಜಯಲಕ್ಷ್ಮಿ ಪಂಡಿತ್ ಕುರಿತು ಪುಸ್ತಕ, ಆಗ ಪ್ರಕಟಗೊಂಡ *ವಂಶವೃಕ್ಷ*, *ಗತಿಸ್ಥಿತಿ*, ಕಾರಂತರ ಕಾದಂಬರಿಗಳು, *ಗ್ರಾಮಾಯಣ* ಇತ್ಯಾದಿಗಳನ್ನು–ಅವರು ತಂದು ಕೊಡುತ್ತಿದ್ದರು.

ಆದಾಗ ತಾನೇ, *ತುಷಾರ*, *ಪ್ರಜಾಮತ*, *ನವಯುಗ* ಪತ್ರಿಕೆಗಳಿಗೆ ಸಣ್ಣಪುಟ್ಟ ಲೇಖನಗಳನ್ನು ಬರೆಯಲಾರಂಭಿಸಿದ್ದ ನನ್ನನ್ನು ಪ್ರೋತ್ಸಾಹಿಸಿದ್ದರು. ನಮ್ಮ ಮದುವೆಯಾದ ಮೇಲೂ ನಾನು ಬರೆದಿದ್ದನ್ನು ಓದಿ, ತಿದ್ದುವುದು, ಕೆಲವು ಮಾರ್ಪಾಡುಗಳನ್ನು ಸೂಚಿಸುವುದನ್ನು ಮಾಡುತ್ತಿದ್ದರು. ೧೯೭೦ರಲ್ಲಿ ಪ್ರಾರಂಭವಾದ 'ಮಾನವ ಮಂಟಪ'ದ ಸ್ಥಾಪನಾ ಸಮಾವೇಶಕ್ಕಾಗಿ ಡಿ.ಎಸ್. ನಾಗಭೂಷಣರವರ ಸಂಪಾದಕತ್ವದಲ್ಲಿ ಹೊರಬಂದ 'ಒಲವು' ಸ್ಮರಣ ಸಂಚಿಕೆಯ ಪ್ರೇಮಕಥಾನಕ ವಿಭಾಗದಲ್ಲಿ, ನಾನು ಬರೆದ ಲೇಖನವೇ ಅವರು ಓದಿ ತಿದ್ದಿಕೊಟ್ಟ ಕಟ್ಟಕಡೆಯ ಲೇಖನವಾಗಿತ್ತು.

ಇನ್ನೂ ಮದುವೆಯಾಗದ ದಿನಗಳವು. ನಮ್ಮ ತಂದೆ ತಾಯಿಯವರ ಕೈಗೆ ನಮ್ಮಿಬ್ಬರ ಪತ್ರಗಳು ಸಿಕ್ಕು, ಅವರು ನನ್ನ ಮದುವೆಗೆ ತುರಾತುರಿಯ ಪ್ರಯತ್ನ ಮಾಡತೊಡಗಿದರು. ಅಷ್ಟರಲ್ಲಾಗಲೇ ನಮ್ಮ ಅಕ್ಕನ ಮದುವೆಯಾಗಿತ್ತು. ನಾನೇ ಸರದಿಯಲ್ಲಿದ್ದವಳು. ನನಗೆ ಮನೆಯಿಂದಾಚೆ ಹೋಗಲು ಕಡಿವಾಣ ಬಿತ್ತು. ನಾನು ಎಲ್ಲಿರುವೆನೆಂಬುದು ತಿಳಿಯದೆ ಕೃಷ್ಣಪ್ಪನವರು ನನ್ನ ಹುಡುಕಾದಲ್ಲಿ ತೊಡಗಿದರು. ಭಗ್ನ ಪ್ರೇಮಿಯಂತೆ, ನನ್ನ ಆಪ್ತ ಗೆಳತಿಯರು ಅಂದರೆ ತಮ್ಮ ಶಿಷ್ಯೆಯರ ಮನೆಗಳಿಗೆ ತೆರಳಿ ನಾನಿರುವ ಸ್ಥಳ ತಿಳಿದುಕೊಳ್ಳಲು ಪ್ರಯತ್ನಿಸಿದರು. ನಮ್ಮ ತಂದೆ ತಾಯಿಯ ಎದುರು ನಿಂತು ವಾದಿಸಿ, ಕೃಷ್ಣಪ್ಪನವರೆಡೆಗೆ ಬರುವಷ್ಟು ಧೈರ್ಯವಾಗಲೀ, ಭಾವನಾತ್ಮಕತೆಯನ್ನು ಮೀರುವ ವೈಚಾರಿತೆಯಾಗಲೀ ಆಗ ನನ್ನಲ್ಲಿರಲಿಲ್ಲ.

ಆ ಸಂದರ್ಭದಲ್ಲಿ ನಮಗೆ ಸಂಪರ್ಕದ ಕೊಂಡಿಯಾದವರು ನನ್ನ ಆಪ್ತ ಮಿತ್ರರಾದ ಗಾಯಿತ್ರಿ ಸುಬ್ರಹ್ಮಣ್ಯ, ಮನೋರಮಾ, ಎಂ.ಎಸ್. ನಾಗರಾಜ, ಮಹಾರುದ್ರ ಹಾಗು ಮನೀರ್ ಬಾಷಾ. ಇವರು ನನಗೆ ಆ ವೇಳೆಯಲ್ಲಿ ತಲುಪಿಸಿದ ಪತ್ರಗಳಲ್ಲಿನ ಮುಖ್ಯ ಮಾತುಗಳೆಂದರೆ, 'ನಮ್ಮ ಕ್ರಾಂತಿ ಜಾತಿಮತಗಳ ವಿರುದ್ಧ, ಹೊಸ ಸಂಸ್ಕೃತಿಯನ್ನು ಕಟ್ಟುವಲ್ಲಿ ಹಳೆ ಸಂಸ್ಕೃತಿಯ ವಿರುದ್ಧ ಮಾತ್ರ. ಪರಿವರ್ತನಾ ಕಾಲದಲ್ಲಿ, ತಂದೆ ತಾಯಿ, ಬಂಧು ಬಳಗ ಎಲ್ಲ ಗೌಣ. ಬುದ್ಧ, ಬಸವಣ್ಣ, ಶಂಕರರನ್ನು ನೋಡು, ಈ ಬದುಕು ಸಾಹಸಿಗಳದೇ ಹೊರತು ಅಂಜುಕುಳಿಗಲ್ಲ.' ಆ ಮಾತುಗಳೇ ನನ್ನನ್ನು ಅವರೆಡೆಗೆ ಧಾವಿಸಿ ಬರಲು ಶಕ್ತಿ ನೀಡಿತ್ತು. ಅಂಥಹ ಆದರ್ಶಗಳನ್ನೂ ಮತ್ತು ಎದೆಗಾರಿಕೆಯನ್ನು ನನ್ನಲ್ಲಿ ತುಂಬಿಲ್ಲದಿದ್ದರೆ, ನಾನು ಹಿಂದಡಿ ಇಡುತ್ತಿದ್ದೇನೇನೋ ಎನಿಸುತ್ತದೆ.

ಆಗ ಸಮಾಜವಾದಿ ಯುವಜನ ಸಭಾ ಪ್ರಾರಂಭವಾದ ಸಂದರ್ಭ. ಒಂದು ಪತ್ರದಲ್ಲಿ ಸಮಾಜವಾದದ ತತ್ವಗಳು, ನೀತಿ, ಆದರ್ಶಗಳನ್ನೂ, ಮುಖಂಡರಾಗಿದ್ದ, ತೇಜಸ್ವಿ, ನಂಜುಂಡಸ್ವಾಮಿ, ಲಂಕೇಶ್‌ರವರುಗಳನ್ನೂ ಹೆಸರಿಸಿತ್ತಾ, "ಅವರೆಲ್ಲರ ಬೆಂಬಲ ನಮ್ಮೊಂದಿಗೆ ಇವೆ. ಅವರೆಲ್ಲರೂ ಈ ಮದುವೆ ಆಗಲೇಬೇಕೆಂದು ಹೇಳುತ್ತಿದ್ದಾರೆ" ಎಂದು ಬರೆದಿದ್ದರು. ಅಲ್ಲಿಂದಾಂಚೆ ನಾನು ಆ ಮನೆಯಿಂದ ಹೊರಟು ಬರುವ ಧೈರ್ಯ ಸಾಹಸಗಳು ಮಾಡಿದ್ದೆ.

ನಾವು ಕಡೂರಿನ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ದಿನಾಂಕ ೧೨.೫.೧೯೭೪ರಂದು ಮದುವೆಯಾಗಿ, ಚಿಕ್ಕ ಮಂಗಳೂರಿನಲ್ಲಿ ಕೆಲವು ದಿನ, ಮೂಡಿಗೆರೆಯಲ್ಲಿನ ತೇಜಸ್ವಿಯವರ ಮನೆಯಲ್ಲಿ ಕೆಲವು ದಿನಗಳಿದ್ದು, ಭದ್ರಾವತಿಯಲ್ಲಿ ವಾತಾವರಣ ತಿಳಿಯಾದ ನಂತರ ಹಿಂತಿರುಗಿದ್ದೆವು. ಶಿವಮೊಗ್ಗ ಜಿಲ್ಲೆಯಲ್ಲಿ ನಮ್ಮ ಮದುವೆ ತೀವ್ರ ತಲ್ಲಣ ಉಂಟುಮಾಡಿತ್ತು. ಹೊರಗಡೆ ಜಾತೀಯತೆಯ ದಳ್ಳುರಿ, ಮನದೊಳಗೆ ಒಡಹುಟ್ಟಿದವರ ಅಗಲಿಕೆಯ ಬೇಗುದಿ, ಇವೆರಡಲ್ಲಿ ನಾನು ಮಾನಸಿಕವಾಗಿ ಕ್ಷೀಣಿಸಿದ್ದೆ. ಆಗ ಅವರು "ಇಂದೂ, ನಿನಗೆ ಅಷ್ಟೊಂದು ನೋವಾಗಿದ್ದರೆ ನಿಮ್ಮ ಮನೆಗೆ ಹೋಗಿ, ನೋಡಿಕೊಂಡು ಬರೋಣ ಬಾ" ಎಂದು ಮಗುವಿನಂತೆ ನನ್ನನ್ನು ಸಂತೈಸಿದ್ದರು. ನನ್ನ ಗೆಳತಿಯರು ಹಾಗೂ ಬಹಳಷ್ಟು ಮಂದಿಗೆ "ಕಡುಕೋಪಿ ಕೃಷ್ಣಪ್ಪನನ್ನು, ಈಕೆ ಹೇಗೆ ಗೆದ್ದಿರಬಹುದು" ಎಂಬುದು ಯಕ್ಷ ಪ್ರಶ್ನೆಯಾಗಿತ್ತು. ಕೃಷ್ಣಪ್ಪನವರ ಹೊರಮುಖವನ್ನು ಮಾತ್ರ ಕಂಡವರಿಗೆ ಅವರ ಆಂತರ್ಯದಲ್ಲಿ ಹರಳುಗಟ್ಟಿದ್ದ ಒಲವಿನ ಮುಖ ಕಾಣಬರಲೇ ಇಲ್ಲ.

**(ಮುಂದುವರೆಯುವುದು)**

## 'ಆಂ ಆದ್ಮಿ ಪಕ್ಷ'ದ ನಾಯಕರಿಗೆ 'ಪತ್ರಿಕೆ' ಬರೆದ ಪತ್ರದ ಸಾರಾಂಶ ರೂಪ

ಪ್ರಿಯ ಮಿತ್ರರೆ,

ನಿಮ್ಮ 'ಚಿಂತನಾ ಪತ್ರ'**ದ** ಕರಡು ಓದಿದೆ. ಕುತೂಹಲಕಾರಿಯಾಗಿದೆ. ಇದರ ಹಿಂದೆ ಗಾಂಧೀಜಿಯ 'ಹಿಂದ್ ಸ್ವರಾಜ್'ನ ಸ್ಫೂರ್ತಿ ಇದ್ದಂತಿದೆ. ಹಾಗಾಗಿಯೇ ನಿಮ್ಮ ರಾಜಕಾರಣದ ಮೂಲಮಂತ್ರ ವಿಕೇಂದ್ರೀಕರಣವೇ ಆಗಿದೆ

ಇದು ಕರಡು ಪತ್ರವಾಗಿರುವುದರಿಂದ ಬಂಡವಾಳ ಕ್ರೋಢೀಕರಣ, ಹೂಡಿಕೆ, ಶಿಕ್ಷಣ, ಕೈಗಾರಿಕೆ ಮತ್ತು ಕೃಷಿ ನೀತಿಗಳನ್ನು ನೀವು ಪಕ್ಷವನ್ನು ವಿಧ್ಯುಕ್ತವಾಗಿ ಘೋಷಿಸುವ ಸಂದರ್ಭದಲ್ಲಿ ವಿಷದೀಕರಿಸುವಿರಿ ಎಂದು ಭಾವಿಸಿದ್ದೇನೆ. ಆದರೆ ಈಗ ತೋರುತ್ತಿರುವಂತೆ ಇಂಗ್ಲಿಷ್ ಅಥವಾ ಹಿಂದಿ ಮಾತಾಡುವ ನಗರಗಳ ಕೆಲವು ಶಿಕ್ಷಿತರಷ್ಟೇ ಸೇರಿ ರಾಷ್ಟ್ರದಲ್ಲಿ ಹೊಸ ರಾಜಕೀಯ ಜಾಗೃತಿಯನ್ನು ಮೂಡಿಸಲಾಗದು. ಚಂಚಲ ಮಧ್ಯಮ ವರ್ಗ ಮತ್ತು ಮಾಧ್ಯಮಗಳನ್ನು ನಂಬಿ ವಿಶ್ವಸಾರ್ಹ ರಾಜಕಾರಣ ಮಾಡಲಾಗದು. ಆದಷ್ಟು ಬೇಗ ರಾಷ್ಟ್ರಾದ್ಯಂತ ಕಾರ್ಯಕರ್ತರ ಪಡೆಯೊಂದನ್ನು ನಿರ್ಮಿಸಿ ಅವರಿಗೆ ನೀವು ಕಟ್ಟಹೊರಟಿರುವ ಪರ್ಯಾಯ ರಾಜಕಾರಣ ನಂಬಿರುವ ಮೌಲ್ಯಗಳ ಬಗ್ಗೆ ತರಬೇತಿ ನೀಡಬೇಕು. ರಾಜ್ಯ ವ್ಯವಸ್ಥೆಯನ್ನು ಪಳಗಿಸಹೊರಟಿರುವವರು ಮೊದಲು ತಾವು ಪಳಗಬೇಕು. ಇದೇ 'ಸ್ವರಾಜ್'ನ ಮುಖ್ಯ ಸಂದೇಶ ಎಂದು ನಾನು ಭಾವಿಸಿರುವೆ. ಇದು ದೊಡ್ಡ ಸಾಹಸವೇ ಸರಿ. ನಿಮಗೆ ಈ ಸಂಬಂಧವಾಗಿ ಶುಭಾಶಯ ಹೇಳುತ್ತಾ, ಪಕ್ಷವು ತಕ್ಷಣ ಜನರ ಗಮನವನ್ನು ಸೆಳೆಯುವಂತಾಗಲು ಈ ಕೆಲವು ಕ್ರಮಗಳನ್ನು ಪರಿಶೀಲಿಸಬಹುದಾಗಿದೆ ಎಂದು ಸೂಚಿಸಬಯಸುತ್ತೇನೆ:

೧. ಸದ್ಯದ ಮಿತಿಯಿಲ್ಲದ ಜೀವನ ಮಟ್ಟವನ್ನು ಪ್ರೋತ್ಸಾಹಿಸುವ ಆರ್ಥಿಕ ನೀತಿಗೆ ಪ್ರತಿಯಾಗಿ ಪ್ರಾಮಾಣಿಕ ದುಡಿಮೆಯ ಮೂಲಕ ಎಲ್ಲರೂ ಮುಟ್ಟಬಹುದಾದ ಒಂದು ಸಭ್ಯ ಸರಳ ಜೀವನ ಮಟ್ಟವನ್ನು ಸಾಧ್ಯ ಮಾಡುವ ನೀತಿಯೇ ನಮ್ಮ ಗುರಿ ಎಂದು ಘೋಷಿಸಬೇಕು

೨. ಒಂದು ನಿರ್ದಿಷ್ಟ ಆದಾಯ ಅಥವಾ ಆಸ್ತಿಯ ಮಿತಿಯನ್ನು ಮೀರಿದವರಿಗೆ ಪಕ್ಷದ ಟಿಕೆಟ್ ನೀಡಬಾರದು. ಹಾಗೂ ಪಕ್ಷದ ಟಿಕೆಟ್ ಮೇಲೆ ಒಂದು ನಿರ್ದಿಷ್ಟ ಮಟ್ಟದ ನಂತರದ ಸ್ಥಾನಗಳಿಗೆ ಆಯ್ಕೆಯಾದವರು ಆ ಅವಧಿಯಲ್ಲಿ ತಮ್ಮ ಎಲ್ಲ ಆದಾಯಮೂಲ ವ್ಯಾಪಾರ–ವ್ಯವಹಾರಗಳೊಂದಿಗೆ ಸಂಬಂಧ ಕಡಿದುಕೊಂಡು ಚುನಾಯಿತ ಸ್ಥಾನ ಒದಗಿಸುವ ಸಂಭಾವನೆಯ ಮೇಲೆ ಜೀವನ ಸಾಗಿಸಬೇಕು.

೩. ಪಕ್ಷದ ಯಾವುದೇ ಸದಸ್ಯ ಪಕ್ಷದ ಅನುಮತಿ ಇಲ್ಲದೆ ಯಾವುದೇ ಮತ ಅಥವಾ ಜಾತಿ ಆಧಾರದ ಸಮಾವೇಶಗಳಲ್ಲಿ ಭಾಗವಹಿಸಕೂಡದು.

೪. ಯಾವುದೇ ಧರ್ಮದ ತಾತ್ವಿಕತೆಗೆ ಭಂಗ ಬರದ ರೀತಿಯಲ್ಲಿ ಸಮಾನ ನಾಗರಿಕ ಸಂಹಿತೆಯನ್ನು ರೂಪಿಸಿ ಜಾರಿಗೆ ತರಬೇಕು.

**–ಡಿ.ಎಸ್ ನಾಗಭೂಷಣ**

# ಅಂದ ಹಾಗೆ: ಕಿಡಿಗೇಡಿಯೊಬ್ಬನ ಕಾಲಹರಣದ ಟಿಪ್ಪಣಿಗಳು...



**ದೊ**ಡ್ಡವರು ಸಾಯುವುದನ್ನೇ ಕಾಯುತ್ತಿದ್ದಂತೆ ಅವರ ಮೇಲೆ ಸಣ್ಣತನದ ಆರೋಪ ಮಾಡಿ ಪುಸ್ತಕ ಬರೆದು ದೊಡ್ಡವರಾಗುವ ಹವಣಿಕೆಯಲ್ಲಿರುವ ಪಿಟೀಲು ಪುಟ್ಟಪ್ಪ ಎಂಬ ಕನ್ನಡದ ಹೆಮ್ಮೆಯ ಮುದಿ ಪತ್ರಕರ್ತರೊಬ್ಬರು ಮೊನ್ನೆ ಬಾಳ ಠಾಕ್ರೆ ಸತ್ತಾಗ ಇದ್ದಕ್ಕಿದ್ದಂತೆ ರಿವರ್ಸ್ ಗೇರ್ ಹೊಡೆದು ಆತನನ್ನು ಇತಿಹಾಸ ಪುರುಷ ಎಂದೆಲ್ಲಾ ಬುರುಡೆ ಸಂಪಾದಕನೊಬ್ಬನ ಬುರುಡೆ ಪತ್ರಿಕೆಯೊಂದರಲ್ಲಿ ಬರುಡೆ ಹೊಡೆದುದರ ಮರ್ಮವೇನು ಎಂದು ಧಾರವಾಡದ ವಿದಾವರ್ಧಕ ಸಂಘದ ಕಟ್ಟೆ ಮೇಲೆ ತಮ್ಮ ಹರೆಯದ ದಿನಗಳ ಬಗ್ಗೆ ಪರಸ್ಪರ ಬುರುಡೆ ಹೊಡೆದುಕೊಂಡು ಕೂತಿದ್ದ ಅವರ ನಾಲ್ಕಾರು ಮುದಿ ಸ್ನೇಹಿತರನ್ನು ಕೇಳಲಾಗಿ ಅವರಲ್ಲೊಬ್ಬ ಐನಾತಿ ಗಿರಾಕಿ, ತನ್ನ ಹಳೆಯ ಹುಬ್ಬಳ್ಳಿ 'ಪ್ರಾಪಂಚಿಕ' ಸಮಸ್ಯೆಯಯನ್ನು ನೆನೆದವನಂತೆ, 'ಆತನಿಗೂ ಶ್ರದ್ಧಾಂಜಲಿ ಅರ್ಪಿಸುವ ಕಾಲ ದೂರವೇನಿಲ್ಲವಲ್ಲ; ಹಾಗಾಗಿ ಅದನ್ನು ಬರೆಯಬೇಕಾದ ಬುರುಡೆ ಶೈಲಿಯ ಬಗ್ಗೆ ಈ ಮೂಲಕ ಯುವ ಪತ್ರಕರ್ತರಿಗೆ ಪಾಠ ಹೇಳಿರ ಬಹುದು' ಎಂದೆನ್ನುತ್ತಾ ಬೊಚ್ಚು ಬಾಯ್ತುಂಬಾ ಗಹಗಹಿಸಿ ನಕ್ಕನಂತಲ್ಲಾ!




ಮುಂಬಯಿನಲ್ಲಿ ಟಾಟಾ ಪ್ರಾಯೋಜಿಸಿದ್ದ ಪಂಚತಾರಾ ಸಾಹಿತ್ಯ ಸಮಾವೇಶಕ್ಕೆ ರಂಗಭೂಮಿ ಮೇಲೆ ಕೊರೆಯಲು ಆಹ್ವಾನಿತರಾಗಿದ್ದ ಗಿರೀಶ್ ಕಾರ್ನಾಡ್ ಎಂಬ ಜಾಗತಿಕ ಕನ್ನಡ ನಾಟಕಕಾರರೊಬ್ಬರನ್ನು ವೇದಿಕೆಗೆ ಕರೆದೊಡನೆ ಇದ್ದಕ್ಕಿದ್ದಂತೆ ಸೆಕ್ಯುಲರ್ ಭೂತ ಅವರ ಮೈಮೇಲೆ ಬಂದು, ಮಾತನಾಡಬೇಕಾದ ವಿಷಯ ಬಿಟ್ಟು ನಾಯ್ಪಾಲ್ ಎಂಬ ಜಾಗತಿಕ ಸಾಹಿತಿಯೊಬ್ಬನ ಮೇಲೆ, ಆತನೊಬ್ಬ ಮುಸ್ಲಿಂ ದ್ವೇಷಿ, ಆತನಿಗೆ ನೀವು ಕೊಡುತ್ತಿರುವ ಜೀವಮಾನ ಸಾಧನೆಯ ಪ್ರಶಸ್ತಿಗೆ ಅನರ್ಹ ಎಂದೆಲ್ಲಾ ಹರಿಹಾಯ್ದುದನ್ನು ಕೇಳಿ ತಿಳಿದ ಭೈರಿಗೆಯಪ್ಪ ಎಂಬ ಕನ್ನಡದ ಕಾದಂಬರಿಕಾರರೊಬ್ಬರು ಅರೇ ಈ ಸೆಕ್ಯುಲರ್ ಭೂತ ಹಿಂದೊಮ್ಮೆ ನನ್ನ 'ವಂಶವೃಕ್ಷ'ದ ಕುಡಿಯಾಗಿ 'ತಬ್ಬಲಿಯು ನೀನಾಗಬೇಡ ಮಗನೇ' ಎಂಬ ನನ್ನ ಹಿಂದುತ್ವದ ಹಾಡಿಗೆ ಹೆಜ್ಜೆ ಹಾಕಿ ಕುಣಿದು ಬೆಳೆದುದೇ ಅಲ್ಲವೇ ಎಂದು ಆಶ್ಚರ್ಯಪಡುತ್ತಾ ಪಕ್ಕದಲ್ಲಿ ಪಾಯಸ ಕುಡಿಯುತ್ತಾ 'ಕುರ' ಎಂಬ ಎರಡಕ್ಷರದ ತಮ್ಮ ಕೊನೆಯ ಕಾದಂಬರಿಯ ಹಸ್ತಪ್ರತಿ ಓದುತ್ತಾ ಕೂತಿದ್ದ ರಾಮಾಜೋಯಿಸರತ್ತ ನೋಡಲು ಅವರು 'ಇದನ್ನು ನಮ್ಮ ಮತ್ತೂರಿನ ಕಡೆ 'ವೃದ್ಧನಾರಿ ಪಾತಿವ್ರತ್ಯ!' ಎಂದು ಕರೆಯುತ್ತಾರೆ ಬಿಡಿ' ಎಂದರಂತಲ್ಲಾ!



'ಅಯ್ಯೋ ನಾಯ್ಪಾಲ್ ಮುಸ್ಲಿಮರ ಮೇಲೆ ಬರೆದು ಹತ್ತು ವರ್ಷವಾಯಿತು, ನೀವು ಈಗ ಹೀಗೆ ಬಾಯಿ ಬಾಯಿ ಬಡಿದುಕೊಂಡೇನು ಪ್ರಯೋಜನ?' ಎಂದು ಕಾರ್ನಾಡರನ್ನು ಕೇಳಲಾಗಿ, ಅವರು ಅಯ್ಯೋ ಆಗ ನಾನು ಸರ್ಕಾರಿ ಸೇವೆಯಲ್ಲಿದ್ದು ಬಾಯಿ ಬಿಡುವ ಹಾಗಿರಲಿಲ್ಲ ಎನ್ನಲು, ಇವರಾವ ಕಾಲದಲ್ಲಿ ಎಂತಹ ಸರ್ಕಾರಿ ನೌಕರಿಯಲ್ಲಿದ್ದರು ಎಂದು ಆಶ್ಚರ್ಯ ಚಕಿತರಾದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕೆಲವು ಖಯಾಲಿ ಬುದ್ಧಿಜೀವಿ ನೌಕರರು ಪಿಂಚಣಿದಾರರ ಪಟ್ಟಿಯನ್ನೆಲ್ಲಾ ಜಾಲಾಡಿದರೂ ಗಿರೀಶ್ ಕಾರ್ನಾಡ್ ಎಂಬ ಹೆಸರು ಕಾಣದೇ ತನಿಖೆ ಮಾಡಲಾಗಿ, ಕೊನೆಗೆ ಅವರದು ಜೀವನೋಪಾಯದ ಸರ್ಕಾರಿ ಚಾಕರಿಯಾಗಿರದೆ ಅದು ಗುಜರಾತ್‌ನಲ್ಲಿ ಜಾತ್ಯತೀತತೆಯನ್ನು ಎತ್ತಿ ಹಿಡಿಯಲು ನಡೆದ ಮುಸ್ಲಿಮರ ನರಹತ್ಯೆ ಕಾಲದಲ್ಲಿನ ವಾಜಪೇಯಿ ಸರ್ಕಾರದ 'ಗೌರವ ಸೇವೆ' ಎಂದು ಗೊತ್ತಾದೊಡನೆ ಇವರ ಸರ್ಕಾರಿ ನೌಕರಿಯ ವೈಖರಿ-ವಿಧೇಯತೆಗಳನ್ನು ತಿಳಿದು ತಮ್ಮ ದೇಹದ ಸಿಕ್ಕಸಿಕ್ಕ ಭಾಗಗಳನ್ನೆಲ್ಲ ಬಡಿದುಕೊಂಡು ಗುಟ್ಟಾಗಿ ನಕ್ಕರಂತಲ್ಲಾ!

ಇದನ್ನು ತಿಳಿದು ಮನಸ್ಸಿಗೆ ಕೊಂಚ ಇರುಸು ಮುರಿಸು ಮಾಡಿಕೊಂಡ ಜರ್ಮನಿಯ ಬರ್ಲಿನ್‌ನಲ್ಲಿ ಇಂತಹುದೇ ಸರ್ಕಾರಿ ಸೇವಾ' ವಿಧೇಯತೆಯಲ್ಲಿರುವ ಕನ್ನಡದ ಇನ್ನೋರ್ವ ಕ್ರಾಂತಿಕಾರಿ ಬುದ್ಧಿಜೀವಿಯೊಬ್ಬರು ಕಾರ್ನಾಡರನ್ನು ಅಲ್ಲಿಂದಲೇ ಸಂತೈಸುವ ಮೂಲಕ ಬಹಿರಂಗವಾಗಿ ಸ್ವಸಂತೈಕೆಯನ್ನೂ ಮಾಡಿಕೊಂಡರಂತಲ್ಲಾ!




ಆದರೆ ಕೆಲವೇ ದಿನಗಳಲ್ಲಿ ತಮ್ಮ ಮೊದಲ ಸ್ಫೋಟ ಎಬ್ಬಿಸಿದ ಧೂಳು ಅಷ್ಟಾಗಿ ಬುದ್ಧಿಜೀವಿ ವಲಯದಲ್ಲಿ ದಟ್ಟೈಸಿ ತಮ್ಮ ಮುಂದಿನ ಸಮಕಾಲೀನ ಪೌರಾಣಿಕ ನಾಟಕಕ್ಕಾಗಿ ಯಾವ ವಸ್ತುವಿನ ಹೊಳಹನ್ನೂ ದೊರಕಿಸಿ ಕೊಡಲಿಲ್ಲವಲ್ಲ ಎಂದು ಚಿಂತಾಕ್ರಾಂತರಾದ ಕಾರ್ನಾಡರು, ಸಿಕ್ಕ ಮೊದಲ ಅವಕಾಶದಲ್ಲೇ ಟ್ಯಾಗೂರ್ ಸಾಮಾನ್ಯ ಎನ್ನುವ ಬದಲು ಎರಡನೇ ದರ್ಜೆ ನಾಟಕಕಾರ ಎಂದು ಬೇಕಂತಲೇ ಹೇಳಿ ಈ ಬಾರಿ ಬಂಗಾಳೀ ಬಾಬುಗಳ ಹೃದಯ ಬಾಂಬಿನಂತೆ ಸ್ಫೋಟಿಸಿ ತಮಗೆ ಬಂಗಾಳೀ ಪುರಾಣ ಲೋಕದಿಂದ ನೇರವಾಗಿ ನಾಟಕ ವಸ್ತುವೊಂದರ ಬಂದು ಬೀಳಲಿದೆ ಎಂದು ಕಾಯುತ್ತಿರಲು ಆ ಬಾಬುಗಳು ಕಾರ್ನಾಡರತ್ತ ತಿರುಗಿಯೂ ನೋಡದೇ ಹೋದಾಗ ಶ್ಯಾನೆ ನಿರಾಶರಾದ ಅವರು ಒಮ್ಮೆ ಬರ್ಲಿನ್ ಕಡೆ ತಿರುಗಿ ನೋಡಲಾಗಿ ನಮ್ಮ ಸಾಂಸ್ಕೃತಿಕ ರಾಯಭಾರಿಗಳು ಈ ಬಾರಿ ಸಂತೈಸಲು ಹೋಗದೆ 'ಶಾಂತಂ ಪಾಪಂ! ಹಂಗೆಲ್ಲ ಟ್ಯಾಗೂರ್ ಬಗ್ಗೆ ಹೇಳ್ಬಾರ್ದು! ಇನ್ನೊಂದ್ಸಲ ಓದಿ ನೋಡಿ' ಎಂದು ಬಳೇಪೇಟೆ ಕನ್ನಡದಲ್ಲಿ ಕಾರ್ನಾಡರಿಗೆ ಬುದ್ಧಿ ಹೇಳಿ ತಾವು ಕೂತಿದ್ದ ಮೆತ್ತನೆಯ ಟ್ಯಾಗೋರ್ ಕುರ್ಚಿಯನ್ನು ಮೆಲ್ಲಗೆ ಸವರಿದರಂತಲ್ಲಾ!



ಇತ್ತೀಚೆಗೆ ಮಂಗಳೂರು-ಉಡುಪಿ ಕಡೆಯ ಕೆಲವು ಬ್ರಾಹ್ಮಣ ಬುದ್ಧಿಜೀವಿಗಳು ಮನೆಗಳಲ್ಲಿ ತಮ್ಮ ಹೆಂಡಂದಿರುಗಳ ಪೂಜೆ-ಪುನಸ್ಕಾರ-ಮಡಿ ಮೈಲಿಗೆಗಳಿಂದ ರೋಸಿ ಹೋಗಿ ಮುಸ್ಲಿಮರಾಗಿ ಮತಾಂತರಗೊಳ್ಳಲು ಸಿದ್ಧರಾಗುತ್ತಿದ್ದಾರೆ ಎಂದು ಕೆಲವು ಕುಹುಕಿಗಳು ಹಬ್ಬಿಸಿದ ಗಾಳಿಸುದ್ದಿಯನ್ನು ನಂಬಿ ಅಜ್ಮೇರ್ ಕಡೆಯ ಮೌಲ್ವಿಯೊಬ್ಬರು ಗಡ್ಡ ನೀವಿಕೊಂಡು ಮಂಗಳೂರಿಗೆ ಬಂದು 'ನರೇಂದ್ರ ಮೋದಿಯೇನಾದರೂ ಪ್ರಧಾನ ಮಂತ್ರಿಯಾದಲ್ಲಿ ಈ ದೇಶದ ಮುಸ್ಲಿಮರೆಲ್ಲ ಉಗ್ರರಾಗುತ್ತಾರೆ ಎಚ್ಚರ!' ಎಂದು ಅರಚುತ್ತಾ ಆ ಬುದ್ಧಿಜೀವಿ ಬ್ರಾಹ್ಮಣ ವಟುಗಳಿಗೆ ಸಾಬರ ಮುಂಜಿಗಾಗಿ ಮುಂದೆ ಬರಲು ಪ್ರೇರಣೆ ನೀಡಿದೊಡನೆ ಆ ವಟುಗಳು ಹಿಂದಿನ ಸಾಲಲ್ಲೇ ಕೂತು 'ಎಂತಹ ಸೆಕ್ಯುಲರ್ ಮುನ್ನೋಟದ ಮಾತು! ಇದು ನಮ್ಮ ಮುಂದಿನ ಕೋಮು ಸೌಹಾರ್ದ ಹೋರಾಟಕ್ಕೆ ಸ್ಫೂರ್ತಿ ವಾಕ್ಯವೇ ಸರಿ!' ಎಂದು ಚಪ್ಪಾಳೆ ತಟ್ಟಿ ತಂತಮ್ಮಲ್ಲೇ ಮಾತಾಡಿಕೊಂಡವೇ ಹೊರತು ಸ್ಥಳಬಿಟ್ಟು ಎದ್ದು ಮುಂದಕ್ಕೆ ಬರದೇ ಮೌಲ್ವಿಗೆ ಶಾನೇ ನಿರಾಶೆ ಮಾಡಿಬಿಟ್ಟರಂತಲ್ಲಾ!

### ಕೊನೇ ಹನಿ



ಕಳೆದ ಬಾರಿ ಪದ್ಮಶ್ರೀ ಪ್ರಶಸ್ತಿ ಪಡೆದ ದೇವನೂರ ಮಹದೇವ, ಅದನ್ನು ರಾಷ್ಟ್ರಪತಿಯವರಿಂದ ಸ್ವೀಕರಿಸಲು ದೆಹಲಿಗೆ ಹೋಗದೆ ಮನೆಗೇ ಬರಮಾಡಿಕೊಂಡದ್ದನ್ನು ಗಮನಿಸಿದ ಕಿಡಿಗೇಡಿ ಇದೆಂತಹ ಪ್ರಶಸ್ತಿ ವೈರಾಗ್ಯ ಎಂದು ಆಶ್ಚರ್ಯಪಟ್ಟು, ಮಹದೇವರನ್ನು 'ಅಲ್ಲಾ, ಇಂತಹ ದೊಡ್ಡ ಪ್ರಶಸ್ತಿ ಬಂದಾಗಲೂ ನಿಮಗೆ ನಿಜವಾಗಿಯೂ ಸಂತೋಷ ಆಗಲಿಲ್ಲವೇ?' ಎಂದು ಕೇಳಿದನಂತೆ. ಅದಕ್ಕೆ ಮಹದೇವ ತಮ್ಮ ಎಂದಿನ ತುಂಟ ನಗೆಯೊಂದಿಗೆ ಹೇಳಿದ್ದು: 'ಪ್ರಶಸ್ತಿಯಿಂದ ಅಂತಹ ಸಂತೋಷವೇನೂ ಆಗಲಿಲ್ಲ. ಆದರೆ ಪ್ರಶಸ್ತಿ ಬಂದ ಸಂದರ್ಭದಲ್ಲಿ ಮೈಸೂರಿನಲ್ಲಿ ಏರ್ಪಡಿಸಿದ್ದ ಸಮಾರಂಭವೊಂದರಲ್ಲಿ ಗೆಳೆಯ ರಾಜಶೇಖರ ಕೋಟಿ ವೇದಿಕೆಯ ಮೇಲಿಂದ ಪದೇ ಪದೇ ಮಹದೇವ್‌ಗೆ '**ಪದ್ಮಸ್ತ್ರೀ**' ಪ್ರಶಸ್ತಿ ಬಂದಿದೆ ಎಂದು ಹೇಳುತ್ತಿದ್ದಾಗ ಹಿಂದೆ ಕೂತಿದ್ದ ನನಗೆ ಒಂದಿಷ್ಟು ರೋಮಾಂಚನವಾಗಿದ್ದು ನಿಜ!'

**-ಕಿಡಿಗೇಡಿ**

# ತಿಂಗಳ ವಿಶೇಷ ಕವಲು ದಾರಿಯಲ್ಲಿರುವ ಮುಸ್ಲಿಂ ಸಮಾಜ



ಇಸ್ಲಾಂ ಭಾರತಕ್ಕೆ ಎರಡು ಮಾರ್ಗಗಳ ಮೂಲಕ ಬಂದಿತೆಂದು ಹೇಳಲಾಗುತ್ತದೆ. ಮೊದಲು ವ್ಯಾಪಾರೋದ್ದೇಶದಿಂದ ಕಡಲು ಮಾರ್ಗವಾಗಿ, ದಕ್ಷಿಣ ಭಾರತಕ್ಕೆ. ನಂತರ ವಾಯುವ್ಯ ಗಡಿ ಮಾರ್ಗವಾಗಿ ಆಕ್ರಮಣಶೀಲವಾಗಿ ಉತ್ತರ ಭಾರತಕ್ಕೆ. ತಮ್ಮ ಉದ್ದೇಶಗಳಗನುಗುಣವಾಗಿ ಎರಡು ವಿಭಿನ್ನ ರೂಪಗಳಲ್ಲಿ ಬಂದ ಈ ಧಾರೆಗಳು ಕಳೆದ ಐದು ಶತಮಾನಗಳಲ್ಲಿ ಪೂರ್ಣವಾಗಲ್ಲದಿದ್ದರೂ ವಿಭಿನ್ನ ನೆಲೆಗಳಲ್ಲಿ ಪರಸ್ಪರವಾಗಿ ಮತ್ತು ಇಲ್ಲಿನ ಧರ್ಮ ಸಂಸ್ಕೃತಿಗಳೊಂದಿಗೆ ಮುಖಾಮುಖಿಯಾಗಿ ಭಾರತೀಯ ಎನ್ನಬಹುದಾದ ಇಸ್ಲಾಂನ ಒಂದು ವಿಶಿಷ್ಟ ಆವೃತ್ತಿ ರೂಪುಗೊಂಡಿದೆ ಎಂದೂ ಹೇಳಲಾಗುತ್ತದೆ. ನಮ್ಮ ವಾಸ್ತುಶಿಲ್ಪ, ಸಂಗೀತ, ಭಾಷೆ, ಆಹಾರ ಪದ್ಧತಿ, ದೈವಾರಾಧನೆ ಮತ್ತು ವಸ್ತ್ರವಿನ್ಯಾಸಗಳ ವಿಕಾಸ ಕ್ರಮದಲ್ಲಿ ಇದು ಎದ್ದು ಕಾನುತ್ತದೆ. ಹಾಗಾಗಿ ಇಸ್ಲಾಂ ಭಾರತಕ್ಕೆ ಅನ್ಯ ಧರ್ಮವಾಗಿ ಉಳಿದಿಲ್ಲ. ಲೋಹಿಯಾ ಹೇಳಿದ ಹಾಗೆ, ಘಜ್ನಿ, ಘೋರಿ, ಬಾಬರ್‌ಗಳು ಹೊರಗಿನವರಿರಬಹುದು;ಆದರೆ ಅಕ್ಬರ್, ರಜಿಯಾ, ಷೇರ್ ಷಾ ಇತ್ಯಾದಿಗಳು ವಿಕ್ರಮಾದಿತ್ಯ, ಅಶೋಕ, ಹೇಮು, ಪ್ರತಾಪಸಿಂಹರಂತೆಯೇ ನಮ್ಮವರು.

ಆದರೆ ಮತೀಯ ಆಧಾರದ ಮೇಲೆ ನಡೆದ ರಾಷ್ಟ್ರ ವಿಭಜನೆಯ ವಿಚ್ಛಿದ್ರಕಾರಿ ರಾಜಕಾರಣ, ಅದರಿಂದ ಸೃಷ್ಟಿಯಾದ ಪಾಕಿಸ್ತಾನ ಸೋದರ ರಾಷ್ಟ್ರವಾಗದೆ ಮತೀಯ ಶತ್ರು ರಾಷ್ಟ್ರವಾಗಿ ಮೂಡಿರುವುದು ಮತ್ತು ಇತ್ತೀಚಿನ ವರ್ಷಗಳಲ್ಲಿ ಅಂತಾರಾಷ್ಟ್ರೀಯ ರಾಜಕಾರಣದ ಪರಿಣಾಮವಾಗಿ ಇಸ್ಲಾಂನ್ನು 'ಶುದ್ಧೀಕರಿಸುವ' ಜಾಗತಿಕ ಆಂದೋಲನವೊಂದು ಆರಂಭವಾಗಿದ್ದು, ಅದು ಭಯೋತ್ಪಾದನೆಯ ರಾಜಕಾರಣದೊಂದಿಗೆ ತಳಕು ಹಾಕಿಕೊಂಡು ಭಾರತೀಯ ಸಮಾಜದಲ್ಲಿ ಹಲವು ತಲ್ಲಣ ಮತ್ತು ಆತಂಕಗಳನ್ನು ಸೃಷ್ಟಿಸಿದೆ. ಮುಖ್ಯವಾಗಿ ತನ್ನ ಬಹುರೂಪದಿಂದಾಗಿ ಭಾರತದ ಸಂಸ್ಕೃತಿ, ಬದುಕುಗಳಲ್ಲಿ ಒಂದಾಗಿ ಹೋಗಿದ್ದ ಮುಸ್ಲಿಂ ಸಮಾಜ ಈಗ ಈ 'ಶುದ್ಧೀಕರಣ'ದ ಪ್ರಯತ್ನದಿಂದಾಗಿ ತನ್ನ ದೇಸೀ ಬೇರುಗಳನ್ನು ಕಳಚಿಕೊಂಡು ಜಾಗತಿಕ ಏಕರೂಪೀಕರಣಕ್ಕೆ ಒಳಪಡುತ್ತಾ ಕ್ರಮೇಣ 'ಅನ್ಯತೆ'ಯೆಡೆಗೆ ಧಾವಿಸುತ್ತಿರುವ ಹೊರ ಲಕ್ಷಣಗಳು ಕಾಣತೊಡಗಿದ್ದು ಇದು ಹಲವು ಅನುಮಾನ–ಆತಂಕಗಳನ್ನು ಸೃಷ್ಟಿಸಿ ವಿಭಿನ್ನ ರೀತಿಯ ಸಾಮಾಜಿಕ ಬಿಗುವುಗಳಿಗೆ ಕಾರಣವಾಗುತ್ತಿದೆ. ಇದು ಭಾರತದ ಒಟ್ಟು ಸಮಾಜದಲ್ಲಿ ಮಾತ್ರವಲ್ಲ, ಮುಸ್ಲಿಂ ಸಮಾಜದ ಪ್ರಜ್ಞಾವಂತರನ್ನೂ ಚಿಂತೆಗೆ ಹಚ್ಚಿ, ಸಣ್ಣ ಪ್ರಮಾಣದಲ್ಲಾದರೂ ಈ ಬೆಳವಣಿಗೆಯ ವಿರುದ್ಧ ಧ್ವನಿಗಳು ಕೇಳಿಬರುತ್ತಿವೆ.

ಇಂತಹ ಧ್ವನಿಗಳಲ್ಲಿ ಪ್ರಮುಖವಾದದ್ದು ಹಿರಿಯ ಸಮಾಜವಾದಿ ಚಿಂತಕ ಅಸ್ಘರ್ ಅಲಿ ಇಂಜಿನಿಯರ್ ಅವರದ್ದು. ಈ ಸಂಚಿಕೆಯಲ್ಲಿನ ಎರಡು ಪ್ರಮುಖ ಲೇಖನಗಳಲ್ಲಿ ಅವರು ಭಾರತದಲ್ಲಿ ಇಸ್ಲಾಂ ತನ್ನೊಳಗೇ ಎದುರಿಸುತ್ತಿರುವ ತಾತ್ವಿಕ ಸಂಘರ್ಷವನ್ನು ಪರಿಚಯಿಸುತ್ತಾ ಅದರ ರಾಜಕೀಯ ಮತ್ತು ಸಾಮಾಜಿಕ ಸ್ವರೂಪ ಮತ್ತು ಪರಿಣಾಮಗಳನ್ನು ಚರ್ಚಿಸಿದ್ದಾರೆ. ಜ಼ಹರ್ ಜೈದಿಯರ ಇನ್ನೊಂದು ಲೇಖನ ಇನ್ನೋರ್ವ ಪ್ರಜ್ಞಾವಂತ ಮುಸ್ಲಿಂ ಲೇಖಕನ ಸ್ಪಂದನಶೀಲವಾದ ಒಳತೋಟಿಯೊಂದನ್ನು ನಮ್ಮ ಮುಂದೆ ಪ್ರಸ್ತುತಪಡಿಸುತ್ತದೆ. ಹಾಗೆ ನೋಡಿದರೆ ಮುಸ್ಲಿಂ ಸಮಾಜವನ್ನು ಹೊರಗಿಂದ ವಿಮರ್ಶೆ ಮಾಡುವ ಜನ ಅದನ್ನು ಕಟ್ಟಿರುವ ಇಸ್ಲಾಂನ ತಾತ್ವಿಕತೆ ಮತ್ತು ರಾಜಕೀಯ ಇತಿಹಾಸವನ್ನು ಅರಿಯುವ ಗೋಜಿಗೇ ಹೋಗಿಲ್ಲ. ಆದರೆ ಅದನ್ನು ಮತ್ತು ಅವು ಸೃಷ್ಟಿಸಿರುವ ಒಳ ತಳಮಳಗಳನ್ನು ಅರಿಯದ ವಿಮರ್ಶೆ ಅಪೂರ್ಣವಷ್ಟೇ ಅಲ್ಲ, ಅಪಾಯಕಾರಿ ಕೂಡ. ಈ ದೃಷ್ಟಿಯಿಂದ ನಮ್ಮ ಓದುಗರು ಈ ಲೇಖನಗಳನ್ನು ಸ್ವಲ್ಪ ಸಹನೆಯಿಂದ ಓದಿ ಒಂದು ಚರ್ಚೆಗೆ ದಾರಿ ಮಾಡಿ ಕೊಡುವರೆಂದು ಆಶಿಸುತ್ತೇವೆ.–ಸಂಪಾದಕ

## ಸೂಫಿ ಇಸ್ಲಾಮ್ ಮತ್ತು ವಹಾಬಿ ಇಸ್ಲಾಮ್

*ಅಸ್ಘರ್ ಅಲಿ ಎಂಜಿನಿಯರ್

**ಮೊ**ರಾದಾಬಾದ್‌ನಲ್ಲಿ ಇತ್ತೀಚೆಗೆ ನಡೆದ ಸುನ್ನಿ(ಸೂಫಿ) ಮುಸ್ಲಿಮರ ದೊಡ್ಡ ಸಮಾವೇಶವೊಂದರಲ್ಲಿ ವಹಾಬಿ ಇಸ್ಲಾಮ್‌ನ್ನು ಖಂಡಿಸಲಾಯಿತು. ಆಲ್ ಇಂಡಿಯಾ ಉಲೆಮಾ ಮಶಾಯಿಕ್ ಬೋರ್ಡ್‌ನ ವಕ್ತಾರ ಸೈಯದ್ ಮೊಹಮ್ಮದ್ ಅಶ್ರಫ್ ಅವರು 'ನಾವು ವಹಾಬಿ ಇಸ್ಲಾಮಿನ ನೇತೃತ್ವವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ' ಎಂದು ಘೋಷಿಸಿದರು. ಸೈಯದ್ ಬಾಬರ್ ಅಶ್ರಫ್ ಅವರು "ಭಾರತದ ಶೇಕಡಾ ೮೦ ರಷ್ಟು ಮುಸ್ಲಿಮರು ಸುನ್ನಿ–ಸೂಫಿ ಪರಂಪರೆಯನ್ನು ಪಾಲಿಸುತ್ತಾರೆ. ಆದರೆ ವಹಾಬಿಗಳು ಈ ಸಮುದಾಯದ ಶೇಕಡಾ ೧೩–೧೪ ರಷ್ಟು ಜನಗಳನ್ನೂ ಸಹ ಪ್ರತಿನಿಧಿಸುವುದಿಲ್ಲ" ಎಂದು ಹೇಳಿದರು. ಅವರ ಪ್ರಕಾರ: "ಉರ್ದುವಿನಲ್ಲಿ ಪ್ರಕಟವಾಗುವ ಮಾಧ್ಯಮಗಳು ನಮ್ಮನ್ನು ಬಹಿಷ್ಕರಿಸಿವೆ. ಅವುಗಳೆಲ್ಲ ಮತೀಯ ತೀವ್ರಗಾಮಿಗಳ ಹಿಡಿತದಲ್ಲಿ ಸಿಕ್ಕಿಕೊಂಡಿವೆ". ವಹಾಬಿ ಇಸ್ಲಾಮ್ ಮತ್ತು ಸೂಫಿ ಇಸ್ಲಾಮಿನ ನಡುವೆ ಬಹಳ ಗಂಭೀರವಾದ ಭಿನ್ನಾಭಿಪ್ರಾಯಗಳಿದ್ದರೂ, ಸಾರ್ವಜನಿಕವಾಗಿ ಮೊದಲ ಬಾರಿಗೆ ವಹಾಬಿಗಳನ್ನು ಖಂಡಿಸಿದ ಘಟನೆಯಿಂದ ಕೆಲವರಿಗೆ ಆಶ್ಚರ್ಯವಾದರೆ, ಇನ್ನು ಕೆಲವರಿಗೆ ಅದು ಅನಿರೀಕ್ಷಿತ ಸಂಗತಿಯೇನೂ ಆಗಿರಲಿಲ್ಲ.

ಹೊರಗಿನಂದ ನೋಡುವವರಿಗೆ ಭಾರತದ ಮುಸ್ಲಿಮರೆಲ್ಲ ಒಂದೇ ಆಗಿ ಕಾಣುತ್ತಾರೆ. ಅವರೆಲ್ಲ ಏಕರೂಪಿಯಾದ ಸಂಸ್ಕೃತಿಯನ್ನು ಪಾಲಿಸುವಂತೆ ಕಾಣಿಸುತ್ತಾರೆ. ಆದರೆ ಇದು ನಿಜವಲ್ಲ. ಭಾರತವು ಸಾಂಸ್ಕೃತಿಕವಾಗಿ, ಭಾಷಿಕವಾಗಿ, ಭೌಗೋಳಿಕವಾಗಿ ಹೇಗೆ ವೈವಿಧ್ಯಮಯವಾಗಿದೆಯೋ ಹಾಗೆಯೇ ಭಾರತದ ಮುಸ್ಲಿಮರಲ್ಲಿಯೂ ಅನೇಕ ವೈವಿಧ್ಯತೆಗಳಿವೆ. ತನ್ನ ಆಚಾರ–ವಿಚಾರ,ಸಂಸ್ಕೃತಿ ಮುಂತಾದ ಹಲವು ವಿಷಯಗಳಲ್ಲಿ ಇಸ್ಲಾಮ್ ಸಂಪೂರ್ಣವಾಗಿ ಭಾರತೀಕರಣಗೊಂಡಿದೆ. ಇಲ್ಲಿನ ಮುಸ್ಲಿಮರ ಹಬ್ಬ, ಮದುವೆ, ನಾಮಕರಣ, ಸಾವಿನ ನಂತರದ ವಿಧಿ ವಿಧಾನಗಳು ಮುಂತಾದವುಗಳಲ್ಲಿ ಇದನ್ನು ಕಾಣಬಹುದು.




ಆದರೆ ಕೆಲವು ಮುಸ್ಲಿಮ್ ಸಂಪ್ರದಾಯವಾದಿಗಳು ಈ ಬಗೆಯ ದೇಸೀಕರಣವನ್ನು ವಿರೋಧಿಸುತ್ತ, ಇದರಿಂದ ಪಾರಾಗಲು ಮಧ್ಯಯುಗದ ಇಸ್ಲಾಮ್‌ನ ಮಾದರಿಯನ್ನು ಅನುಸರಿಸಬೇಕು ಎಂಬ ಅಭಿಪ್ರಾಯ ಹೊಂದಿದ್ದಾರೆ. ಜಹಾಂಗೀರನ ಕಾಲದ ಮುಜದ್ದಿದ್ ಅಲ್ಫ್–

ಎ–ಸಾನಿ ಎಂಬ ಪಂಗಡ ಇಂತಹ ಅಭಿಪ್ರಾಯವನ್ನು ಹೊಂದಿತ್ತು.. ಅದು ಭಾರತದಲ್ಲಿ ವ್ಯಾಪಕವಾಗಿ ಆಚರಣೆಯಲ್ಲಿದ್ದ ಸೂಫಿ ಇಸ್ಲಾಮ್‌ನ ಚಿಸ್ತಿ ಪಂಗಡವನ್ನು ಅದು ಎತ್ತಿಹಿಡಿಯುವ ವಹಾದತ್– ಉಲ್–ವಜೂದ್ ( ಸರ್ವರ ಏಕತೆ) ತತ್ವದ ಕಾರಣಕ್ಕಾಗಿ ವಿರೋಧಿಸಿತು. ಆ ಪಂಗಡವು ಎಲ್ಲ ಧರ್ಮಗಳ ನಡುವಿನ ತಡೆಗೋಡೆಗಳನ್ನು ವಿರೋಧಿಸಿತ್ತು.

ಮುಜದ್ದಿದ್ ಅಲ್ಫ್–ಎ–ಸಾನಿ ಪಂಗಡವು 'ವಹಾದತ್–ಎ–ಶುಹುದ್'(ಸೃಷ್ಟಿಯ ಎಲ್ಲ ಚೇತನಗಳ ಏಕತೆ)ಅನ್ನು ಎತ್ತಿಹಿಡಿಯಿತು. ಆದರೆ ಈ ಪಂಗಡವು ಭಾರತದಲ್ಲಾಗಲೀ, ಭಾರತದ ಹೊರಗಿನ ಪ್ರದೇಶಗಳಲ್ಲಾಗಲೀ ಜನಪ್ರಿಯವಾಗಲು ಸಾಧ್ಯವಾಗಲಿಲ್ಲ. ಅದು ಕೆಲವು ಗಣ್ಯ ಧಾರ್ಮಿಕ ವ್ಯಕ್ತಿಗಳಿಗೆ ಸೀಮಿತವಾಯಿತು. ಇಪ್ಪತ್ತನೇ ಶತಮಾನದ ಕೆಲವು ಪ್ರತ್ಯೇಕತಾವಾದಿಗಳು ಮುಜದ್ದಿದ್ ಪಂಗಡವನ್ನು ಶುದ್ಧ ಇಸ್ಲಾಮಿನ ಪಂಥವೆಂಬಂತೆ ಬಿಂಬಿಸಿ, ಅದಕ್ಕೊಂದು ಪ್ರತ್ಯೇಕತಾವಾದಿ ರೂಪವನ್ನು ನೀಡಲು ಪ್ರಯತ್ನಿಸಿದರು. ಆದರೆ ಮುಜದ್ದಿದ್ ಪಂಗಡದ ಧಾರ್ಮಿಕ ತತ್ವಗಳಲ್ಲಿ ಪ್ರತ್ಯೇಕತಾವಾದಿ ರಾಜಕೀಯದ ಅಂಶಗಳನ್ನು ಹುಡುಕುವುದು ಸರಿಯಲ್ಲ.

*ಚಿಸ್ತಿಯಾ* ಸೂಫಿಗಳು ತೋರಿಸಿದಂತೆ, ಇಸ್ಲಾಮಿನ ಶುದ್ಧ ಧಾರೆಗೂ ಭಾರತೀಯ ಇಸ್ಲಾಮಿಗೂ ಇರುವ ನಿರಂತರ ಒಳ ಜಗಳವನ್ನು ತೋರಿಸುವುದಕ್ಕಾಗಿಯೇ ಇಲ್ಲಿ ಮುಜದ್ದಿದ್ ಪಂಗಡದ ವಿಷಯವನ್ನು ವಿವರವಾಗಿ ನೀಡಲಾಗಿದೆ. ಕುತೂಹಲದ ಸಂಗತಿಯೇನೆಂದರೆ, ದೆಹಲಿಯ ಹಜರತ್ ನಿಜಾಮುದ್ದೀನ್ ದರ್ಗಾದ ಹಸನ್ ನಿಜಾಮಿ ಸಜ್ಜಾದಾ ನಶೀನ್ ಅವರು ಬರೆದ ಫಾತಿಮಿ ದಾವತ್–ಎ–ಇಸ್ಲಾಮ್ ಎಂಬ ಅದ್ಭುತ ಪುಸ್ತಕದಲ್ಲಿ ಸೂಫಿಗಳು ಭಾರತದಲ್ಲಿ ಇಸ್ಲಾಮನ್ನು ಜನಪ್ರಿಯಗೊಳಿಸಲು ಭಾರತೀಯ ಪರಂಪರೆ, ಸಾಂಸ್ಕೃತಿಕ ಆಚರಣೆಗಳನ್ನು ಹೇಗೆ ಅಳವಡಿಸಿಕೊಂಡರು ಮತ್ತು ಇಸ್ಲಾಮನ್ನು ಹೇಗೆ ಭಾರತೀಕರಣಗೊಳಿಸಿದರು ಎಂಬ ಬಗ್ಗೆ ವಿವರವಾದ ಉಲ್ಲೇಖಗಳಿವೆ.

ಇದರಿಂದ ಸ್ಪಷ್ಟವಾಗುವ ಸಂಗತಿಯೆಂದರೆ: ನಿಜವಾದ ಅರ್ಥದಲ್ಲಿ ಸೂಫಿ ಇಸ್ಲಾಮ್ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಇರುವ ಭಾರತದ ಸಾಂಸ್ಕೃತಿಕ ವೈವಿಧ್ಯತೆಯ ಪ್ರತಿಫಲನವಾಗಿದೆ. ಸೂಫಿ



ಇಸ್ಲಾಮ್ ಯಾವತ್ತಿಗೂ ಬಹುರೂಪಿಯಾಗಿರುವ, ಇಸ್ಲಾಮಿನ ಧಾರ್ಮಿಕ ಕಾನೂನಿಗಿಂತ(*ಶರಿಯತ್*) (ಶರಿಯತ್‌ನ ವಿಚಾರಗಳನ್ನು ಪೂರ್ಣವಾಗಿ ಬಿಡದಿದ್ದರೂ) ಆಧ್ಯಾತ್ಮಿಕ ವಿಷಯಗಳ ತಳಹದಿಯ ಮೇಲೆ ಎಲ್ಲವನ್ನೂ ಒಳಗೊಳ್ಳುತ್ತ ಸೃಷ್ಟಿಯಾದ ಪಂಥವಾಗಿದೆ. ಆದ್ದರಿಂದಲೇ ಅದು ಹಿಂದುಗಳ ಭಕ್ತಿ ಪಂಥದ ಮನೋಭೂಮಿಕೆಗೆ ಹತ್ತಿರವಾಗಿದೆ. ಅಲ್ಲಿನಂತೆ ಸೂಫಿ ಇಸ್ಲಾಮ್‌ನಲ್ಲಿಯೂ ಭಕ್ತಿ ಪಾರಮ್ಯತೆಯೇ ಎದ್ದು ಕಾಣುತ್ತದೆ.

ಮೂಲತಃ ಸೂಫಿಗಳು ಭಾರತದ ಬಹುಪಾಲು ಇಸ್ಲಾಮಿಕ್ ಸಾಹಿತ್ಯ ರಚನೆಯಾದ ಭಾಷೆಗಳಾದ ಪರ್ಶಿಯನ್ ಮತ್ತು ಅರೇಬಿಕ್ ಗಳೆರಡರಲ್ಲೂ ಪಂಡಿತರಾಗಿದ್ದರೂ ಸಹ, ಭಾರತದ ಸ್ಥಳೀಯ ಭಾಷೆಗಳಲ್ಲಿ ಬರೆಯುವುದರಲ್ಲಿ ಹೆಚ್ಚಿನ ಆಸಕ್ತಿ ತೋರಿಸಿದರು. ಪಂಜಾಬಿಯಲ್ಲಿ ಬರೆದ ಮಹಾನ್ ಸೂಫಿ ಸಂತ ಬಾಬಾ ಫರೀದ್ ಗಂಜ್ ಶಕಾರ್‌ನನ್ನು ಪಂಜಾಬಿ ಭಾಷೆಯ ಮೊದಲ ಕವಿ ಎಂದು ಗುರುತಿಸಲಾಗುತ್ತದೆ. ಗುರು ನಾನಕ್ ಅವರು ತಮ್ಮ ಆದಿ ಗ್ರಂಥ ಸಾಹಿಬ್‌ನಲ್ಲಿ ಬಾಬಾ ಫರೀದ್‌ರ ಸಾಲುಗಳನ್ನು ಉಲ್ಲೇಖಿಸುತ್ತಾರೆ. ಹಾಗಾಗಿ ಬಾಬಾ ಫರೀದ್ ಅವರು ಸಿಖ್ಖರಿಗೆ ಬಹಳ ಪೂಜ್ಯ ವ್ಯಕ್ತಿಯಾಗಿದ್ದಾರೆ. ಪಂಜಾಬ್ ವಿಶ್ವವಿದ್ಯಾಲಯವು ಫರೀದರ

## ಮಾನಸಿಕ ಗುಲಾಮಗಿರಿಯ ವಿಮೋಚಕ: ಡಾ. ಅಸ್ಗರ್ ಅಲಿ ಎಂಜಿನಿಯರ್



೧೯೭೨ರಲ್ಲಿ ಮುಂಬೈ ನಗರಪಾಲಿಕೆಯಲ್ಲಿ ಎಂಜಿನಿಯರ್ ಆಗಿ ಕೆಲಸಕ್ಕೆ ಸೇರಿದ್ದ ಅಸ್ಗರ್ ಅಲಿ ಎನ್ನುವ ಯುವಕ ೨೦ ವರ್ಷಗಳ ನಂತರ ಸ್ವಯಂ ನಿವೃತ್ತಿ ಪಡೆದರು. ಕಾರಣ ಅವರಿಗೆ ಮನುಷ್ಯ ಪ್ರೀತಿಯನ್ನಾಧರಿಸಿದ ಸಮಾಜ ಕಟ್ಟುವುದು ಮುಖ್ಯವೆನಿಸಿತ್ತು. ಮುಂದೆ ಅವರು ಅಸ್ಗರ್ ಅಲಿ ಎಂಜಿನಿಯರ್ ಎಂದೇ ಚಿರಪರಿಚಿತರಾದರು. ಶಿಯಾ ಇಸ್ಮಾಯಿಲಿ ಪಂಥಕ್ಕೆ ಸೇರಿದ ಅಸ್ಗರ್ ಅಲಿಯವರ ತಂದೆಯೇ ಒಬ್ಬ ಧರ್ಮ ಗುರುವಾಗಿದ್ದರು. ಆದಾಗ್ಯೂ, ಕುರ್‌ಆನ್, ಹದಿಸ್ ಮತ್ತು ಶರಿಯಾನ್ನು ಆಳವಾಗಿ ಅಧ್ಯಯನ ಮಾಡಿದ್ದ ಎಂಜಿನಿಯರ್ ಇಸ್ಲಾಂ ಹಾಗೂ ಮುಸ್ಲಿಂ ಸಮುದಾಯವನ್ನು ಹೊಲಬುಗೆಡಿಸಿದವರು ದೈವಶಾಸ್ತ್ರಜ್ಞರು ಮತ್ತು ಮುಲ್ಲಾ ಮೌಲವಿಗಳೇ ಎಂದು ನಿರ್ಭೀತರಾಗಿ ಸಾರಿದರು.

ನೈಜ ಇಸ್ಲಾಂ ಸೂಫಿ ಇಸ್ಲಾಂ ಆಗಿದ್ದು, ದೈವಶಾಸ್ತ್ರಜ್ಞರು ರೂಪಿಸಿದ ರಾಜಕೀಯ ಇಸ್ಲಾಮನ್ನು ತಿರಸ್ಕರಿಸಬೇಕು ಎಂದು ಎಂಜಿನಿಯರ್ ಕರೆ ಕೊಟ್ಟರು. ಕಾರಣ ಜನಸಾಮಾನ್ಯರಲ್ಲಿ ಜನಪ್ರಿಯರಾಗಿರುವ ಸೂಫಿಗಳಿಗೆ ಮಾನವ ಕುಲದ ಏಕತೆ ಮುಖ್ಯವಾದರೆ ದೈವ ಶಾಸ್ತ್ರಜ್ಞರು ಬಿಂಬಿಸುತ್ತ ಬಂದಿರುವ ರಾಜಕೀಯ ಇಸ್ಲಾಮಿಗೆ ಆಳುವ ವರ್ಗದ ಹಿತ ಮುಖ್ಯವಾಗಿದೆ ಎನ್ನುವುದಾಗಿತ್ತು. ಅವರು ಮುಂಬೈಯಲ್ಲಿ ಭಾರತದ ಪ್ರಗತಿಪರ ಮುಸ್ಲಿಮರಿಗೆ ಒಂದು ವೇದಿಕೆಯಾಗಿ 'Institute of Islamic Studies' ಸ್ಥಾಪಿಸಿದರು. ಅವರು 'Centre for Study of Society and Secularism'ನ ನಿರ್ದೇಶಕರಾಗಿ ಡಾ. ರಾಮ ಪುನಿಯಾನಿ ಜೊತೆ ಸೇರಿ ಕೋಮು ಸೌಹಾರ್ದ ಹಾಗೂ ಸಮಾಜಮುಖಿ ಚಿಂತನೆ ಬೆಳೆಸುವ ನಿಟ್ಟಿನಲ್ಲಿ ತಮ್ಮ ಈ ಇಳಿವಯಸ್ಸಿನಲ್ಲಿಯೂ ಕ್ರಿಯಾಶೀಲರಾಗಿದ್ದಾರೆ. ಅವರು 'Asian Muslims Action Networks'ನ ಸಂಸ್ಥಾಪಕ ಅಧ್ಯಕ್ಷರಾಗಿದ್ದಾರ

ಕಳೆದ ನಾಲ್ಕು ದಶಕಗಳಿಂದ ಸಂಪ್ರದಾಯವಾದಿಗಳ ಹಲ್ಲೆಗಳನ್ನು ಲೆಕ್ಕಿಸದೆ ಶಾಂತಿ ಹಾಗೂ ಅಹಿಂಸೆಯ ಸಂಸ್ಕೃತಿ, ಮನುಷ್ಯ ಪ್ರೀತಿ ಹಾಗೂ ಸಹಬಾಳ್ವೆಗಾಗಿ ಶ್ರಮಿಸುತ್ತ ಬಂದಿರುವ ಎಂಜಿನಿಯರ್ ಅವರ ಪಾಂಡಿತ್ಯಪೂರ್ಣ ಬರಹಗಳನ್ನು ಪ್ರಕಟಿಸುವುದೇ ದೇಶ ವಿದೇಶಗಳ ಪ್ರಮುಖ ಪತ್ರಿಕೆಗಳಿಗೆ ಹೆಮ್ಮೆಯ ವಿಷಯವೆನಿಸಿದೆ. ಜಗತ್ತಿನ ಬಹುತೇಕ ದೇಶಗಳಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಅವರು ಉಪನ್ಯಾಸ ನೀಡಿದ್ದಾರೆ. ಇತ್ತೀಚೆಗೆ ಬಿಡುಗಡೆಯಾದ ಅವರ ಆತ್ಮಚರಿತ್ರೆ 'A Living Faith: My Quest for Peace, Harmony and Social Change' ಸೇರಿದಂತೆ ಸುಮಾರು ಐವತ್ತಕ್ಕೂ ಹೆಚ್ಚು ಮೌಲಿಕ ಗ್ರಂಥಗಳನ್ನು ರಚಿಸಿರುವ ಎಂಜಿನಿಯರ್ ಅವರಿಗೆ ರೈಟ್ ಲಿವಲಿಹುಡ್ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಕೊಲಕತ್ತಾ ವಿಶ್ವವಿದ್ಯಾಲಯವು ಅವರಿಗೆ ಡಿ. ಲಿಟ್. ನೀಡಿ ಗೌರವಿಸಿದೆ.

**–ಹಸನ್ ನಯೀಂ ಸುರಕೋಡ**

ಹೆಸರಿನಲ್ಲಿ ಅಧ್ಯಯನ ಪೀಠವೊಂದನ್ನು ಸ್ಥಾಪಿಸಿ, ನಿಯಮಿತವಾಗಿ ಒಂದು ಪತ್ರಿಕೆಯನ್ನೂ ಸಹ ಹೊರತರುತ್ತಿದೆ.

ಬಹುಸಂಸ್ಕೃತಿಗಳ ಸಹಯೋಗದಲ್ಲಿಯೇ ಸೃಷ್ಟಿಯಾದ ಸೂಫಿ ಇಸ್ಲಾಮ್ ಭಾರತದಂತಹ ಬಹು ಧರ್ಮಗಳ ತವರೂರಿನಲ್ಲಿ ಜನಪ್ರಿಯವಾಗಲು, ಮುಖ್ಯವಾಗಿ ಹಿಂದೂ ಧರ್ಮೀಯರ ನಡುವೆ, ತಡವಾಗಲಿಲ್ಲ. ಆದ್ದರಿಂದ ಅಜ್ಮೀರ್‌ನ ಶೇಕ್ ಮೊಯಿನುದ್ದೀನ್ ಚಿಸ್ತಿಯವರ ದರ್ಗಾ, ದೆಹಲಿಯ ಹಜರತ್ ನಿಜಾಮುದ್ದೀನ್ ದರ್ಗಾಗಳಲ್ಲೆಲ್ಲ ಬಹಳಷ್ಟು ಸಂಖ್ಯೆಯಲ್ಲಿ ಹಿಂದೂಗಳು ಸೇರುತ್ತಾರೆ. ಸಾವಿರಾರು ಸಂಖ್ಯೆಯಲ್ಲಿ ಹಿಂದೂ ಸ್ತ್ರೀಯರು ಬಂದು ತಮ್ಮ ಸಮಸ್ಯೆಗಳು ಪರಿಹಾರವಾದರೆ ದರ್ಗಾದ ಸಮಾಧಿಗೆ ಚಾದರವನ್ನು ಹೊದಿಸುವ ಹರಕೆಯನ್ನು ಹೊರುತ್ತಾರೆ.

ಇನ್ನೊಂದು ಅಚ್ಚರಿಯ ವಿಷಯ. ಶಾಜಹಾನನ ದೊಡ್ಡ ಮಗ ದಾರಾ ಶಿಕೋ ಭಾರತದಲ್ಲಿ ಅಷ್ಟೇನೂ ಜನಪ್ರಿಯವಲ್ಲದ ಖಾದರಿಯಾ ಪಂಥಕ್ಕೆ ಸೇರಿದ್ದ ಸೂಫಿಯಾಗಿದ್ದ. ಅವನು ಹಿಂದೂ ಧರ್ಮದ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ್ದ ಪಂಡಿತನಾಗಿದ್ದ. ಹಿಂದೂ ಧರ್ಮದ ಮೂಲ ಧಾರ್ಮಿಕ ಗ್ರಂಥಗಳನ್ನು ಅರ್ಥ ಮಾಡಿಕೊಳ್ಳಲಿಕ್ಕಾಗಿಯೇ ಅವನು ಸಂಸ್ಕೃತವನ್ನು ಕಲಿತ. ಉಪನಿಷತ್‌ಗಳನ್ನ ಪರ್ಶಿಯನ್ ಭಾಷೆಗೆ ಅನುವಾದ ಮಾಡಿ, ತೌಹೀದ್‌ನ ಪರಿಕಲ್ಪನೆ ಕುರಾನ್‌ನಲ್ಲಿ ಬಿಟ್ಟರೆ ಉಪನಿಷತ್‌ಗಳಲ್ಲಿ ಮಾತ್ರ ದೊರಕುತ್ತದೆ ಎಂಬುದನ್ನು ಅರಿತುಕೊಂಡಿದ್ದ.

ಅವನು ಹಿಂದೂ ಧರ್ಮ ಹಾಗೂ ಇಸ್ಲಾಮ್‌ಗಳನ್ನು ತೌಲನಿಕವಾಗಿ ವಿಶ್ಲೇಷಣೆ ಮಾಡುವ ಮಜ್‌ಮಾ-ಉಲ್-ಬಹರೈನ್ ಎಂಬ ಮಹಾನ್ ಕೃತಿಯನ್ನು ರಚಿಸಿದ್ದ. ಅದರಲ್ಲಿ ಎರಡೂ ಧರ್ಮಗಳಲ್ಲಿ ಎಷ್ಟೊಂದು ಸಾಮ್ಯತೆಗಳಿವೆ ಎಂಬುದನ್ನು ತೋರಿಸಿದ್ದ. ನಿಜವಾಗಿ ರಾಷ್ಟ್ರೀಯ ಏಕತೆ-ಭಾವೈಕ್ಯತೆಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವುದಾದರೆ ಈ ಪುಸ್ತಕವನ್ನು ಕಡ್ಡಾಯವಾಗಿ ಓದಿಸಬೇಕು. ದುರಾದೃಷ್ಟದ ಮಾತೆಂದರೆ ಈ ಪುಸ್ತಕವನ್ನು ಎಲ್ಲರೂ ಮರೆತುಬಿಟ್ಟಿದ್ದಾರೆ.ಬಹಳ ಜನಕ್ಕೆ ಅದರ ಹೆಸರೂ ಸಹ ಗೊತ್ತಿಲ್ಲ. ಇಂಥ ಪುಸ್ತಕಗಳನ್ನು ಕೈಬಿಟ್ಟು ವಿದ್ಯಾರ್ಥಿಗಳಲ್ಲಿ ಅಪನಂಬಿಕೆ, ಅಸಹನೆಯ ಭಾವನೆಗಳನ್ನು ಗಟ್ಟಿಗೊಳಿಸುವ ವಿಷಯಗಳನ್ನು ಕಲಿಸಲಾಗುತ್ತಿದೆ.

ಸೂಫಿ ಇಸ್ಲಾಮ್ ಹಿಂದೂ-ಮುಸ್ಲಿಮರನ್ನು ಹತ್ತಿರ ತಂದಿದ್ದೇ ಅಲ್ಲದೆ, ಎರಡೂ ಸಂಸ್ಕೃತಿಗಳು ಬೆರೆತು ಪರಿಪಾಕಗೊಂಡ ಸಹಬಾಳ್ವೆಯ ಸಮೃದ್ಧ ನೆಲೆಗಟ್ಟನ್ನು ರೂಪಿಸಿತು. ಇಂಥ ಸಾಂಸ್ಕೃತಿಕ ಮೇಳೈಕೆಗಳ ಇತಿಹಾಸವನ್ನು ನಮ್ಮ ಯುವಜನತೆ ಅರಿತುಕೊಳ್ಳುವುದು ಬಹಳ ಅಗತ್ಯವಾಗಿದೆ.

ಇದಕ್ಕೆ ವ್ಯತಿರಿಕ್ತವಾಗಿ ವಹಾಬಿ ಇಸ್ಲಾಮ್ ಇಂದಿನ ಸೌದಿ ಅರೇಬಿಯಾದ ಭಾಗವಾಗಿದ್ದ ನಜ್ದ್ ಎಂಬ ಪ್ರದೇಶದಲ್ಲಿ ೧೮ನೇ ಶತಮಾನದಲ್ಲಿ ರೂಢಿಗೆ ಬಂತು. ಮಹಮದ್ ಅಬ್ದುಲ್ ವಹಾಬ್ ಇದರ ಸಂಸ್ಥಾಪಕ. ಅಬ್ದುಲ್ ವಹಾಬ್ ಸೂಫಿ ಇಸ್ಲಾಮ್‌ನ ತತ್ವಗಳಿಗೆ ವಿರೋಧ ವ್ಯಕ್ತಪಡಿಸಿದ್ದೇ ಅಲ್ಲದೆ, ಅದು ಶುದ್ಧ ಇಸ್ಲಾಮಿಕ್ ತತ್ವಗಳ ದೋಷಪೂರಿತ ಆವೃತ್ತಿ ಎಂದು ನಂಬಿದ್ದ.

ಸೂಫಿ ಇಸ್ಲಾಮ್‌ನಲ್ಲಿ ಸೂಫಿ ಸಂತರ ದರ್ಗಾಗಳಿಗೆ ಭೇಟಿ ನೀಡುವುದು, ಅಲ್ಲಿ ಫಾತೆಹಾ ಮಾಡುವುದು ಮೊದಲಾದ ಆಚರಣೆಗಳನ್ನು ಪುರಸ್ಕರಿಸಲಾಗುತ್ತದೆ. ಆದರೆ ಇವು ವಹಾಬಿ ಇಸ್ಲಾಮ್‌ನ ಪ್ರಕಾರ ಇಸ್ಲಾಮ್ ವಿರೋಧಿ ಆಚರಣೆಗಳು. (ಫಾತೆಹಾ ಅಂದರೆ ಸೂಫಿ ಸಂತರ ಹೆಸರಿನಲ್ಲಿ ಧ್ಯಾನ ಮಾಡುವುದು ಮತ್ತು ಅವರ ಹೆಸರಿನಲ್ಲಿ ಹರಕೆ ಹೊರುವುದು. ಇಸ್ಲಾಮ್‌ನಲ್ಲಿ ದೈವಾರಾಧನೆಗೆ ಅವಕಾಶ-ತೌಹೀದ್- ಇದೆಯೇ ವಿನಾ ದೇವರಿಗೆ ಸಮನಾಗಿ ಇನ್ನಾರನ್ನೂ ಪರಿಗಣಿಸುವುದು ಮೂರ್ತಿಪೂಜೆಗೆ-ಶಿರ್ಕ್‌ಗೆ- ಸಮನಾದದ್ದು ಎಂಬ ಕಾರಣಕ್ಕಾಗಿ ಅಬ್ದುಲ್ ವಹಾಬ್ ಸೂಫಿಗಳ ದರ್ಗಾರಾಧನೆಯನ್ನು ಖಂಡಿಸಿದ್ದ). ಮುಂದುವರೆಸಿ ಹೇಳುವುದಾದರೆ, ವಹಾಬಿ ಇಸ್ಲಾಮ್ ಪ್ರವಾದಿ ಮಹಮ್ಮದರ ಹೆಸರನ್ನು ಉಚ್ಚರಿಸುವುದನ್ನು ಮತ್ತು ಅವರ ಸಮಾಧಿಗೆ ಭೇಟಿ ನೀಡುವುದು- ಅಲ್ಲಿ ಪ್ರಾರ್ಥನೆ ಮಾಡುವುದನ್ನೂ ಸಹ ನಿಷೇಧಿಸುತ್ತದೆ.

ಇಲ್ಲಿ ಯಾರು ಸರಿ ಯಾರು ತಪ್ಪು ಎಂಬುದನ್ನು ನಿರ್ಧರಿಸುವುದೇ ಮುಖ್ಯ ವಿಷಯವಲ್ಲ. ವಹಾಬಿಗಳು ತಮ್ಮಷ್ಟಕ್ಕೆ ತಾವೇ



ಸರಿ ಎಂದು ವಾದಿಸಬಹುದು. ಆದರೆ ಸೂಫಿ ಇಸ್ಲಾಮ್‌ನ್ನು ಇಸ್ಲಾಮಿನ ದೋಷಪೂರಿತ ಆಚರಣೆ ಎಂದು ಕರೆಯುವುದು ಸರಿಯಲ್ಲ. ಪ್ರಪಂಚದ ಯಾವ ರಾಜಕೀಯ ಅಥವಾ ಧಾರ್ಮಿಕ ಸಿದ್ಧಾಂತವೂ 'ಶುದ್ಧ'ವಾಗಿ ಉಳಿಯಲು ಸಾಧ್ಯವಿಲ್ಲ. ಮಾರ್ಕ್ಸ್‌ವಾದವೂ ಇದಕ್ಕೆ ಅಪವಾದವಲ್ಲ.

ಗಮನಿಸಬೇಕಾದ ಸಂಗತಿಯೆಂದರೆ, ಯಾರು ತಮ್ಮ ಸಿದ್ಧಾಂತಗಳನ್ನು ರಾಜಕೀಯ ಅಧಿಕಾರಕ್ಕೆ ಮೆಟ್ಟಿಲನ್ನಾಗಿ ಬಳಸಿಕೊಳ್ಳುತ್ತಾರೋ ಅವರು ಇಂಥ 'ಶುದ್ಧತೆ'ಯ ಮಂತ್ರವನ್ನು ಜಪಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಸಮಾಜದಲ್ಲಿ ಎಲ್ಲರ ಸಹಬಾಳ್ವೆಯನ್ನು ಆಶಿಸುವವರು ತಮ್ಮ ಸಿದ್ಧಾಂತಗಳ ಶುದ್ಧತೆಯ ವಿಷಯದಲ್ಲಿ ಉದಾರವಾಗಿರಲು ಹಿಂಜರಿಯುವುದಿಲ್ಲ.

ವಹಾಬಿಗಳು ರಾಜಕೀಯ ಅಧಿಕಾರವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದರೆ, ಸೂಫಿಗಳು ಅಧಿಕಾರದಿಂದ ಸಂಪೂರ್ಣವಾಗಿ ದೂರ ಉಳಿಯಲು ಬಯಸಿದರು. ಸೂಫಿ ಇಸ್ಲಾಮ್ ಮೂಲತಃ ಎಲ್ಲರನ್ನೂ ಒಳಗೊಳ್ಳುವ, ಜನಮುಖಿ ಸಿದ್ಧಾಂತವಾಗಿರುವುದರಿಂದ ಅದಕ್ಕೆ ಅಧಿಕಾರವನ್ನು ಪಡೆಯುವುದೇ ದೊಡ್ಡ ಸಂಗತಿಯಾಗಿರಲಿಲ್ಲ. ರಾಜಕೀಯ ಅಧಿಕಾರವು ಎಲ್ಲ ಕಾಲದಲ್ಲಿಯೂ ಜನವಿರೋಧಿಯಾಗಿ, ಎಲ್ಲ ಬಗೆಯ ಶೋಷಣೆಗಳಿಗೆ ಮುಕ್ತ ಪರವಾನಗಿಯನ್ನು ಮಾಡಿಕೊಡುತ್ತದೆ ಎಂಬುದು ಸೂಫಿಗಳಿಗೆ ತಿಳಿದಿತ್ತು.

ಪ್ರಜಾಪ್ರಭುತ್ವವಾದಿ ವ್ಯವಸ್ಥೆಯೂ ಸಹ ಕೆಲವೊಮ್ಮೆ ಆಯ್ದ ಕೆಲವು ಗುಂಪುಗಳ, ಸಮುದಾಯಗಳ ಹಿತರಕ್ಷಣೆಗೆ ಮಾತ್ರ ಸೀಮಿತಗೊಂಡು ತನ್ನ ಜನಪರ ಧೋರಣೆಯಿಂದ ವಿಮುಖವಾಗುತ್ತದೆ. ಮೊಗಲರ ಕಾಲದಲ್ಲಿ ಮುಸ್ಲಿಮರ ಹಲವು ವಂಶಗಳು ಇಡೀ ಭಾರತದಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದಾಗ ಸೂಫಿಗಳು ಅಧಿಕಾರದ ಕೇಂದ್ರಗಳಿಂದ ಬಹಳ ದೂರವೇ ಉಳಿದಿದ್ದರು. ಅವರಿಗೆ ರಾಜನ ಒಡ್ಡೋಲಗಕ್ಕೆ ಹತ್ತಿರವಾಗಿರುವುದಕ್ಕಿಂತ ಜನರ ಪ್ರೀತಿಯನ್ನು ಸಂಪಾದಿಸುವುದು ಮುಖ್ಯವಾಗಿತ್ತು.

ಆದ್ದರಿಂದ ಮುಸ್ಲಿಮರಲ್ಲಿ ಯಾರಿಗೆ ಅಧಿಕಾರವನ್ನು ಸಂಪಾದಿಸುವುದು ಮುಖ್ಯ ಎನಿಸಿದೆಯೋ ಅವರು ಸೂಫಿ ಇಸ್ಲಾಮನ್ನು ಪ್ರೀತಿಯಿಂದ ಕಂಡಿಲ್ಲ. ಸ್ವತಃ ಕವಿ ಇಕ್ಬಾಲರೂ ಆರಂಭದಲ್ಲಿ ಸೂಫಿ ತತ್ವಗಳನ್ನು ಅವು ಮನುಷ್ಯನನ್ನು ದೈವತ್ವಕ್ಕೇರಿಸುವ 'ಖುದಿ'ಯನ್ನು ಸಂಪಾದಿಸಲು ಅಡ್ಡಿಯಾಗುತ್ತವೆ ಎಂಬ ಕಾರಣಕ್ಕೆ ವಿರೋಧಿಸಿದ್ದರು. ಆ ಹಂತದಲ್ಲಿ ಇಕ್ಬಾಲರಿಗೆ ಸೂಫಿ ಪಂಥವು 'ದೀನತೆ'ಗೆ (ಶರಣಾಗುವಿಕೆ) ಹೆಚ್ಚು ಒತ್ತು ನೀಡುವುದರಿಂದ ಅದು ಮನುಷ್ಯ ತಾನು ಹೊಂದಬೇಕಾಗಿರುವ 'ಖುದಿ'(ದೈವತ್ವ)ಗೆ ಅಡ್ಡಿಯಾಗುತ್ತದೆಂದು ಭಾವಿಸಿದ್ದರು.

ಆದರೆ, ನಂತರ ಇಕ್ಬಾಲ್‌ರಿಗೆ ಸೂಫಿತತ್ವಗಳ ಮಹತ್ವ ಅರಿವಾಗಿ, ನಂತರ ಸೂಫಿ ಕವಿಗಳಾದ ಹಾಫಿಜ್, ಸಾದಿ, ರೂಮಿ ಮೊದಲಾದವರ ಕಾವ್ಯವನ್ನು ಬಹುವಾಗಿ ಮೆಚ್ಚಿಕೊಂಡರು. ಅವರ ಪ್ರಕಾರ ರೂಮಿ ಒಬ್ಬ 'ಪೀರ್'- ಅಂದರೆ ಒಬ್ಬ ಆಧ್ಯಾತ್ಮಿಕ ಗುರು. ಅವರ ಕಾವ್ಯವನ್ನು ಇಕ್ಬಾಲರು ಮತ್ತೆ ಮತ್ತೆ ಉಲ್ಲೇಖಿಸುವುದನ್ನು ಕಾಣಬಹುದು. ಸೂಫಿ ಪಂಥದ ವಿಚಾರಗಳು-ಅದರಲ್ಲೂ ಮುಖ್ಯವಾಗಿ ಮೊಹಿಯುದ್ದೀನ್ ಇಬ್ನ್ ಅರಬಿಯವರಿಂದ ಸ್ಥಾಪಿತವಾದ ಚಿಸ್ತಿಯಾ

ಸೂಫಿಸಮ್-ಚಿಗುರೊಡೆಯಲು ಭಾರತಕ್ಕಿಂತ ಪ್ರಶಸ್ತವಾದ ನೆಲ ಬೇರೆಲ್ಲಿಯೂ ಸಿಗಲು ಸಾಧ್ಯವಿಲ್ಲ. ಈ ಪಂಥವು 'ಸರ್ವರ ಏಕತೆ'ಯ -ಸೃಷ್ಟಿಯ ಎಲ್ಲ ಜೀವಿಗಳೂ ಮೂಲತಃ ಒಂದೇ ಆಗಿದ್ದು ಅವು ಬೇರೆ ಬೇರೆ ರೂಪಗಳಲ್ಲಿ ಅಭಿವ್ಯಕ್ತಗೊಂಡಿವೆ ಎಂಬ-ತತ್ವವನ್ನು ಪ್ರತಿಪಾದಿಸಿತು.

ವಹಾಬಿ ಇಸ್ಲಾಮ್ ಮುಖ್ಯವಾಗಿ ರಾಜಕೀಯ ಇಸ್ಲಾಮನ್ನು ಎತ್ತಿಹಿಡಿಯುತ್ತದೆ. ಹಾಗಾಗಿ ಹತ್ತೊಂಬತ್ತನೇ ಶತಮಾನದಲ್ಲಿ ಮೊಗಲರ ಆಳ್ವಿಕೆಯ ನಂತರ ಮುಸ್ಲಿಮರು ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಬಲಹೀನರಾದ ಸಂದರ್ಭದಲ್ಲಿ ವಹಾಬಿ ಇಸ್ಲಾಮ್‌ಗೆ ಪ್ರೋತ್ಸಾಹ ದೊರೆಯಿತು.ಅದರ ಇತಿಹಾಸ ಭಾರತದ ಇತಿಹಾಸದಂತೆಯೇ ವೈವಿಧ್ಯಮಯವಾಗಿದೆ. ಅದು ಆರಂಭದಲ್ಲಿ ಬ್ರಿಟಿಷರ ವಿರುದ್ಧ ಹಾಗೆಯೇ ರೈತರನ್ನು ಶೋಷಿಸುವ ಭೂಮಾಲೀಕರ ವಿರುದ್ಧದ ಹೋರಾಟವಾಗಿತ್ತು. ಬಂಗಾಳದಲ್ಲಿ ರೈತಾಪಿ ಕೆಲಸಮಾಡುವವರು ಮುಸ್ಲಿಮರೇ ಆಗಿದ್ದು ಅವರ ನೇತೃತ್ವ ವಹಿಸಿದ್ದು ದಾದು ಮಿಯಾ ಮತ್ತು ಟಿಟೂ ಮಿಯಾ ಎಂಬ ವಹಾಬಿಗಳು. ಆದರೆ ಉತ್ತರ ಪ್ರದೇಶದಲ್ಲಿ ವಹಾಬಿ ಇಸ್ಲಾಮ್ ಮುಖ್ಯವಾಗಿ ಬ್ರಿಟಿಷ್ ವಿರೋಧಿ ನಿಲುವನ್ನು ಹೊಂದಿತ್ತು.

ಹತ್ತೊಂಬತ್ತನೇ ಶತಮಾನದಲ್ಲಿ ದಾರುಲ್ ಉಲೂಮ್ ದೇವಬಂದ್ ಅನ್ನು ಸ್ಥಾಪಿಸಿದ ಕಾರಣಕ್ಕೆ ಭಾರತದಲ್ಲಿ ವಹಾಬಿಗಳನ್ನು ದೇವಬಂದಿಗಳೆಂದು ಕರೆಯಲಾಗುತ್ತದೆ. ಅಂದಿನಿಂದ ದಾರುಲ್ ಉಲೂಮ್ ಬ್ರಿಟಿಷರ ವಿರುದ್ಧ ಹೋರಾಡುತ್ತ ಬಂದಿದ್ದು ಭಾರತದ ಸ್ವಾತಂತ್ರ ಹೋರಾಟದಲ್ಲಿಯೂ ಮುಖ್ಯ ಪಾತ್ರ ವಹಿಸಿತು. ಅದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸನ್ನು ಬೆಂಬಲಿಸಿತು. ನಂತರ ತನ್ನ ಜಾತ್ಯತೀತ ನಿಲುವಿನಿಂದ ಜಿನ್ನಾರ 'ಎರಡು ದೇಶಗಳ' ಸಿದ್ಧಾಂತವನ್ನು ವಿರೋಧಿಸಿತು. ಹೀಗಾಗಿ ದೇವಬಂದಿಗಳಲ್ಲಿ ಈ ಬಗೆಯ - ರಾಜಕೀಯವಾಗಿ ಪ್ರಗತಿಪರವಾಗಿದ್ದು, ಧಾರ್ಮಿಕವಾಗಿ ಸಂಪ್ರದಾಯವಾಗಿರುವ-ವಿರೋಧಾಭಾಶವನ್ನು ಕಾಣುತ್ತೇವೆ.

ಆದರೆ ದೇವಬಂದಿಗಳು ಇತ್ತೀಚೆಗೆ ಸೂಫಿ ಇಸ್ಲಾಂ ಬಗ್ಗೆ ಕ್ರೋಧಿತರಾಗಿದ್ದು, ಈ ಎರಡೂ ಪರಸ್ಪರ ಟೀಕೆಗಳಲ್ಲಿ ನಿರತವಾಗಿವೆ. ಸೌದಿ ಅರಬ್ಬರು ಸೂಫಿ ಇಸ್ಲಾಮನ್ನು ಸಹಿಸದಿರುವುದರಿಂದ ದೇವಬಂದಿಗಳು ಸೌದಿಗಳಿಗೆ ಸೈದ್ಧಾಂತಿಕವಾಗಿ ಹೆಚ್ಚು ನಿಕಟವಾಗುತ್ತಿದ್ದು ಸೂಫಿ ಇಸ್ಲಾಮಿನ ಬಗ್ಗೆ ತೀವ್ರ ಅಸಹನೆಯನ್ನು ತೋರಿಸಲರಂಭಿಸಿದ್ದಾರೆ. ಸೌದಿಗಳು ಇಸ್ಲಾಮಿ ದೇಶಗಳಿಗೆ ಅಪಾರ ಹಾಣ ಸುರಿಯುತ್ತಿದ್ದು ಸಲಾಫಿ ಇಸ್ಲಾಮನ್ನು ಜನಪ್ರಿಯಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಸಲಾಫಿ ಇಸ್ಲಾಂ ಅತ್ಯಂತ ಅಸಹನೆಯ ಮತ್ತು ಅತಿ ಪ್ರತ್ಯೇಕತೆಯ ಪಂಥವಾಗಿದ್ದು ಇತಿಹಾಸದಲ್ಲಿ ಬಹು ಹಿಂದಕ್ಕೆ ಹೋಗಿ ಅತಿ ಪೂರ್ವದ ಮುಸ್ಲಿಮರು ಆಚರಿಸುತ್ತಿದ್ದ ಇಸ್ಲಾಮನ್ನು ಅನುಸರಿಸ ಬಯಸುತ್ತದೆ

ಇತ್ತೀಚಿನ ವರ್ಷಗಳಲ್ಲಿ ಸೌದಿಯ ಪ್ರಭಾವದಿಂದಾಗಿ ಸಲಾಫಿ ಇಸ್ಲಾಂ ಮುಸ್ಲಿಮರಲ್ಲಿ ತೀವ್ರ ಗತಿಯಲ್ಲಿ ಹರಡುತ್ತಿದ್ದು, ಇದು ಉಗ್ರಗಾಮಿತ್ವಕ್ಕೆ ದಾರಿ ಮಾಡಿಕೊಡುತ್ತಿದೆ. ಆಫ್ಘಾನಿಸ್ಥಾನದಲ್ಲಿನ ಸೋವಿಯತ್ ಕಾರ್ಯಾಚರಣೆಯ ಸಮಯದಲ್ಲಿ ಇಸ್ಲಾಮಿ ಉಗ್ರವಾದಿಗಳು ತನ್ನ ಕಡೆ ಇರುವರೆಂದು ಭಾವಿಸಿದ್ದ ಅಮೆರಿಕಾವೂ ಸಲಾಫಿ ಇಸ್ಲಾಮನ್ನು ಪ್ರೋತ್ಸಾಹಿಸಿತು. ಇಂದು ಅಮೇರಿಕಾ ಅದಕ್ಕಾಗಿ ಬೆಲೆ ತೆರುತ್ತಿದೆ. ತನ್ನ ಹಿತಾಸಕ್ತಿಗೆ ತಾತ್ಕಾಲಿಕವಾಗಿಯಾದರೂ ಸಹಾಯಮಾಡುತ್ತದೆ ಎನ್ನಿಸಿದರೆ ಅಮೆರಿಕಾ ಮತೀಯ ಉಗ್ರವಾದಿತ್ವವನ್ನು ಬಳಸಿಕೊಳ್ಳಲು ಎಂದೂ ಹಿಂಜರಿಯದು. ಹಾಗಾಗಿ ಸಲಾಫಿ ಇಸ್ಲಾಂ ಇಂದು ತೀವ್ರ ಗತಿಯಲ್ಲಿ ಹರಡುತ್ತಿದ್ದರೆ ಅದಕ್ಕೆ ಅಮೆರಿಕಾ ಕಡಿಮೆ ಹೊಣೆಗಾರನೇನಲ್ಲ.

ಮತ್ತೆ ಸೌದಿ ಪ್ರಭಾವದಿಂದಾಗಿ ಸರ್ಕಾರ ತನ್ನೆಲ್ಲ ವ್ಯವಹಾರಗಳಲ್ಲಿ ಬಹುಸಂಖ್ಯಾತರಾಗಿರುವ ಸೂಫಿ ಇಸ್ಲಾಂನ ಪ್ರತಿನಿಧಿಗಳಿಗೆ ಬದಲಾಗಿ ದೇಬಂದಿಗಳಿಗೇ ಹೆಚ್ಚು ಮಹತ್ವ ನೀಡುತ್ತಿದೆ. ಇತ್ತೀಚೆಗೆ ಅಯೋಧ್ಯೆಯಿಂದ ನಿಜಾಮುದ್ದೀನ್ ಅವ್ಲಿಯಾವರೆಗಿನ ನಮ್ಮ ಶಾಂತಿ ಯಾತ್ರೆ ಹಜ್ರತ್ ನಿಜಾಮುದ್ದೀನರ ಸಮಾಧಿಯ ಬಳಿ ಕೊನೆಗೊಂಡ ಸಂದರ್ಭದಲ್ಲಿ ಸಜ್ಜಾದಾ ನಶೀನ್ ಅವರು ಹಿಂದೂ, ಸಿಖ್, ಪಾರ್ಸಿ, ಕ್ರಿಶ್ಚಿಯನ್ ಹೀಗೆ ಎಲ್ಲರೂ ಭೇಟಿ ನೀಡುವಂತಹ ಉದಾರವಾದಿ ಪಂಥವನ್ನು ಪ್ರತಿನಿಧಿಸುವ ನಮ್ಮನ್ನು ಯಾವುದೇ ಸರ್ಕಾರಿ ನಿಯೋಗಗಳಲ್ಲಿ ಸೇರಿಸಿಕೊಳ್ಳುತ್ತಿಲ್ಲವೆಂದು ಸಾಕಷ್ಟು ಖಾರವಾಗಿಯೇ ದೂರಿದರು.

ಈ ಹಿನ್ನೆಲೆಯಲ್ಲೇ ಮತ್ತು ಹತಾಶೆಯಲ್ಲೇ ಸೈಯ್ಯದ್ ಬಾಬರ್ ಅಶ್ರಾಫ್ ಮೊರದಾಬಾದ್‌ನಲ್ಲಿ, ಆರಂಭದಲ್ಲಿ ನಾನು ಪ್ರಸ್ತಾಪಿಸಿದ ಮಾತುಗಳನ್ನಾಡಿದ್ದು. ಮುಸ್ಲಿಮರು ಏಕತೆ(ಇತ್ತಿಹಾದ್)ಯ ದೀಕ್ಷೆ ಕೈಗೊಳುತ್ತಿರುವಾಗಲೇ ಪಂಥೀಯ ಘರ್ಷಣೆಗಳಲ್ಲಿ ತೊಡಗಿರುವುದು ದುರದೃಷ್ಟಕರ. ಈ ದೃಷ್ಟಿಯಿಂದ ಎರಡೂ ವಿಚಾರ ಲಹರಿಗಳ ನಡುವೆ ಸಮನ್ವಯ ಸಾಧಿಸುವ ಪ್ರಯತ್ನ ಮಾಡಿದ ಷಾ ವಲಿಯುಲ್ಲಾರ ಸಾಮಾಜಿಕ ದರ್ಶವನ್ನು ಮೆಚ್ಚಬೇಕು. ಆದರೆ ಅವರ ವಿಚಾರಗಳನ್ನು ಇಂದು ಅಂಚಿಗೆ ತಳ್ಳಿ, ಅಸಹನೆಯನ್ನು ಪೋಷಿಸಲಗುತ್ತಿದೆ.

ಭಾರತವು ಶತಮಾನಗಳಿಂದ ಸಾಂಸ್ಕೃತಿಕ ವೈವಿಧ್ಯತೆ ಮತ್ತು ಸಹಬಾಳ್ವೆಯನ್ನು ಪಾಲಿಸುತ್ತಾ ಬಂದಿದ್ದರಿಂದ ಸೂಫಿ ಇಸ್ಲಾಮ್‌ಗೆ ಬಹು ದೊಡ್ಡ ಬೆಂಬಲ ದೊರಕಿತು. ಕೆಲವು ಮುಸ್ಲಿಮರು ಸೂಫಿ ಇಸ್ಲಾಮನ್ನು ಒಪ್ಪುವುದಿಲ್ಲ. ಅದು ಅವರ ನಂಬಿಕೆಯ ಪ್ರಶ್ನೆಯಾದರೂ ಅಂಥವವರು ಸೂಫಿಗಳನ್ನು ಹಾಗೂ ಸೂಫಿ ದರ್ಗಾಗಳಿಗೆ ಹೋಗುವವರನ್ನು ಗೌರವದಿಂದ ಕಾಣುವುದನ್ನು ಕಲಿಯಬೇಕು. ಇಸ್ಲಾಮ್ ವೈರಾಗ್ಯಕ್ಕಿಂತ ಬಯಕೆಗಳ ನಿಗ್ರಹ ಹಾಗೂ ಅಧಿಕಾರದಿಂದ ದೂರ ಇರುವ ತತ್ವಕ್ಕೆ ಪ್ರಾಮುಖ್ಯತೆ ನೀಡುವುದರಿಂದ ವೈರಾಗ್ಯವನ್ನು ವೈಭವೀಕರಿಸದಿದ್ದರೂ ಸೂಫಿ ಇಸ್ಲಾಮ್ ಮೂಲತಃ ಒಂದು ಆಧ್ಯಾತ್ಮಿಕ ತಳಹದಿಯ ಮೇಲೆ ನಂತಿದೆ. ಆ ಕಾರಣಕ್ಕಾಗಿಯೇ ಅದು ಇಂದಿಗೂ ಬಹುಸಂಸ್ಕೃತಿಗಳನ್ನು ಪೋಷಿಸುವ-ಒಳಗೊಳ್ಳುವ ಪಂಥವಾಗಿ ಉಳಿದುಕೊಂಡಿದೆ.

# ನನ್ನ ನಿಜವಾದ ಅಸ್ತಿತ್ವವನ್ನು ಹುಡುಕುತ್ತಾ...

-ಜ಼ಹುರ್ ಜೈದಿ



**ನಾ**ನು ಇತ್ತೀಚೆಗೆ ಇಂಡೋನೇಶಿಯಾದ ರಾಜಧಾನಿ ಯೋಗ್ಯಾಕಾರ್ತಾಕ್ಕೆ ಹೋಗಿದ್ದಾಗ ಪ್ರಂಬನನ್ ದೇವಾಲಯ(ಬ್ರಹ್ಮ ವಿಷ್ಣು ಮತ್ತು ಶಿವನಿಗೆ ಅರ್ಪಿತವಾಗಿರುವ)ದ ಹಿನ್ನೆಲೆಯಲ್ಲಿ ಎರಡು ಗಂಟೆಗಳ ರಾಮಾಯಣದ ಸುಂದರ ಬ್ಯಾಲೆಯೊಂದನ್ನು ಪ್ರದರ್ಶಿಸಿದ್ದನ್ನು ನೋಡಿದೆ. ಮರುದಿನ ಯೋಗ ಕೇಂದ್ರವೊಂದಕ್ಕೆ ಹೋದಾಗ ಇಂಡೋನೇಶಿಯಾದ ಹುಡುಗ-ಹುಡುಗಿಯರು ಯೋಗವನ್ನು ಅಭ್ಯಾಸ ಮಾಡುತ್ತಿರುವುದನ್ನು ನೋಡಿ ನನಗೆ ಹೆಮ್ಮೆಯೆನಿಸಿತು.

ಅವರಲ್ಲೊಬ್ಬ ಹುಡುಗಿ ತಲೆಗೆ ಇಸ್ಲಾಮಿಕ್ ಪದ್ಧತಿಯಂತೆ ವಸ್ತ್ರವೊಂದನ್ನು ಸುತ್ತಿಕೊಂಡು ಬೇರೆಲ್ಲ ಚಟುವಟಿಕೆಗಳಲ್ಲಿ ಬಹಳ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದಳು. ಆದರೆ ಸೂರ್ಯನಮಸ್ಕಾರವನ್ನು ಮಾಡುವ ಸಮಯ ಬಂದಾಗ ಅದನ್ನು ಮಾಡಲು ನಿರಾಕರಿಸಿದಳು.

ತರಗತಿ ಮುಗಿದ ನಂತರ ದಿನ್ನಾ ಸರಸ್ವತಿ ಎಂಬ ಹೆಸರಿನ ಯೋಗ ಶಿಕ್ಷಕಿ ಆ ಹುಡುಗಿ ಯಾಕೆ ಹಾಗೆ ಮಾಡಿದಳು ಎಂಬುದನ್ನು ವಿವರಿಸಿದಳು. ಮುಸ್ಲಿಮಳಾಗಿದ್ದ ಆ ಹುಡುಗಿಗೆ ತನ್ನ ಧರ್ಮದ ನಂಬಿಕೆಯ ಪ್ರಕಾರ ಸೂರ್ಯನಿಗೆ ನಮಸ್ಕಾರ ಹಾಕುವುದು ನಿಷಿದ್ಧ. ಯೋಗ ಆಕೆಗೆ ಬರಿಯ ದೈಹಿಕ ವ್ಯಾಯಾಮ ಮಾತ್ರ ಆಗಿತ್ತು.

ಅಂದು ಸಂಜೆ ನನಗೆ ಔತಣಕೂಟವನ್ನು ಏರ್ಪಡಿಸಿದವರು ರಾಮಾಯಣದ ಬ್ಯಾಲೆಯನ್ನು ನೆರವೇರಿಸಿದ ಗುಂಪಿನ ಸದಸ್ಯರಾಗಿದ್ದ ಜಾವಾದ ಇಂದ್ರಾ ಕುಸುಮ ಅವರು. ಆತ ತಲೆಗೆ ಟೋಪಿ ಹಾಕಿಕೊಂಡು ಓಡಾಡುತ್ತಿದ್ದರೆ ಆತನ ಮಗ ಮೊಹಮ್ಮದ್ ಅನಸ್ ಚೆಗವಾರನ ಗಂಭೀರ ಚಿತ್ರವಿರುವ ಟಿ ಶರ್ಟ್‌ಅನ್ನು ಹಾಕಿಕೊಂಡು ಓಡಾಡುತ್ತಿದ್ದ.

ನಂತರ ಜಕಾರ್ತಾದಲ್ಲಿ ಪಶ್ಚಿಮ ಏಶಿಯಾದ ತೈಲ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿ ಕೆಲಸಮಾಡುತ್ತಿರುವ ನನ್ನ ಮಿತ್ರ ಹೇಳಿದಂತೆ, ಇಂಡೋನೇಶಿಯಾದ ಮುಸ್ಲಿಮರ ಧಾರ್ಮಿಕ ಆಚರಣೆಗಳು ಬಹಳ ವಿಚಿತ್ರವಾಗಿವೆ. ಅವನನ್ನು ಬೀಳ್ಕೊಡುವಾಗ ಉತ್ತರ ಭಾರತ ಮುಸ್ಲಿಮರು ಎಂದಿನಂತೆ ಹೇಳುವ ಹಾಗೆ ನಾನು 'ಖುದಾ ಹಾಫಿಜ್' ಎಂದೆ. ಆದರೆ ನನ್ನ ಗೆಳೆಯ ಹೇಳಿದ, ನಾನು ಹೇಳಬೇಕಾಗಿದ್ದು 'ಅಲ್ಲಾ ಹಾಫಿಜ್' ಎಂದು. ಯಾಕೆಂದರೆ 'ಖುದಾ' ಎಂಬ ಪದ ಪರ್ಶಿಯನ್‌ನಿಂದ ಬಂದಿದ್ದರೆ, 'ಅಲ್ಲಾ' ಎಂಬುದು ಅರೇಬಿಕ್ ಭಾಷೆಯಿಂದ ಬಂದಿದೆ !

ಉತ್ತರ ಪ್ರದೇಶದ ಅವಧ್‌ನ ಸಮೀಪದ ಹಳ್ಳಿಯೊಂದರಲ್ಲಿ ಹುಟ್ಟಿದ ನಾನು ಬೆಳೆದಿದ್ದು ಭಜನೆ ಮತ್ತು ಮಸೀದಿಯ ಅಜಾನ್‌ಗಳನ್ನು ಕೇಳಿಕೊಂಡೇ. ನಮ್ಮ ಅಜ್ಜ ಮನೆಯಲ್ಲಿ ಧೋತಿಯನ್ನು ಧರಿಸುತ್ತಿದ್ದರು.ಅವರು ದಸರಾದಲ್ಲಿ ಬ್ಯಾಲೆಯನ್ನು ಮಾಡುವ ಧನುಶ್‌ಗಂಜ್ ಗುಂಪಿನ ನಾಯಕರಾಗಿದ್ದರು.

ಧಾರ್ಮಿಕವಾಗಿ ನಾನು ಇಸ್ಲಾಮ್‌ಅನ್ನು ಪಾಲಿಸುತ್ತಿದ್ದರೂ, ನಮ್ಮ ಕುಟುಂಬವೆಲ್ಲ ರಾಮಲೀಲಾ, ಹೋಳಿ ಮತ್ತು ದೀಪಾವಳಿಗಳಲ್ಲಿ ಬಹಳ ಸಂಭ್ರಮದಿಂದ ಪಾಲ್ಗೊಳ್ಳುತ್ತಿತ್ತು. ಇಸ್ಲಾಮ್‌ನ ಧಾರ್ಮಿಕ ಇತಿಹಾಸದ ಪುಟಗಳನ್ನು ತೆರೆದು ನೋಡಿದರೆ ಪ್ರವಾದಿ ಮುಹಮ್ಮದರ ಸಂಗಾತಿಯಾಗಿದ್ದ ಸಲ್ಮಾನ್ ಫಾರ್ಸಿಯವರ ಬಗ್ಗೆ ವಿವರಗಳು ದೊರೆಯುತ್ತವೆ. ಸಲ್ಮಾನ್ ಫಾರ್ಸಿ ಮೂಲತಃ ಒಬ್ಬ ಪಾರ್ಸಿಯಾಗಿದ್ದು ಕಡೆಯವರೆಗೆ ಹಾಗೆಯೇ ಉಳಿದರು. ಪ್ರವಾದಿಯ ಜೊತೆಗೆ ಅವರು ದೀರ್ಘಕಾಲ ಒಡನಾಟ ನಡೆಸಿದರೂ ಸಲ್ಮಾನ್ ಅರೇಬಿಯನ್ನನಾಗಲಿಲ್ಲ.

ಈಜಿಪ್ಟ್, ಉತ್ತರ ಆಫ್ರಿಕಾ, ಆಫ್ಘನಿಸ್ತಾನ ಮತ್ತು ಇರಾನ್‌ಗಳಲ್ಲಿ ಇಸ್ಲಾಮ್ ಧಾರ್ಮಿಕವಾಗಿ ಹಲವಾರು ಬದಲಾವಣೆಗಳಿಗೆ ಕಾರಣವಾದರೂ ಅಲ್ಲಿನ ಸಾಂಸ್ಕೃತಿಕ ಆಚರಣೆಗಳು ಹಾಗೆಯೇ ಉಳಿದುಕೊಂಡವು. ನಾನು ಬಹಳ ಕಾಲದವರೆಗೆ ಒಬ್ಬ ವ್ಯಕ್ತಿಯ ಧಾರ್ಮಿಕ ನಂಬಿಕೆಗಳು ಹಾಗೂ ಸಾಂಸ್ಕೃತಿಕ ಆಚರಣೆಗಳ ನಡುವೆ ದೊಡ್ಡ ಕಂದಕಗಳು ಇರುವುದಿಲ್ಲ ಎಂದು ಭಾವಿಸಿದ್ದೆ.

ಆದರೆ ಇತ್ತೀಚೆಗೆ ಇದ್ದಕ್ಕಿದ್ದಂತೆ ಜನ ನನ್ನ ಕೆಲವು ಆಚರಣೆ–ಅಭ್ಯಾಸಗಳನ್ನು ಸರಿಮಾಡುವುದನ್ನು ನೋಡಿ ಆಶ್ಚರ್ಯಪಟ್ಟಿದ್ದೇನೆ. ನಾವು ಮುಸ್ಲಿಮರಾಗಿರುವುದರಿಂದ ನಮ್ಮ ಎಲ್ಲ ನಡವಳಿಕೆಗಳು ಇಸ್ಲಾಮೀಕೃತ(ಅದರರ್ಥ ಅರೇಬಿಕ್)ವಾಗಿರಬೇಕು ಎಂಬುದು ಅವರ ನಿರೀಕ್ಷೆ. ಯಾಕೆಂದರೆ ಇಸ್ಲಾಮ್ ಮತ್ತು ಅರೇಬಿಯಾ ಎರಡೂ ಒಂದಕ್ಕೊಂದು ಪೂರಕವಾಗಿವೆ ಎಂಬುದು ಅವರ ನಂಬಿಕೆ. ಅವರ ಪ್ರಕಾರ ಮುಸ್ಲಿಮರಾಗಬೇಕು ಎಂದರೆ ನೀವು ಅರೇಬಿಯನ್ನರೇ ಆಗಿರಬೇಕು. ನಾನು ಮುಸ್ಲಿಮನಾಗಿದ್ದರೂ ನನ್ನ ಮೊದಲ ಹೆಸರು ಅರೇಬಿಕ್ ಭಾಷೆಗೆ ಸೇರಿದ್ದಲ್ಲ. ಹಾಗಾದರೆ ನಾನು ಯಾರು? ಮುಸ್ಲಿಮನಾಗಿ ನನ್ನ ಅಸ್ತಿತ್ವವೇನು? ಇಂಥ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಿದ್ದಾಗ ಮೌಲಾನಾ ಅಬುಲ್ ಕಲಾಮ್ ಆಜಾದ್‌ರ ಈ ಮಾತುಗಳು ನನಗೆ ದೊರಕಿದವು. ಅವರು ಹೇಳುತ್ತಾರೆ: " ನಾನೊಬ್ಬ ಮುಸ್ಲಿಮನಾಗಿದ್ದೇನೆ ಎಂಬುದು ನನಗೆ ಬಹಳ ಹೆಮ್ಮೆಯ ಸಂಗತಿ. ಯಾಕೆಂದರೆ ಮುಸ್ಲಿಮನಾಗುವ ಮೂಲಕ ನಾನು ಇಸ್ಲಾಮ್ ಧರ್ಮದ ೧೩೦೦ವರ್ಷಗಳಿಗಿಂತಲೂ ಹೆಚ್ಚಿನ ಪರಂಪರೆಯೊಂದಕ್ಕೆ ವಾರಸುದಾರನಾಗುತ್ತಿದ್ದೇನೆ ಎಂಬುದು ನನಗೆ ಸಂತೋಷವನ್ನು ತರುವ ಸಂಗತಿಯಾಗಿದೆ. ನಾನು ಇಂಥ ಸಮೃದ್ಧ ಪರಂಪರೆಯ ಒಂದಂಶವನ್ನೂ ಸಹ ಕಳೆದುಕೊಳ್ಳಲು ತಯಾರಿಲ್ಲ. ಆದರೆ ಅದೇ ಸಂದರ್ಭದಲ್ಲಿ ನಾನೊಬ್ಬ ಭಾರತೀಯ ಎಂಬ ಸಂಗತಿ ನನ್ನಲ್ಲಿ ಅಷ್ಟೇ ಹೆಮ್ಮೆಯ ಭಾವನೆಯನ್ನುಂಟು ಮಾಡುತ್ತದೆ. ಭಾರತವನ್ನು ಕಟ್ಟುವಲ್ಲಿ ನನ್ನ ಬೆವರಿನ ಪಾಲೂ ಸಹ ಸೇರಲೇಬೇಕು. ಅದನ್ನು ಬಿಟ್ಟುಕೊಡಲು ನಾನು ಎಂದಿಗೂ ಸಿದ್ಧವಿಲ್ಲ".

ಈಗ ನನ್ನ ಸಮಸ್ಯೆಗಳಿಗೆಲ್ಲ ಉತ್ತರ ದೊರಕಿದೆ. ಇಂಡೋನೇಶಿಯಾದ ನನ್ನ ಗೆಳೆಯ ಇಂದ್ರಾ ಕುಸುಮಾನ ಹೆಸರೇ ಒಂದು ಅದ್ಭುತ. ಹಾಗೇ ಅವನು ಮಾಡುವ ರಾಮಾಯಣದ ಬ್ಯಾಲೆಯಂತೂ ಇನ್ನೂ ಅದ್ಭುತ.ಇನ್ನು ನನ್ನ ಜಕಾರ್ತಾದಲ್ಲಿರುವ ನನ್ನ ಭಾರತೀಯ ಗೆಳೆಯನನ್ನು ಬೀಳ್ಕೊಡುವಾಗ ನಾನು ಹೇಳುವುದು 'ಖುದಾ ಹಾಫಿಜ್' ಎಂದೇ !!

**(ಎರಡೂ ಲೇಖನಗಳ ಕನ್ನಡಾನುವಾದ : ಎಸ್. ಸಿರಾಜ್ ಅಹಮದ್)**

# ಇಸ್ಲಾಂಗೂ ಸಮಾಜವಾದಕ್ಕೂ ಹೊಂದಾಣಿಕೆ ಸಾಧ್ಯವೇ?

***ಅಸ್ಘರ್ ಆಲಿ ಎಂಜಿನಿಯರ್**



**ಬ**ಹಳ ಜನರಿಗೆ ಸಮಾಜವಾದವೆಂಬುದು ಒಂದು ನಾಸ್ತಿಕ ಸಿದ್ಧಾಂತವಾಗಿರುವುದರಿಂದ ಯಾವ ರೀತಿಯಲ್ಲೂ ಅದು ಸ್ವೀಕಾರಾರ್ಹವಲ್ಲ ಎಂಬ ಭಾವನೆ ಇದೆ. ಆದುದರಿಂದ ಇಸ್ಲಾಂಗೂ ಸಮಾಜವಾದಕ್ಕೂ ಹೊಂದಾಣಿಕೆ ಸಾಧ್ಯವೇ ಎಂಬುದನ್ನು ಕುರಿತು ನಾನು ಬರೆಯಬೇಕೆಂದು ನನ್ನ ಸ್ನೇಹಿತರೊಬ್ಬರು ನನಗೆ ಪತ್ರ ಬರೆದು ಇಸ್ಲಾಂನ ಬೋಧನೆಯ ಮೂಲವೇ ಏಕ ದೇವರಲ್ಲಿ ಅಚಲ ನಂಬಿಕೆಯಾಗಿರುವುದರಿಂದ ಇಸ್ಲಾಂ ಮತ್ತು ಸಮಾಜವಾದಗಳು ಒಂದಾಗಿರುವುದು ಹೇಗೆ ಸಾಧ್ಯ ಎಂದು ಕೇಳಿದ್ದಾರೆ. ಇದು ಸರಿಯಾದ ದೃಷ್ಟಿಯಲ್ಲಿವೆಂಬುದು ನನ್ನ ಭಾವನೆ. ಹಲವಾರು ಹೆಸರಾಂತ ಉಲೆಮಾಗಳು ಸಮಾಜವಾದವನ್ನು ಇಸ್ಲಾಮಿಕ್ ಬೋಧನೆಯ ಮುಖ್ಯಭಾಗವೆಂದು ಒಪ್ಪಿಕೊಂಡಿದ್ದಾರೆ. ಭಾರತ ಉಪಖಂಡದ ಇಬ್ಬರು ಖ್ಯಾತ ಉಲೆಮಾಗಳಾದ ಮೌಲಾನಾ ಹಝರತ್ ಮೊಹನಿ ಮತ್ತು ಮೌಲಾನಾ ಉಬೈದುಲ್ಲಾ ಸಿಂಧಿ ಅವರುಗಳು ಕಮ್ಯೂನಿಸ್ಟ್ ಚಳುವಳಿಯನ್ನು ಉತ್ಸಾಹದಿಂದಲೇ ಬೆಂಬಲಿಸಿದರು. ಮೌಲಾನಾ ಹಝರತ್ ಮೊಹನಿಯವರು ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷದ

ಸ್ಥಾಪಕರಲ್ಲೊಬ್ಬರು. ಮೌಲಾನಾ ಉಬೈದುಲ್ಲಾ ಸಿಂಧಿಯವರು ಖಿಲಾಫತ್ ಚಳುವಳಿಯ ಕಾಲಕ್ಕೆ ಆಫ್ಘಾನಿಸ್ಥಾನಕ್ಕೆ ವಲಸೆ ಹೋಗಿದ್ದು ಮಹಾರಾಜಾ ಪ್ರತಾಪಸಿಂಗ್ ಅವರ ಜೊತೆ ಒಂದು ಪರಿವರ್ತನ ಸರ್ಕಾರವನ್ನು ರಚಿಸಿದ್ದರು. ಈ ಸರ್ಕಾರದ ಸದಸ್ಯರನ್ನು ಹೊರದೂಡುವಂತೆ ಬ್ರಿಟಿಷರು ಆಫ್ಘಾನಿಸ್ಥಾನದ ರಾಜರ ಮೇಲೆ ಒತ್ತಡ ಹೇರಿದಾಗ ಮೌಲಾನಾ ಉಬೈದುಲ್ಲಾ ಸಿಂಧಿಯವರು ರಷ್ಯಾಕ್ಕೆ ತೆರಳಿ ಲೆನಿನ್‌ರನ್ನು ಭೇಟಿಯಾಗಿ ಭಾರತದಲ್ಲಿ ಬ್ರಿಟೀಷರ ವಸಾಹತುಶಾಹಿ ನೀತಿಯ ವಿರುದ್ಧ ಹೋರಾಡುವ ತಂತ್ರಗಳನ್ನು ಚರ್ಚಿಸಿದ್ದರು. ಅವರು ಸಾಕಷ್ಟು ಸಮಯ ಭೂಗತರಾಗಿದ್ದು ಕಳೆದ ಶತಮಾನದ ೪೦ರ ದಶಕದ ಆದಿಯಲ್ಲಿ ಭಾರತಕ್ಕೆ ಮರಳಿದರು. ಕವಿ ತತ್ವಜ್ಞಾನಿ ಇಕ್ಬಾಲ್ ಟರ್ಕಿಯಲ್ಲಿ ಉಸ್ಮಾನಿ ಶಕ್ತಿಯ ಪತನದ ನಂತರ ರಷ್ಯನ್ ಕ್ರಾಂತಿ ಪೂರ್ವದಲ್ಲಿ ಬರೆದ ತಮ್ಮ *ಖಿಜರ್-ಎ-ರಾಹ್*‌ದಲ್ಲಿ ಸಮಾಜವಾದಕ್ಕೆ ಅಪಾರವಾದ ಗೌರವ ನೀಡಿದ್ದಾರೆ. ಅವರು ಮಾರ್ಕ್ಸ್‌ನನ್ನು ಪ್ರವಾದಿಯಲ್ಲದ ವಿದ್ವಾಂಸ ಎಂಬುದಾಗಿ ಕರೆದು ಅಪಾರವಾದ ಮನ್ನಣೆ ನೀಡಿದ್ದಾರೆ. ಅವರು 'ಲೆನಿನ್ ಖುದಾ ಕೆ ಹುಜೂರ್ ಮೆ' (ದೇವರ ಸಮ್ಮುಖದಲ್ಲಿ ಲೆನಿನ್) ಎಂಬ ವಿಶಿಷ್ಟ ಪದ್ಯವನ್ನು ಸಹ ಬರೆದಿದ್ದಾರೆ. ೧೯೩೦ರಲ್ಲಿ ಲಾಹೋರ್‌ನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬೋಧಿಸುತ್ತಿದ್ದ, ಎಡಪಂಥೀಯ ಒಲವಿದ್ದ, ಇಸ್ಲಾಂ ವಿದ್ವಾಂಸರೂ ಆಗಿದ್ದ ಕ್ರಿಶ್ಚಿಯನ್ ಪಾದ್ರಿಯೊಬ್ಬರು 'ಆಧುನಿಕ ಪ್ರಪಂಚದಲ್ಲಿ ಇಸ್ಲಾಂ' ಎಂಬ ತಮ್ಮ ಕೃತಿಯಲ್ಲಿ ಪ್ರಪಂಚದ ಪ್ರಥಮ ಸಂಘಟಿತ ಸಮಾಜವಾದಿ ಚಳುವಳಿ ಎಂದರೆ ಇಸ್ಲಾಂ ಎಂಬುದಾಗಿ ಬರೆಯುತ್ತಾರೆ. ಇದಕ್ಕೆ ಕಾರಣವಿಲ್ಲದಿಲ್ಲ.

ಇಸ್ಲಾಂ ಬಡವರ ಬಗ್ಗೆ ದಮನಿತರ ಬಗ್ಗೆ ಸಹಾನುಭೂತಿ ಹೊಂದಿರುವುದು ಮಾತ್ರವಲ್ಲದೆ ಹಲವಾರು ಮೆಕ್ಕನ್ ಸುರಾಗಳಲ್ಲಿ ಸಂಪತ್ತಿನ ಕ್ರೂಢೀಕರಣವನ್ನು ಖಂಡಿಸಿಯೂ ಇದೆ. ಆ ದಿನಗಳಲ್ಲಿ ಮೆಕ್ಕಾ ಅಂತರರಾಷ್ಟ್ರೀಯ ವ್ಯಾಪಾರಿ ಕೇಂದ್ರವಾಗಿದ್ದು ಅಲ್ಲಿ ಒಂದು ಕಡೆ ಭಾರೀ ಶ್ರೀಮಂತರೂ (ಸಾಮಾನ್ಯವಾಗಿ ಬುಡಕಟ್ಟು ಮತ್ತು ಕುಲ ಪ್ರಮುಖರು) ಇನ್ನೊಂದು ಕಡೆ ಕಡು ಬಡವರೂ ಇರುತ್ತಿದ್ದರು. ಹೀಗಾಗಿ ಸುರಾ ೧೦೪ ಮತ್ತು ೧೦೭ (ಎರಡೂ ಮೆಕ್ಕನ್ ಸುರಾಗಳು)ರಲ್ಲಿ ನಾವು ಈ ಬಗೆಯ ಖಂಡನೆಯನ್ನು ಕಾಣುತ್ತೇವೆ. ಮದೀನಾದ ಒಂದು ಸುರಾದಲ್ಲಿ (೯.೩೪) ನಾವು ಈ ರೀತಿಯ ಸಂಪತ್ತಿನ ಕ್ರೋಢೀಕರಣದ ಖಂಡನೆಯನ್ನು ಕಾಣುತ್ತೇವೆ. ಈ ಸುರಾ ಈ ರೀತಿ ಹೇಳುತ್ತದೆ: "ಯಾರು ಬೆಳ್ಳಿ ಮತ್ತು ಚಿನ್ನವನ್ನು ಕೂಡಿಡುತ್ತಾರೋ ಮತ್ತು ಅದನ್ನು ಅಲ್ಲಾಹನ ರೀತಿಯಲ್ಲಿ ಖರ್ಚು ಮಾಡುವುದಿಲ್ಲವೋ ಅವರಿಗೆ ಒಂದು ಕಠಿಣವಾದ ದಂಡನೆಯನ್ನು ಘೋಷಿಸು".

ಈ ಸುರಾ ಕೂಡ ಸಂಪತ್ತಿನ ಸಂಗ್ರಹವನ್ನು ಖಂಡಿಸುತ್ತದೆ. ಪ್ರವಾದಿಗಳ ಸಂಗಾತಿಗಳಲ್ಲೊಬ್ಬರಾದ ಅಬುಧರ್ ಅವರು ಹಣವನ್ನು ಕೂಡಿಟ್ಟುಕೊಂಡವರ ಮುಂದೆ ಈ ಸುರಾವನ್ನು ವಾಚಿಸುತ್ತಿದ್ದರು. ಮತ್ತು ಅಂತಹವರೊಂದಿಗೆ ಕೈ ಕುಲುಕಲು ನಿರಾಕರಿಸುತ್ತಿದ್ದರು. ಈ ರೀತಿ ಅಬುಧರ್ ಅವರ ಜೊತೆ ಕೈ ಕುಲುಕುವವರು ಆ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು. ಅದನ್ನು ಕುರಿತು ಇತರರ ಬಳಿ ಹೇಳಿಕೊಳ್ಳುತ್ತಿದ್ದರು. ಅಬುಧರ್ ಒಬ್ಬ ರಾಜಿಯಾಗದ ಮನುಷ್ಯರಾಗಿದ್ದು ಅವರನ್ನು ಗಡೀಪಾರು ಮಾಡಿದ್ದ ರಬ್ಜಾದ ಮರಳುಗಾಡಿನಲ್ಲಿ ಅವರು ಒಂಟಿಯಾಗಿ ಸಾವನ್ನು ಕಾಣಬೇಕಾಯಿತು. ಅವರ ಪಾರ್ಥೀವ ಶರೀರಕ್ಕೆ ಹೊದಿಸುವ ಹೊಸಬಟ್ಟೆ ಕೂಡ ಕೊಳ್ಳಲಾಗದೆ ಅವರ ಹೆಂಡತಿ ತಮ್ಮ ಗಂಡನ ಶವವನ್ನು ತೊಟ್ಟಿದ್ದ ಉಡುಪಿನಲ್ಲಿಯೇ ಸಮಾಧಿ ಮಾಡಬೇಕಾಯಿತು.

ಖುರಾನ್ ಒಬ್ಬ ಮನುಷ್ಯ ತನ್ನ ಅಗತ್ಯಕ್ಕಿಂತ ಹೆಚ್ಚಾಗಿರುವುದಲ್ಲವೆನ್ನೂ ಖರ್ಚು ಮಾಡಬೇಕೆಂದು ಧಾರ್ಮಿಕರಿಗೆ ಉಪದೇಶಿಸುವ ಮಟ್ಟಕ್ಕೆ ಹೋಗುತ್ತದೆ. ಇದಕ್ಕೆ ಖುರಾನ್‌ನಲ್ಲಿರುವ ಪದ ಆಫ್ (*afw*) ಅಂದರೆ ಒಬ್ಬ ವ್ಯಕ್ತಿಯ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಂಡ ನಂತರ ಉಳಿದದ್ದು, ಹಾಗಾಗಿ ಸುರಾ ೨:೨೧೯ ಈ ರೀತಿ ಹೇಳುತ್ತದೆ. "ಅವರೆಷ್ಟು ಖರ್ಚು ಮಾಡಬೇಕೆಂದು ಅವರು ನಿನ್ನನ್ನು ಕೇಳುತ್ತಾರೆ. ನಿನ್ನಲ್ಲಿರುವ ಅಧಿಕವಾಗಿರುವುದಲ್ಲವನ್ನೂ ಎಂದು ಹೇಳು" ಹಾಗಾಗಿ ಇದು ಪ್ರತಿಯೊಬ್ಬರಿಗೂ ಅವರ ಅಗತ್ಯವೆಷ್ಟಿದೆಯೋ ಅಷ್ಟು ದೊರೆಯಬೇಕು ಎಂಬ ಸಮಾಜವಾದಿ ಸೂತ್ರಕ್ಕೆ ಹತ್ತಿರವಾಗುತ್ತದೆ. ಖುರಾನಿನ ಮೂಲಭೂತ ಒತ್ತು ಇರುವುದು ನೀತಿಯ ಮೇಲೆ (ಅದ್ಲ್) ವಾಸ್ತವವಾಗಿ ಅಲ್ಲಾಹನಿಗೆ ಇರುವ ಹೆಸರುಗಳಲ್ಲಿ 'ಆದಿಲ್' ಎಂಬುದೂ ಒಂದು. ಹಾಗಾಗಿ ಒಂದು ನ್ಯಾಯಹೀನ ಸಮಾಜ ಇಸ್ಲಾಮಿಕ್ ಸಮಾಜವಾಗಿರಲು ಸಾಧ್ಯವಿಲ್ಲ. ಆದರೆ ದುರದೃಷ್ಟವಶಾತ್ ಯಾವ ಇಸ್ಲಾಮಿಕ್ ದೇಶವೂ ಈ ಮಾನದಂಡವನ್ನು ಹೊಂದಿಲ್ಲ.

ನ್ಯಾಯವೆಂಬುದು ಖುರಾನ್‌ನಲ್ಲಿ ಅತ್ಯಂತ ಮುಖ್ಯವಾದದ್ದು, ಖುರಾನ್ ಹೇಳುತ್ತದೆ. "ನ್ಯಾಯವಾದದ್ದನ್ನು ಮಾಡು ಅದು ದೈವಭೀರುವಾಗಿರುವುದಕ್ಕೆ ಸಮಾನ (೫ : ೮) ಮತ್ತು ಮುಂದುವರಿದು ಖುರಾನ್ ಹೇಳುತ್ತದೆ: 'ಪರಿಣಾಮ ನಿನ್ನ ವಿರುದ್ಧವಾಗಿ ನಿನ್ನ ಶತ್ರುವಿನ ಪರವಾಗಿ ಇದ್ದರೂ ಚಿಂತೆಯಿಲ್ಲ, ನ್ಯಾಯವನ್ನು ಪಾಲಿಸಬೇಕು. ಓ ನಂಬಿಕೆಯುಳ್ಳವರೇ ನೀವು ನ್ಯಾಯವನ್ನು ಕಾಪಾಡುವವರಾಗಿ, ಅಲ್ಲಾಹನ ಸಾಕ್ಷಿಗಳಾಗಿ, ಅದು ನಿಮ್ಮ ವಿರುದ್ಧವೋ ನಿಮ್ಮ ಮಾತಾಪಿತ್ರಗಳ ವಿರುದ್ಧವೋ ನಮ್ಮ ಬಂಧುಗಳ ವಿರುದ್ಧವೋ ಆಗಿದ್ದರೂ ಚಿಂತೆಯಿಲ್ಲ.'

Distributive ನ್ಯಾಯವೂ ಒಳಗೊಂಡಂತೆ ಒಂದು ಸಮಗ್ರ ಅರ್ಥದಲ್ಲಿ ನ್ಯಾಯವೆಂಬುದು ಇಲ್ಲವಾದರೆ ಸಮಾಜವಾದಕ್ಕೇನು ಅರ್ಥ ? ಈ ಸುರಾವನ್ನು ಅಧ್ಯಾಯ ೧೦೪ ಮತ್ತು ೧೦೭ ರ ಮುಂದುವರಿಕೆಯಾಗಿ ಓದಿದಾಗ Distributive ನ್ಯಾಯವನ್ನು ಬೇರ್ಪಡಿಸುವುದು ಸಾಧ್ಯವಿಲ್ಲ.

ಖುರಾನ್ ತನ್ನ ಉದ್ದೇಶವನ್ನು ಸ್ಪಷ್ಟಪಡಿಸುವುದಕ್ಕಾಗಿ ಮುಸ್ತಕ್‌ಬಿರುನ್ ಮತ್ತು ಮುಸ್ತದ್ ಇಫನ್ ಅಂದರೆ ಬಲಾಢ್ಯ ಶೋಷಕರು ಮತ್ತು ದುರ್ಬಲ ಶೋಷಿತರು ಎಂಬ ಪದಗಳನ್ನು ಬಳಸುತ್ತದೆ. ಈ ರೀತಿಯಲ್ಲಿ ಇವು ಅತ್ಯಂತ ಮುಖ್ಯವಾದ ಪದಗಳು. ಅಲ್ಲಾಹನ ಪ್ರವಾದಿಗಳೆಲ್ಲರೂ ದುರ್ಬಲ ಸಮಾಜಕ್ಕೆ ಸೇರಿದವರೇ. ಬಲಾಢ್ಯ ಶೋಷಕರಾದ ನಿಮ್ರುದ್ ಫಿಕಾನ್ (ಅಂದರೆ ನಿಮ್ರೋದ್ ಮತ್ತು ಫರೋವಾ)ಗಳ ವಿರುದ್ಧ ಹೋರಾಡಿದ ಮೊಸೆಸ್, ಅಬ್ರಹಾಂ ಮತ್ತು ಇತರರು. ಖುರಾನ್ ಪ್ರಕಾರ ಮುಸ್ತಕ್‌ಬಿರುನ್ ಮತ್ತು ಮುಸ್ತದ್ ಇಫನ್‌ಗಳ ನಡುವಿನ ಸಂಘರ್ಷದಲ್ಲಿ ಅಂತಿಮವಾಗಿ ಮುಸ್ತದ್ ಇಫನ್‌ಗಳು ಗೆದ್ದು ಈ ಭೂಮಿಯನ್ನು ಪಡೆಯುತ್ತಾರೆ. (೨೮ : ೫)

ಈ ರೀತಿಯಲ್ಲಿ ಖುರಾನ್ ನಿಸ್ಸಂದೇಹವಾಗಿಯೂ ಸಮಾಜದ ದುರ್ಬಲ ವರ್ಗದ ಪರವಾಗಿದೆ ಮತ್ತು ದುಡಿಯುವ ವರ್ಗದ ನಾಯಕತ್ವ (ನಿರಂಕುಶ ಪ್ರಭುತ್ವ ಅಲ್ಲದಿದ್ದರೂ) ಬರುವುದೆಂದು ಭವಿಷ್ಯ ನುಡಿಯುತ್ತದೆ. ಈ ಸುರಾದ ಬಗ್ಗೆ (೨೮ : ೫) ನಮ್ಮ ಗಮನ ಸೆಳೆದು ಶ್ರೀಮಂತರಿಂದ ಮುಟ್ಟುಗೋಲು ಹಾಕಿಕೊಂಡ ಸಂಪತ್ತಿನಂದ ಬುನ್ಯಾದ್ ಇ ಮುಸ್ತಾದ್ ಇಫಿನ್ (ದುರ್ಬಲರಿಗಾಗಿ ಪ್ರತಿಷ್ಠಾನ) ಸ್ಥಾಪಿಸಿದವರು ಇಮಾಮ್ ಖೊಮೇನಿಯವರು ಎಂಬುದು ಕುತೂಹಲದ ಸಂಗತಿ. ದುರದೃಷ್ಟವಶಾತ್ ಇತರೆ ಕ್ರಾಂತಿಗಳಂತೆ ಇರಾನ್‌ನ ಕ್ರಾಂತಿಯನ್ನು ಕೂಡ ಸ್ಥಾಪಿತ ಹಿತಾಸಕ್ತಿಗಳು ಕೈವಶಮಾಡಿಕೊಂಡವು. ಬಹಳಷ್ಟು ಸಂದರ್ಭಗಳಲ್ಲಿ ಯಾವುದೇ ರೀತಿಯ ರಾಜಕೀಯ ವ್ಯವಸ್ಥೆಯೊಂದು ಅಸ್ತಿತ್ವಕ್ಕೆ ಬಂದ ತಕ್ಷಣ ಸ್ಥಾಪಿತ ಹಿತಾಸಕ್ತಿಗಳು ಅದರ ಸುತ್ತ ಬೆಳೆದು ಅದನ್ನು ಕೈವಶ ಮಾಡಿಕೊಳ್ಳುತ್ತವೆ. ಹಾಗಾಗಿ ಯಾವುದೇ ಕ್ರಾಂತಿಯ ಬಗ್ಗೆಯೂ ದುರ್ಬಲ ವರ್ಗಗಳು ತುಂಬ ಎಚ್ಚರದಿಂದಿರಬೇಕು. ಪ್ರವಾದಿಗಳು ಮರಣಹೊಂದಿದ ಕೆಲವೇ ವರ್ಷಗಳಲ್ಲಿ ಇಸ್ಲಾಮಿಕ್ ಕ್ರಾಂತಿಗೂ ಕೂಡ ಇದೇ ಗತಿ ಉಂಟಾಯಿತು.



# ಇಸ್ಲಾಂ ಮತ್ತು ಸಮಾಜವಾದ : ಒಂದು ಪ್ರತಿಕ್ರಿಯೆ: ಬಾಪು ಹೆದ್ದೂರಶೆಟ್ಟಿ



**ಬ**ಡವರು ಮತ್ತು ದಮನಿತರ ಬಗೆಗಿನ ಸಹಾನುಭೂತಿ ಮಾತ್ರವೇ ಸಮಾಜವಾದವಾಗುವುದಿಲ್ಲ. ಬಹಳಷ್ಟು ಧರ್ಮಗಳಲ್ಲಿ ಈ ಲಕ್ಷಣಗಳು ಕಾಣುತ್ತವೆ. ಅಸ್ಗರ್ ಅಲಿ ಇಂಜಿನಿಯರ್ ತಮ್ಮ ವಾದಕ್ಕಾಗಿ ಮಂಡಿಸಿರುವ ಸುರಾಗಳು ಪ್ರಧಾನವಾಗಿ ಸಂಪತ್ತು ಕೂಡಿಟ್ಟುಕೊಂಡು ದಾನ ಮಾಡದಿರುವವರಿಗೆ ಶಿಕ್ಷೆ ಕಾದಿರುವ ಬಗ್ಗೆ ಹೇಳುತ್ತವೆ. ಆದರೆ ದಾನ ಮಾಡುವುದೇ ಸಮಾಜವಾದವಲ್ಲ. ಅಗತ್ಯಕ್ಕಿಂತ ಹೆಚ್ಚಾಗಿರುವ ಸಂಪತ್ತನ್ನು ಸುರಾ ೨.೨೧೯ ವಿಧಿಸುವಂತೆ, ಹಂಚುವುದೂ ಸಮಾಜವಾದವಲ್ಲ, ಆದರೆ ಸಮಾನತೆಯೇ ಸಮಾಜವಾದ.

ಬಡವರ ಬಗೆಗಿನ ಅನುಕಂಪ ದಾನ ಮಾಡಬೇಕೆಂಬ ಪ್ರಚಾರ, ಕೂಡಿಟ್ಟುಕೊಂಡವರಿಗೆ ಶಿಕ್ಷೆ ಮುಂತಾದವು ಬಹುತೇಕ ಎಲ್ಲಿ ಧರ್ಮಗಳಲ್ಲೂ ಕಂಡು ಬರುವಂಥದೇ. ಆದರೆ ಇಸ್ಲಾಂ ಅಸಮಾನತೆಯನ್ನು ಮಾನ್ಯ ಮಾಡುತ್ತದೆ. ಅದಕ್ಕಾಗಿ ಪ್ರಚಾರ ಮಾಡುತ್ತದೆ. ಅದನ್ನು ಜಾರಿಗೊಳಿಸುತ್ತದೆ. ಕುರಾನ್‌ನ ಈ ಕೆಳಗಿನ ಭಾಗಗಳು ಇದಕ್ಕೆ ಸಾಕ್ಷಿಯೊದಗಿಸುತ್ತದೆ.

೧೬.೭೧; ಅಲ್ಲಾಹನು ಇತರರಿಗಿಂತ ಹೆಚ್ಚಾಗಿ ನಿಮ್ಮಲ್ಲಿ ಕೆಲವರಿಗೆ ಅನುಕೂಲ ಒದಗಿಸಿದ್ದಾನೆ. ಹೆಚ್ಚು ಅನುಕೂಲ ದೊರೆತವರು ನಿಮ್ಮ ಗುಲಾಮರೊಂದಿಗೆ ನಿಮ್ಮ ಅನುಕೂಲಗಳನ್ನು ಹಂಚಿಕೊಂಡು ಅವರನ್ನು ನಿಮ್ಮ ಸಮಾನರಾಗಿಸಿಕೊಳ್ಳಬೇಕಾಗಿಲ್ಲ.

೧೬.೭೫: ಅಲ್ಲಾಹನು ಒಂದು ಸಾದೃಶ್ಯವನ್ನು ಟಂಕಿಸಿದ್ದಾನೆ. ಒಂದು ಕಡೆ ಯಾವುದರ ಮೇಲೆಯೂ ನಿಯಂತ್ರಣವಿರದ ಗುಲಾಮ. ಇನ್ನೊಂದು ಕಡೆ ಒಳ್ಳೆಯ ಅನುಕೂಲಗಳನ್ನು **ನಮ್ಮಿಂದ** ಪಡೆದ ಮತ್ತೊಬ್ಬ, ಇವನು ಗುಟ್ಟಾಗಿಯೂ ಪ್ರತ್ಯಕ್ಷವಾಗಿಯೂ ಚೆನ್ನಾಗಿ ಖರ್ಚು ಮಾಡುವವನು. ಇವರಿಬ್ಬರೂ ಸಮಾನರೇ?

೩೦.೨೮ **ನಾವು** ನಿಮಗೆ ಅನುಗ್ರಹಿಸಿರುವ ಸಂಪತ್ತಿನ ವಿಚಾರದಲ್ಲಿ ನಿಮ್ಮ ಗುಲಾಮರಲ್ಲಿ ಯಾರಾದರೂ ನಮ್ಮ ಪಾಲುದಾರರಿದ್ದಾರೆಯೇ?

ಸಮಾಜವಾದವೆಂದರೆ ಕೇವಲ ಆರ್ಥಿಕ ಸಮಾನತೆಯಲ್ಲ. ಅದು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಾನತೆಯನ್ನು ಸಹ ಒಳಗೊಳ್ಳುತ್ತದೆ. ಇದರ ಬಹುಮುಖ್ಯ ಘಟಕ ಹೆಣ್ಣು ಗಂಡಿನ ನಡುವಿನ ಲಿಂಗ ಸಮಾನತೆ. ಈ ಲೆಕ್ಕದಲ್ಲಿ ಇಸ್ಲಾಂ ಸಮಾಜವಾದಿ ನಿರೀಕ್ಷೆಗಳ ಮಟ್ಟಕ್ಕೆ ಬರುವುದಿಲ್ಲ.

ಸಮಕಾಲೀನ ಒತ್ತಡಗಳೇನೇ ಇರಲಿ, ಲೌಕಿಕವಾಗಿಯಾಗಲಿ ಅಥವಾ ಪಾರಮಾರ್ಥಿಕವಾಗಿಯಾಗಲಿ ಇಸ್ಲಾಂ ಮಹಿಳೆಯರನ್ನು ಪುರುಷರಿಗೆ ಸಮಾನರೆಂಬ ರೀತಿಯಲ್ಲಿ ನಡೆಸಿಕೊಂಡಿಲ್ಲ. ಸುರಾ ೪.೩೪ ಮಹಿಳೆಯರ ವಿರುದ್ಧ ಪುರುಷ ಶ್ರೇಷ್ಠತೆಯನ್ನು ಬಹಳ ಸ್ಪಷ್ಟವಾಗಿ ಸ್ಥಾಪಿಸುತ್ತದೆ: ಪುರುಷರು ಮಹಿಳೆಯರ ಜವಾಬ್ದಾರಿಯನ್ನು ಹೊಂದಿದ್ದಾರೆ. ಏಕೆಂದರೆ ಅಲ್ಲಾಹನು ಒಬ್ಬರನ್ನು ಇನ್ನೊಬ್ಬರಿಗಿಂತ ಶ್ರೇಷ್ಠರಾಗಿಸಿದ್ದಾನೆ ಮತ್ತು ಅವರು ತಮ್ಮ ಆಸ್ತಿಯನ್ನು (ಮಹಿಳೆಯರನ್ನು ಸಲಹುವುದಕ್ಕಾಗಿ) ಖರ್ಚು ಮಾಡುತ್ತಾರೆ. ಸುರಾ ೨.೮೨ ಇಬ್ಬರು ಮಹಿಳೆಯರ ಸಾಕ್ಷಿಯು ಒಬ್ಬ ಪುರುಷನ ಸಾಕ್ಷಿಗೆ ಸಮಾನವೆಂದು ಹೇಳುತ್ತದೆ. ಸುರಾ ೪.೧೧ ಪುರುಷರ ಆಸ್ತಿ ಹಕ್ಕಿನ ಅರ್ಧದಷ್ಟನ್ನು ಮಾತ್ರ ಮಹಿಳೆಯರಿಗೆ ಕೊಡುತ್ತದೆ. ೪.೩೪: ಮಹಿಳೆಯರು ಪುರುಷರಿಗೆ ಎದುರು ಬೀಳಬಹುದೆಂಬ ಆತಂಕವುಂಟಾದಲ್ಲಿ ಮಹಿಳೆಯರನ್ನು ಶಿಕ್ಷಿಸಬೇಕು ಅಥವಾ ಹೊಡೆಯಬೇಕೆಂದು ಹೇಳುವ ಮಟ್ಟಕ್ಕೆ ಹೋಗುತ್ತದೆ.

ಖುರಾನ್ (೩೬, ೫೫, ೪೩, ೭೦) ಒಳ್ಳೆಯ ಪುರುಷರು ಸ್ವರ್ಗವನ್ನು ಪ್ರವೇಶಿಸುವ ಬಗ್ಗೆ ಉಲ್ಲೇಖಿಸಿದರೆ ಒಳ್ಳೆಯ ಸ್ತ್ರೀಯರು ಸ್ವರ್ಗವನ್ನು ಪ್ರವೇಶಿಸುವ ಬಗ್ಗೆ ಯಾವ ಉಲ್ಲೇಖವು ಇಲ್ಲ. ಆದರೆ ಒಳ್ಳೆಯ ಪುರುಷರು ತಮ್ಮ ಹೆಂಡತಿಯರ ಜೊತೆಯಲ್ಲಿ ಸ್ವರ್ಗವನ್ನು ಪ್ರವೇಶಿಸುತ್ತಾರೆ. ತಮ್ಮ ಹೆಂಡತಿಯರ ಜೊತೆಯಲ್ಲಿ ಸ್ವರ್ಗವನ್ನು ಪ್ರವೇಶಿಸುವ ಈ ಗುಣವಂತ ಪುರುಷರನ್ನು ಖುಷಿಪಡಿಸಲು ಕನ್ಯೆಯರು ದೊರೆತರೆ ಮಹಿಳೆಯರಿಗೆ ಏನು ದೊರೆಯುತ್ತದೆ ಎಂಬುದರ ಬಗ್ಗೆ ಖುರಾನ್ ಮಾತನಾಡುವುದಿಲ್ಲ.

ಇಸ್ಲಾಂ ತನ್ನ ಕಾಲದ ಒಂದು ದೊಡ್ಡ ಸುಧಾರಣಾವಾದಿ ಆದರೆ ಸಮಾಜವಾದದೊಂದಿಗೆ ಅದರ ಹೊಂದಾಣಿಕೆಯನ್ನು ಹುಡುಕುವುದು ಎಂದರೆ ಅವೆರಡನ್ನೂ ವಿರೂಪಗೊಳಿಸಿದಂತೆ ಮತ್ತು ಅದು ಪ್ರಸ್ತುತಕ್ಕೆ ಸಲ್ಲದ ಅಸಂಗತಿ.

ತೀರ್ಪು ನೀಡುವ ದಿನ ನಿಷ್ಠಾವಂತ ಮುಸ್ಲಿಮರು ಅಲ್ಲಾಹನ ಬಲಭಾಗದಲ್ಲಿ ನಂತರೆ ನಂಬಿಕೆ ಹೀನರು ಎಡಕ್ಕೆ ನಂತಿರುತ್ತಾರೆ (೯೦, ೧೭–೧೯) ಮತ್ತು ಎಲ್ಲ ರೀತಿಯ ಸಮಾಜವಾದಿಗಳೂ ಎಡಪಂಥೀಯರೆಂದು ಕರೆಯಲ್ಪಡುವ ಕಾರಣ ಅವರೆಲ್ಲರೂ ಅಲ್ಲಾಹನ ಎಡಕ್ಕೆ ನಿಲ್ಲಬೇಕು. ಇದರರ್ಥ ಖುರಾನ್‌ನ ಬೋಧನೆಗಳನ್ನು ತಿರಸ್ಕರಿಸುವ ಕಾರಣಕ್ಕೆ ಅವರು ಅಲ್ಲಾಹನಗೆ ಮತ್ತು ಮುಸ್ಲಿಮರಿಗೆ ಸ್ವೀಕಾರಾರ್ಹರಲ್ಲ.

**(ಎರಡೂ ಲೇಖನಗಳ ಅನುವಾದ : ಎಂ. ರಾಜು)**

**(ಇಸ್ಲಾಂ ಕುರಿತ ಈ ಸಂಚಿಕೆಯ ಎಲ್ಲ ಮೂಲ ಬರಹಗಳ ಕೃಪೆ: ‘ಜನತಾ’)**



## ದಿಟ್ಟ ಪುಟ್ಟ ಮುಸ್ಲಿಂ ಬಾಲಕಿ ಮಲಾಲಾ

ಮಹಿಳೆಯ ಸಾಮಾಜಿಕ ಸ್ಥಾನಮಾನದ ಬಗ್ಗೆ ಯಾವುದೇ ಧರ್ಮಗ್ರಂಥ ಏನೇ ಹೇಳಲಿ, ಅದು ಆಧುನಿಕ ಮಹಿಳಾ ಚೇತನದ ಸಮಾನ ಸ್ವಾತಂತ್ರ್ಯ ಮತ್ತು ಹಕ್ಕುಗಳಗಾಗಿನ ಆಗ್ರಹ ಮತ್ತು ಹೋರಾಟಗಳನ್ನು ಹತ್ತಿಕ್ಕಲಾರದು. ಇದಕ್ಕೆ ಇತ್ತೀಚಿನ ಉಜ್ವಲ ಉದಾಹರಣೆ ಪಾಕಿಸ್ತಾನದ ೧೨ ವರ್ಷಗಳ ಬಾಲಕಿ ಮಲಾಲಾ ಯೂಸಫ್ಜಾಯಿ.

ಫಕ್ತೂನಿಸ್ತಾನ ಪ್ರಾಂತ್ಯದ ಶಾಲೆಯೊಂದರ ಬುಡಕಟ್ಟು ಜನಾಂಗದ ವಿದ್ಯಾರ್ಥಿನಿಯಾದ ಮಲಾಲಾ, ತಾಲಿಬಾನಿಗಳು ಮಹಿಳಾ ಶಿಕ್ಷಣದ ಮೇಲೆ ನಿಷೇಧ ಹೇರಿ ಬಾಲಕಿಯರ ಶಾಲೆಗಳ ಮೇಲೆ ಬಾಂಬುಗಳ ಮಳೆಗೆರೆಯುತ್ತಿದ್ದಾಗಲೂ ಮಹಿಳಾ ಶಿಕ್ಷಣದ ಅಗತ್ಯ ಮತ್ತು ಮಹತ್ವದ ಬಗ್ಗೆ ತನ್ನ ಬ್ಲಾಗ್ ಮೂಲಕ ಪ್ರಚಾರ ಮಾಡಿದ ದಿಟ್ಟ ಬಾಲಕಿ. ಇದಕ್ಕಾಗಿ ಆಕೆ ಇದೇ ವರ್ಷದ ಅಕ್ಟೋಬರ್ ೯ರಂದು ಶಾಲೆಯಿಂದ ಹಿಂತಿರುಗುತ್ತಿದ್ದಾಗ ತಾಲೀಬಾನಿಗಳ ಗುಂಡೇಟನ್ನು ಎದುರಿಸಬೇಕಯಿತು. ಹಲವು ದಿನಗಳ ಕಾಲ ಬದುಕು ಸಾವುಗಳ ನಡುವಣ ತೂಗುಯ್ಯಾಲೆಯಲಿದ್ದು, ಈಗ ಚೇತರಿಸಿಕೊಂಡಿರುವ ಈ ಬಾಲೆ, ಈ ದಾಳಿಯಿಂದ ಕೊಂಚವೂ ವಿಚಲಿತವಾಗದೆ ಮಹಿಳಾ ಶಿಕ್ಷಣದ ತನ್ನ ಆಂದೋಲನವನ್ನು ಮುಂದುವರೆಸಿ ಅಂತರಾಷ್ಟ್ರೀಯ ಗಮನ ಸೆಳೆದಿದ್ದಾಳೆ.

ಮಲಾಲಾಳಿಗೆ ಪಾಕಿಸ್ತಾನ ಸರ್ಕಾರ ತನ್ನ ಮೊದಲ ರಾಷ್ಟ್ರೀಯ ಯುವ ಪುರಸ್ಕಾರ ನೀಡಿ ಗೌರವಿಸಿದ್ದರೆ, ಅವಳ ಹೆಸರನ್ನು ದ. ಆಫ್ರಿಕಾದ ಅಧ್ಯಕ್ಷ ಟುಟು ಅಂತಾರಾಷ್ಟೀಯ ಮಕ್ಕಳ ಶಾಂತಿ ಪ್ರಶಸ್ತಿಗೂ, ಹಲವು ದೇಶಗಳ ನಾಯಕರು ನೊಬೆಲ್ ಶಾಂತಿ ಪುರಸ್ಕಾರಕ್ಕೂ ಸೂಚಿಸಿದ್ದಾರೆ– ಸಂಪಾದಕ

**ಸಾಹಿತ್ಯ-ಸಂಸ್ಕೃತಿ-ನಾಟಕ ಇತ್ಯಾದಿ:**

## ನೀನಾಸಂ ತಿರುಗಾಟ-೨೦೧೨





# ಸಮಕಾಲೀನ ವಿಕ್ರಮರಾಯನೂ, ನಿರಾಸೆ ಮೂಡಿಸಿದ ಬೊಂಬಿಲವಾಡಿಯೂ...

ರಂಗ ಚಟುವಟಿಕೆಗಳನ್ನು ಕರ್ನಾಟಕದ ಮೂಲೆ ಮೂಲೆಗೂ ತಲುಪಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಪ್ರಾರಂಭವಾದ ನೀನಾಸಂ ತಿರುಗಾಟ ನವೆಂಬರ್ ೯ ಹಾಗೂ ೧೦ ರಂದು ಶಿವಮೊಗ್ಗದಲ್ಲಿ ಪ್ರಯೋಗ ಕಂಡಿತು. ಪ್ರದರ್ಶಿತವಾದ ಎರಡು ನಾಟಕಗಳು ಮಿಶ್ರ ಯಶಸ್ಸು ಕಂಡವು. ಮೈಸೂರು ಸಾಮ್ರಾಜ್ಯದ ಐತಿಹಾಸಿಕ ವಸ್ತುವನ್ನು ತನ್ನ ಒಡಲಾಳದಲ್ಲಿಟ್ಟುಕೊಂಡ 'ವಿಗಡ ವಿಕ್ರಮರಾಯ' ನಟರ ವಿಸ್ತೃತ ಆಂಗಿಕ ಅಭಿನಯ, ವಿನೂತನ ನಿರೂಪಣಾ ವಿಧಾನ, ಸಮಕಾಲೀನ ರಾಜಕಾರಣದ ಗೋಜಲುಗಳಿಗೆ ಪ್ರತಿಧ್ವನಿಯಾಗುವ ಗುಣ ಹಾಗೂ ಹೊಸ ರಂಗರೂಪಕಗಳ ಹುಡುಕಾಟಗಳ ಕಾರಣಗಳಿಗಾಗಿ ಯಶಸ್ಸು ಕಂಡರೆ, ಮರಾಠಿ ಮೂಲದ 'ಮೊಕ್ಕಾಂಪೋಸ್ಟ್ ಬೊಂಬಿಲ್‌ವಾಡಿ' ತನ್ನ ಸಡಿಲ ನಿರೂಪಣೆಯಿಂದ ಪ್ರಹಸನದ ಮಟ್ಟಕ್ಕೇ ಸೀಮಿತವಾಯಿತು.

ಸಂಸರ 'ವಿಗಡ ವಿಕ್ರಮರಾಯ' ಈಗಾಗಲೇ ಹಲವು ಪ್ರಯೋಗಗಳನ್ನು ಕಂಡ ರಂಗಕೃತಿ. ಉದ್ದುದ್ದ ಸಂಭಾಷಣೆಗಳ ಸಂಸರ ನಾಟಕಗಳನ್ನು ರಂಗಕ್ಕೆ ತರುವುದು ಯಾವುದೇ ನಿರ್ದೇಶಕನ ಕ್ರಿಯಾಶೀಲತೆಗೆ ನಿಜವಾಗಿಯೂ ದೊಡ್ಡ ಸವಾಲೇ ಸರಿ. ಹಿಂದಿನ ಬಹುತೇಕ ರಂಗಪ್ರಯೋಗಗಳು ನಾಟಕೀಯತೆಯ ಹಾಗೂ ಸಂಸರ ರಂಗಭಾಷೆಯ ಸ್ವರೂಪದ ಗ್ರಹಿಕೆಯ ಕೊರತೆಯಿಂದಾಗಿ ವೈಫಲ್ಯ ಕಂಡಿದ್ದರೆ, ಈ ಪ್ರಯೋಗವು ನಟರ ಸಾಂಘಿಕ ನಟನೆಯ ಕೌಶಲ್ಯ ಹಾಗೂ ನಿರ್ದೇಶಕ ಮಂಜು ಕೊಡಗು ಅವರಿಗೆ ದಕ್ಕಿದ ಕಥಾನಕದ ಮೇಲಿನ ಹಿಡಿತದಿಂದಾಗಿ ಅಮೋಘ ಯಶಸ್ಸು ಕಂಡಿತು. ನಟ ಸಮೂಹದ ಸಾಂಘಿಕ ಶೈಲೀಕೃತ ಆಂಗಿಕ ಅಭಿನಯ–ವಿಸ್ತೃತ ಸಂಭಾಷಣೆ–ನಾಟಕೀಯತೆ–ಬೆಳಕಿನ ಸಂಯೋಜನೆ–ಹಿನ್ನಲೆ ಗಾಯನಗಳೆಲ್ಲವೂ ಒಂದಕ್ಕೊಂದು ತಾಳ ಮೇಳೈಸಿ ದೃಶ್ಯ ವೈಭವವೊಂದನ್ನು ರಂಗದ ಮೇಲೆ ನಿರ್ಮಿಸಿದವು. ಪ್ರೇಕ್ಷಕರು ಕೂಡಾ ತದೇಕಚಿತ್ತದಿಂದ ಹೊಸ ರಂಗಭಾಷೆಯ ಪ್ರಯೋಗಕ್ಕೆ ಸಾಕ್ಷಿಯಾದರು.



**ಮಂಜು ಕೊಡಗು**

ಇತ್ತೀಚೆಗೆ ಕೆಲ ರಂಗಚಿಂತಕರು ರಂಗಕೃತಿಯ ನಿರೂಪಣೆಯು ನೇರವೂ, ಸರಳವೂ ಆಗಿರಬೇಕೆಂದು ವಾದಿಸಿ ಅಂತಹ ನಿಧಾನಗತಿಯ ಪ್ರಯೋಗಗಳತ್ತ ವಾಲುತ್ತಿದ್ದರೆ, ಈ ಪ್ರಯೋಗವು ಪ್ರಜ್ಞಾಪೂರ್ವಕವಾಗಿಯೇ ಕ್ಲಿಷ್ಟ ಹಾಗೂ ತೀವ್ರ ಗತಿಯ ಆಂಗಿಕ ಕಸರತ್ತನ್ನು ಹೊಂದಿ ಭಿನ್ನವಾಗಿ ಮೂಡಿಬಂತು. ಇಲ್ಲಿ ಇನ್ನೊಂದು ಮಾತನ್ನು ಹೇಳಲೇಬೇಕು. ನಾಟಕದ ಕಥಾವಸ್ತು ಮೈಸೂರು ಸಂಸ್ಥಾನದ ಐತಿಹಾಸಿಕ ರಾಜಕಾರಣದ ಕಥಾವಸ್ತುವನ್ನು ಹೊಂದಿದ್ದರೂ, ಇದು ಸಮಕಾಲೀನ ಅನೈತಿಕ ರಾಜಕೀಯ ಹಾಗೂ ಅಧಿಕಾರದ ಲಾಲಸ್ಯವನ್ನೂ ಪ್ರತಿಧ್ವನಿಸುವಲ್ಲಿ ಯಶಸ್ವಿಯಾಯಿತು. ನಾಟಕದಲ್ಲಿ ದಳವಾಯಿ ವಿಕ್ರಮರಾಯನದ್ದು ಕೆಡುಕಿನ ಹಾಗೂ ದುರಾಸೆಯ ಪಾತ್ರ. ಈತ ಹಿಂಬಾಗಿಲಿನಿಂದ ರಾಜ್ಯದ ಅಧಿಕಾರವನ್ನು ನಿಯಂತ್ರಿಸುವ ಉದ್ದೇಶ ಹೊಂದಿರುತ್ತಾನೆ. ಯಾವಾಗ ರಾಜ ಒಡೆಯನು ಎಚ್ಚೆತ್ತುಕೊಂಡು ಪ್ರತಿರೋಧ ಒಡ್ಡಿತ್ತಾನೋ ಆಗ ದಳವಾಯಿಯು ಆತನನ್ನು ಕೊಲ್ಲಿಸಿ, ರಣಧೀರನನ್ನು ತನ್ನ ಕೈಗೊಂಬೆಯನ್ನಾಗಿಪಟ್ಟಕ್ಕೆ ತರಲು ಯತ್ನಿಸುತ್ತಾನೆ. ಕೊನೆಗೆ ದಳವಾಯಿಯೇ ತನ್ನ ಕುತಂತ್ರದಲ್ಲಿ ವಿಫಲನಾಗಿ ಮರಣ ಹೊಂದುವುದು ನಾಟಕದ ಕಥಾ ವಸ್ತು. ಅಂದರೆ ಕಥಾನಕವು ರಾಜಕಾರಣ ಹಾಗೂ ಅಧಿಕಾರಕ್ಕಿರುವ ಅನೈತಿಕ ಸಂಬಂಧವನ್ನು ಪ್ರಸ್ತುತಪಡಿಸುತ್ತದೆ. ಇದು ಈಗಿನ ಕಾಲದ ಅನೈತಿಕ ಅಧಿಕಾರ ದಾಹ ಹಾಗೂ ರಾಜಕೀಯ ಕುತಂತ್ರಗಳಿಗೂ ಪ್ರತಿಧ್ವನಿಯಾಗುವಂತೆ ನಿರ್ದೇಶಕರು ನಾಟಕವನ್ನು ನಿರೂಪಿಸಿದ್ದಾರೆ. ಹಾಗಾಗಿ ಈ ಪ್ರಯೋಗ ಒಂದು ರಾಜಕೀಯ ಆಯಾಮದಿಂದ ಇನ್ನೊಂದಕ್ಕೆ ಲಂಘಿಸುವ ಗುಣ ಹೊಂದಿದೆ. ಆದ್ದರಿಂದಲೇ ನಾಟಕದ ಕೊಟ್ಟಕೊನೆಗೆ ನಿರ್ದೇಶಕರು ಪಠ್ಯವನ್ನು ವಿಸ್ತರಿಸಿ ಮರಣ ಹೊಂದಿದ ದಳವಾಯಿ ವಿಕ್ರಮರಾಯನು ಪುನಃ ಎದ್ದುಬರುವ ದೃಶ್ಯವನ್ನು ಜೋಡಿಸಿದ್ದಾರೆ. ಅಂದರೆ ಈ ಅಧಿಕಾರ ಪಿಪಾಸುತನ ದಳವಾಯಿಯ ವೈಯಕ್ತಿಕ ನೆಲೆಗೆ ಮಾತ್ರ ಸೀಮಿತವಾಗಿರದೆ ಇದೊಂದು ನಿರಂತರ ಪ್ರಕ್ರಿಯೆ ಎಂಬ ನೈತಿಕ ತಿಳವಳಿಕೆಯ ದೃಶ್ಯ ಜೋಡಣೆ ಇದು. ಇದೇ ತಂತ್ರವನ್ನು ರಷ್ಯಾದ ಚಲನಚಿತ್ರ ನಿರ್ದೇಶಕ ಪೋಲನ್‌ಸ್ಕಿ ತನ್ನ ಮ್ಯಾಕ್‌ಬೆತ್ ಅವತರಣಿಕೆಯ ಸಿನಿಮಾದಲ್ಲಿಯು ಅಳವಡಿಸಿದ್ದಾನೆ.

'ಮುಕ್ಕಾಂ ಪೋಸ್ಟ್ ಬೊಂಬಿಲ್‌ವಾಡಿ'(ಮೂಲ ಮರಾಠಿ: ಪರೇಶ್ ಮೊಕಾಶಿ, ಕನ್ನಡ ಅನುವಾದ ಮತ್ತು ನಿರ್ದೇಶನ: ಕೆ.ಆರ್. ಓಂಕಾರ್) ತನ್ನ ಕುತೂಹಲಕಾರಿಯೆನಿಸುವ ಕಲ್ಪನೆ ಹಾಗೂ ಸಾಹಿತ್ಯಕ ಸಂವೇದನೆಯ ಸಂಭಾಷಣೆಗಳಿಂದ ಗಮನ ಸೆಳೆದರೂ, ಯಾವುದೇ ದಿಕ್ಕುದೆಸೆಗಳಿಲ್ಲದ ಬರೀ ಗೋಜಲುಗಳ ಮಟ್ಟದಲ್ಲೇ ನಿಂತು ನಿರಾಶೆ ಮೂಡಿಸಿತು. ನಾಟಕವು ಹಿಟ್ಲರನ ಜರ್ಮನಿ ಮತ್ತು ಬ್ರಿಟಿಷ್ ಭಾರತ –ಈ ಎರಡು ವಿಭಿನ್ನ ನೆಲೆಗಳ ಘಟನಾವಳಿಗಳನ್ನು ಕಸಿ ಮಾಡಿ ಆಗ ಸಂಭವಿಸುವ ಉಪದ್ವಾಪಗಳ ಮೂಲಕ ಹಾಸ್ಯ ಸೃಷ್ಟಿಸಲು ಯತ್ನಿಸುತ್ತದೆ. ಆದರೆ ನಾಟಕಕ್ಕೆ ಯಾವುದೇ ಕೇಂದ್ರ ದೃಷ್ಟಿಕೋನ ಇರದೇ ಇರುವುದರಿಂದ ಒಂದು ಪ್ರಹಸನ ಕೂಡ ನೀಡಬಹುದಾದ ಗಾಢ ಅನುಭವ ನೀಡಲಾಗಲಿಲ್ಲ.


ಆದರೆ ಎರಡೂ ಪ್ರಯೋಗಗಳಲ್ಲಿ ನೀನಾಸಂ ನಟರ ಅತ್ಯುತ್ತಮ ಸಮೂಹ ನಟನಾ ಕೌಶಲ್ಯ ಎದ್ದುಕಂಡಿತು.

**–ಟಿ. ಅವಿನಾಶ**

# ಪುಸ್ತಕಾವಲೋಕನ

**ಪು: ಇಸ್ಲಾಮೀ ಜಗತ್ತು ಮತ್ತು ಮುಸ್ಲಿಮರ ಸಮಸ್ಯೆಗಳು ಲೇ: ಡಾ. ಅಸ್ಘರ್ ಅಲಿ ಎಂಜಿನಿಯರ್ ಅನು: ಹಸನ್ ನಯೀಂ ಸುರಕೋಡ ಪ್ರ: ಲೋಹಿಯಾ ಪ್ರಕಾಶನ, ಬಳ್ಳಾರಿ ಪು: ೧೩೨ ಬೆಲೆ: ರೂ. ೭೫/-**

## ಪ್ರಗತಿಪರ ಮುಸ್ಲಿಮರಿಗೊಂದು ಕೈಪಿಡಿ




**'ಮು**ಸ್ಲಿಂ ಧರ್ಮವನ್ನು, ಅದು ಹಿಂಸಾತ್ಮಕವಾದದ್ದು, ಅವರ ಧರ್ಮಗ್ರಂಥ ಕುರಾನ್ ಜಿಹಾದ್ ಅಂದರೆ ಯುದ್ಧವನ್ನು ಪ್ರೇರೆಪಿಸುತ್ತದೆ, ಎಲ್ಲ ಮುಸ್ಲಿಮರೂ ಭಯೋತ್ಪಾದಕರು' ಹೀಗೆ ಮುಸ್ಲಿಂ ಧರ್ಮವನ್ನು ಅಮೆರಿಕ ಸೇರಿದಂತೆ ಪಾಶ್ಚಾತ್ಯ ದೇಶಗಳು ರಾಕ್ಷಸೀಕರಣಗೊಳಿಸುವ ಹಿಂದಿನ ಗುಪ್ತ ಅಜೆಂಡಾಗಳೇನು? ನಿಜಕ್ಕೂ ಮುಸ್ಲಿಂ ಧರ್ಮ ಭಯೋತ್ಪಾದಕ ಧರ್ಮವೇ? ಈ ಪ್ರಶ್ನೆಯನ್ನಿಟ್ಟುಕೊಂಡು ಅದಕ್ಕೆ ಕುರಾನಿನ ಮೂಲಕವೇ ಉತ್ತರಿಸುವ ಪ್ರಯತ್ನವನ್ನು 'ಇಸ್ಲಾಮೀ ಜಗತ್ತು ಮತ್ತು ಮುಸ್ಲಿಮರ ಸಮಸ್ಯೆಗಳು' ಕೃತಿ ಮಾಡುತ್ತದೆ. ಈ ಕೃತಿಯ ಲೇಖಕ ದೇಶದ ಪ್ರಮುಖ ಚಿಂತಕರಾಗಿರುವ ಡಾ. ಅಸ್ಗರ್ ಅಲಿ ಎಂಜಿನಯರ್. ಅವರು ದೇಶ ವಿದೇಶಗಳ ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳು ಮತ್ತು ಪತ್ರಿಕೆಗಳಿಗೆ ಬರೆದ ಲೇಖನಗಳ ಆಯ್ದ ಸಂಕಲನ ಈ ಕೃತಿಯಾಗಿದೆ. ಹಸನ್ ನಯೀಂ ಸುರಕೋಡ ಇದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಕುರಾನ್ ಎಲ್ಲಿಯೂ ಹಿಂಸೆಯನ್ನು ಪ್ರಚೋದಿಸುವುದಿಲ್ಲ. ಜಿಹಾದ್‌ನ ಅರ್ಥ ಹಿಂಸೆಯಾಗಲೀ ಯುದ್ಧವಾಗಲೀ ಅಲ್ಲ ಎಂಬುದನ್ನು ಕುರಾನ್‌ನ ಉಲ್ಲೇಖಗಳೊಂದಿಗೆ ಲೇಖಕರು ವಿಶ್ಲೇಷಿಸುತ್ತಾರೆ. ಹಾಗೆಂದು ಮುಸ್ಲಿಮ್ ಧರ್ಮದಲ್ಲಿ ಆಚರಣೆಯಲ್ಲಿರುವುದೆಲ್ಲ ಸರಿ ಎಂಬುದು ಅವರ ಅಭಿಪ್ರಾಯವಲ್ಲ. ಮುಸ್ಲಿಮರಲ್ಲಿನ ವಿವಿಧ ಪಂಥಗಳಲ್ಲಿರುವ ಒಡಕು ಮತ್ತು ತೀವ್ರವಾದ ಭಿನ್ನಾಭಿಪ್ರಾಯಗಳು, ಈ ಒಡಕುಗಳನ್ನು ಜೀವಂತವಾಗಿಡುವ ಮತ್ತು ಹೆಚ್ಚಿಸುವ ಕೆಲವು ಮದರಸಾಗಳು ಮತ್ತು ಮೌಲ್ವಿಗಳು, ಸರ್ವಾಧಿಕಾರಿ ಫತ್ವಾ ಹೊರಡಿಸುವ ಉಲೇಮಾಗಳು, ಇನ್ನೂ ಶಿಕ್ಷಣದಿಂದ ವಂಚಿತರಾಗಿ, ಎರಡನೇ ದರ್ಜೆ ಪ್ರಜೆಗಳಂತೆ ಬದುಕುತ್ತಿರುವ ಮಹಿಳೆಯರು... ಹೀಗೆ ಮುಸ್ಲಿಮರ ಹತ್ತಾರು ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸುವ ಲೇಖಕರು ಈ ಸಮಸ್ಯೆಗಳಿಂದ ಮುಕ್ತವಾಗಲು **ಶರಿಯತ್** ಕಾನೂನುಗಳ ಪ್ರಕಾರ ನಡೆಸುವ ರಾಜ್ಯಾಡಳಿತಕ್ಕಿಂತ ಪ್ರಜಾಪ್ರಭುತ್ವದ ಜಾತ್ಯಾತೀತ ಸ್ವರೂಪದ ಆಡಳಿತ ವ್ಯವಸ್ಥೆಯೇ ಮುಸ್ಲಿಮರಿಗೆ ಸೂಕ್ತವಾದುದು ಎಂದು ಅಭಿಪ್ರಾಯಪಡುತ್ತಾರೆ.

ಆಧುನಿಕ ಶಿಕ್ಷಣವೇ ಮುಸ್ಲಿಮರಿಗೆ ಬಿಡುಗಡೆಯ ದಾರಿ ಎಂಬ ಪ್ರತಿಪಾದನೆ ಕೃತಿಯಲ್ಲಿ ಪುನರಾವರ್ತನೆಯಾಗುವುದನ್ನು ಕಂಡಾಗ ಆಧುನಿಕ ಶಿಕ್ಷಣ ಪಡೆದವರೂ ಧರ್ಮದ ಕುರುಡು ಅನುಯಾಯಿಗಳಾಗುತ್ತಿರುವ ವಿದ್ಯಮಾನದ ಬಗ್ಗೆ ಲೇಖಕರೇಕೆ ಮೌನವಾಗಿದ್ದಾರೆ ಎಂಬ ಪ್ರಶ್ನೆಯೂ ಓದುಗರಲ್ಲಿ ಏಳುತ್ತದೆ. ಕೃತಿಯ ಕೊನೆಯ ಭಾಗದಲ್ಲಿ **ಆಧುನಿಕ** ಶಿಕ್ಷಣದ ಬಗ್ಗೆಯೂ ಲೇಖಕರಿಗೆ ಅನುಮಾನ ಮೂಡಿದ ಸೂಚನೆಗಳು ಸಿಗುತ್ತವೆ.

ಸೋವಿಯತ್ ರಷ್ಯಾವನ್ನು ಹಣಿಯಲು ಆಫ್ಘಾನಿಸ್ತಾನದಲ್ಲಿ ಯಥೇಚ್ಛ ಶಸ್ತ್ರಾಸ್ತ್ರಗಳೊಂದಿಗೆ ಸಕಲ ನೆರವನ್ನು ನೀಡಿ ತಾಲಿಬಾನರನ್ನು ಬೆಳೆಸಿದ ಅಮೇರಿಕಕ್ಕೆ ಆ ಉಗ್ರರು ತನಗೇ ತಿರುಗಿ ಬಿದ್ದಾಗ ಇಡೀ ಮುಸ್ಲಿಮ್ ಧರ್ಮವೇ ಭಯೋತ್ಪಾದಕ ಧರ್ಮವಾಗಿ ಕಾಣತೊಡಗಿತು. ತಾಲಿಬಾನರು ಅಸ್ತಿತ್ವಕ್ಕೆ ಬಂದಿದ್ದು ೧೯೯೪ರ ನಂತರ. ಕೇವಲ ಎರಡು ಮೂರು ದಶಕಗಳ ಇತಿಹಾಸ ಹೊಂದಿರುವ ಕೆಲವೇ ಕೆಲವು ತಾಲಿಬಾನ್ ಉಗ್ರರ ಮೂಲಕ ೧೪೦೦ ವರ್ಷಗಳ ದೀರ್ಘ ಇತಿಹಾಸ ಹೊಂದಿರುವ ಇಡೀ ಮುಸ್ಲಿಂ ಧರ್ಮವನ್ನು 'ಭಯೋತ್ಪಾದಕ ಧರ್ಮ'ವಾಗಿ ಬಿಂಬಿಸುವ ಷಡ್ಯಂತ್ರವನ್ನು ಲೇಖಕರು ಪ್ರಶ್ನಿಸುತ್ತಾರೆ. ಜಾಗತಿಕ ಮಟ್ಟದಲ್ಲಿ ಹಿಂಸೆಗೆ ಸಮಾನಾರ್ಥಕವಾಗಿ ಇಸ್ಲಾಮನ್ನು ಸಮೀಕರಿಸುವ ಪ್ರಯತ್ನ ನಡೆದಿದೆ. ಆದರೆ ಇಸ್ಲಾಂ ಇದ್ದಿರದಿದ್ದರೂ ಜಗತ್ತು ಹಿಂಸೆ ಹಾಗೂ ಯುದ್ಧರಹಿತವಾಗುತ್ತಿರಲಿಲ್ಲ ಎಂದು ಪ್ರತಿಪಾದಿಸುವ 'ಎ ವರ್ಲ್ಡ್ ವಿತೌಟ್ ಇಸ್ಲಾಮ್' ಕೃತಿಯನ್ನು ಲೇಖಕರು ಅವಲೋಕಿಸುತ್ತಾರೆ. ಕುತೂಹಲದ ಸಂಗತಿಯೆಂದರೆ ಈ ಕೃತಿಯ ಲೇಖಕ ಗ್ರಾಹಂ ಫುಲರ್ ದೀರ್ಘ ಕಾಲದವರೆಗೆ 'ಸಿಐಎ' ಬೇಹುಗಾರಿಕಾ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದ ಅಧಿಕಾರಿ. 'ಸಾಮಾನ್ಯವಾಗಿ ಪ್ರಚಾರ ಮಾಡಲಾಗುತ್ತಿರುವಂತೆ ಭಯೋತ್ಪಾದಕರು ಇಸ್ಲಾಮಿನ ಫಸಲು ಅಲ್ಲ. ಆದರೆ ಬಲಾಢ್ಯ ಶಕ್ತಿಯ ಮೂಲಕ ನಡೆಯುತ್ತಿರುವ ಇನ್ನೂ ಹೆಚ್ಚಿನ ಭೀಕರವಾದ ಹಿಂಸಾಚಾರಕ್ಕೆ ಹಿಂಸಾತ್ಮಕ ಪ್ರತಿಕ್ರಿಯೆ' ಎನ್ನುವ ಲೇಖಕರ ಈ ಅಂತಾರಾಷ್ಟ್ರೀಯ ರಾಜಕೀಯ ಒಳನೋಟ ಭಾರತದ ಸಂದರ್ಭಕ್ಕೂ ಅನ್ವಯಿಸುತ್ತದೆ. ೧೯೯೨ರಲ್ಲಿ ಬಾಬರಿ ಮಸೀದಿ ಕೆಡವಿದ ನಂತರ, ೨೦೦೨ರಲ್ಲಿ ಗುಜರಾತ್ ನರಮೇಧ ನಡೆದ ನಂತರ ತಾನೆ ಕಾಶ್ಮೀರದ ಹೊರಗೂ ಭಯೋತ್ಪಾದಕರು ಸೃಷ್ಟಿಯಾಗಲು ತೊಡಗಿದ್ದು.

ಈ ಕೃತಿಯ ಅನುವಾದ ಕೆಲವು ಕಡೆ ಜಡವಾಗಿದ್ದು ಓದುವಲ್ಲಿ ತೊಡಕನ್ನುಂಟುಮಾಡುತ್ತದೆ. ಉದಾಹರಣೆಗೆ 'ಅವತೀರ್ಣಗೊಂಡ' (ಪುಟ ೩೨), 'ಉತ್ಪೀಡನೆ' (ಪುಟ೪೧) 'ದೃಗ್ಗೋಚರತೆ' (ಪುಟ ೪೧) ಎಂಬ ಪದಗಳು ಮತ್ತು 'ಉಚ್ಚ ಮೌಲ್ಯಗಳು ಹಾಗೂ ಬದುಕಿನ ಅರ್ಥ ಮತ್ತು ಮಹತ್ವದ ಸಾಂಗತ್ಯವಿಲ್ಲದ ವಿವೇಚನೆ ಎರಡು ಅಂಚಿನ ಖಡ್ಗವಿದ್ದಂತೆ. ಸತ್ಯ ಕೇವಲ ವಾಸ್ತವ ಸಂಗತಿಯೊಂದಿಗಿನ ಸಾಮಂಜಸ್ಯವಾಗಿರದೆ ಅದಕ್ಕೂ ಆಚೆಗಿನ ಹಾಗೂ ಮೇಲ್ಮಟ್ಟದ್ದಾಗಿದ್ದು ಅತ್ಯುತ್ಕೃಷ್ಟವೂ ಎಲ್ಲವನ್ನೂ ಒಳಗೊಳ್ಳುವಂಥದ್ದೂ ಆಗಿರುವಂಥದ್ದಾಗಿರಬೇಕು.' (ಪುಟ.೧೯) ಎಂಬಂತಹ ವಾಕ್ಯಗಳ ಅರ್ಥವೇನು ಎಂಬುದು ಕೊನೆಗೂ ತಿಳಿಯುವುದಿಲ್ಲ. ಇದೊಂದು ಮುಂದಿನ ಆವೃತ್ತಿಯಲ್ಲಿ ಪರಿಷ್ಕರಿಸಬಹುದಾದ ಸಣ್ಣ ಮಿತಿ.

ಇಸ್ಲಾಮಿಕ್ ಜಗತ್ತು ಜ್ಞಾನವನ್ನು ಪಸರಿಸಬೇಕು, ಪಟ್ಟಭದ್ರ ಹಿತಾಸಕ್ತಿಗಳುಳ್ಳ **ಉಲೆಮಾಗಳು** ಧರ್ಮದ ಮೇಲೆ ಹೊಂದಿರುವ ಬಿಗಿ ಹಿಡಿತವನ್ನು ಸಡಿಲಗೊಳಿಸಬೇಕು, ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಿ ಅವರನ್ನು ಸ್ವತಂತ್ರರನ್ನಾಗಿ ಮಾಡಬೇಕು, ಇಸ್ಲಾಮಿನ ಎಲ್ಲ ದೇಶಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ತರಬೇಕು, ಸಂವಾದದ ಮೂಲಕ ಅಂತರ್‌ಧರ್ಮೀಯ ಏಕತೆ ತರಬೇಕು ಎನ್ನುವ ಐದು ಸಲಹೆಗಳನ್ನು ಲೇಖಕರು ಇಸ್ಲಾಮ್ ಜಗತ್ತಿನ ಮುಂದಿರಿಸಿದ್ದಾರೆ. ಧರ್ಮವನ್ನು ಗುತ್ತಿಗೆ ಹಿಡಿದುಕೊಂಡು ಸ್ವಹಿತಾಸಕ್ತಿ ಮೆರೆಯುವ ಯಾವ ಧರ್ಮದ ಧರ್ಮಗುರುಗಳೂ ತಮ್ಮ ಅಸ್ತಿತ್ವಕ್ಕೆ ಸಂಚಕಾರ ತರುವ ಇಂತಹ ಸಲಹೆಗಳನ್ನು ಅನುಷ್ಠಾನಕ್ಕೆ ತರುವುದಿರಲಿ, ಕನಿಷ್ಟ ಕೇಳಲೂ ಸಿದ್ಧರಿರುವುದಿಲ್ಲ. ಆದರೆ ಪ್ರಗತಿಪರ ಮುಸ್ಲಿಮರಾದರೂ ಇದರ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ **ಮಾಡಬೇಕು**. ಈ ನಿಟ್ಟಿನಲ್ಲಿ ಈ ಕೃತಿ ಅವರಿಗೊಂದು ಕೈಪಿಡಿಯಂತಿದೆ. ಉತ್ತಮ ಕೃತಿಯೊಂದನ್ನು ಆಯ್ದು ಅನುವಾದ ಮಾಡಿದ ಸುರಕೋಡರಿಗೆ, ಪ್ರಕಟಿಸಿದ ಲೋಹಿಯಾ ಪ್ರಕಾಶನಕ್ಕೆ ಅಭಿನಂದನೆ ಸಲ್ಲಬೇಕು.

**-ಸರ್ಜಾಶಂಕರ ಹರಳಿಮಠ**

**ಪತ್ರಿಕೆ ಪ್ರತಿ ತಿಂಗಳ ಮೊದಲರೆರಡು ದಿನಗಳಲ್ಲೇ ಅಂಚೆಗೆ ಹೋಗುತ್ತದೆ. ಹಾಗಾಗಿ ತಿಂಗಳ ಹತ್ತರೊಳಗಾಗಿ ಪತ್ರಿಕೆ ತಲುಪದಿದ್ದಲ್ಲಿ ಕೂಡಲೇ ನಿಮ್ಮ ಚಂದಾ ಸಂಖ್ಯೆ ನೀಡಿ ಪತ್ರಿಕೆಯ ದೂರವಾಣಿ ಸಂಖ್ಯೆಗೆ ಸಂದೇಶ ನೀಡಿ ಅಥವಾ. ಕರೆ ಮಾಡಿ.**

-ಸಂಪಾದಕ

ಊಟ ಬಲ್ಲವನಿಗೆ ರೋಗವಿಲ್ಲ
ಹಿತಮಿತ ಸಮತೋಲನ ಆಹಾರ
ಮನುಷ್ಯನನ್ನು ಸದಾ ಕ್ರಿಯಾಶೀಲನನ್ನಾಗಿ ಇರಿಸುತ್ತದೆ!

# 'ಹೊಸ ಮನುಷ್ಯ'ನಿಗೆ

## ಹಾರ್ದಿಕ ಶುಭಾಶಯಗಳು!

–ಡಾ॥ ಎಚ್.ಎಸ್. ರುದ್ರೇಶ್
ಎದೆರೋಗ ತಜ್ಞರು
ನಿವೃತ್ತ ಜಿಲ್ಲಾ ಆರೋಗ್ಯ ಮತ್ತು
ಕುಟುಂಬ ಕಲ್ಯಾಣಾಧಿಕಾರಿಗಳು
ಮೈಸೂರು

# 'ಹೊಸ ಮನುಷ್ಯ'ನ

## ಉದಯಕ್ಕೆ ಹಾರ್ದಿಕ ಶುಭಾಶಯಗಳು!

–ಎಂ. ರಾಜು
ಮಂಜುಳಾ ಎಂ. ರಾಜು
ಚಿ. ಅವಿನಾಶ್
. ಶಿವಮೊಗ್ಗ

## ಲೋಹಿಯಾ ಪ್ರಕಾಶನ

‘ಕ್ಷಿತಿಜ’, ಕಪ್ಪಗಲ್ಲು ರಸ್ತೆ, ಬಳ್ಳಾರಿ–೫೮೩೧೦೩
ದೂ: ೦೮೩೯೨–೨೫೭೮೪೧೨ ಸೆಲ್: ೯೯೦೦೭ ೫೦೫೮೯

### ನಮ್ಮ ಹೊಸ ಪ್ರಕಟಣೆಗಳು

**ಗೊಂದಲಿಗ್ಯಾ**(ಆತ್ಮಕತೆ)
ಲೇ: ಎ.ಎಂ. ಮದರಿ
ಪುಟ: ೨೪೦ ಬೆಲೆ:ರೂ.೧೨೫/–

**ಇಸ್ಲಾಮೀ ಜಗತ್ತು ಮತ್ತು ಮುಸ್ಲಿಮರ ಸಮಸ್ಯೆಗಳು**
ಮೂಲ: ಅಸ್ಗರ್ ಅಲಿ ಇಂಜಿನಿಯರ್
ಅನು: ಹಸನ್ ನಯೀಂ ಸುರಕೋಡ
ಪು: ೧೩೨ ಬೆಲೆ: ರೂ. ೭೫/–

**ಅಮೂರ್ತತೆ ಮತ್ತು ಇತರ ಲೇಖನಗಳು**
ಲೇ: ಬಿ.ಸಿ. ದೇಸಾಯಿ
ಪುಟ: ೧೨೪ ಬೆಲೇ: ರೂ.೭೫/–

**ಸಮಗ್ರ ಕಥೆಗಳು**
ಲೇ: ಡಾ. ರಾಜಶೇಖರ ನೀರಮಾನ್ವಿ
ಪುಟ: ೨೧೬ ಬೆಲೆ ರೂ. ೧೫೦/–

**ಕೆಂಡಸಂಪಿಗೆ ನೆನಪು**
ಲೇ: ಹೇಮಾ ವೆಂಕಟ್
ಪುಟ: ೯೬ ಬೆಲೆ: ರೂ.೫೦/–

**ಮಹಾ ಕ್ರಾಂತಿ**
ಲೇ: ಡಾ. ಜಿ.ಎನ್ ಮಲ್ಲಿಕಾರ್ಜುನಪ್ಪ
ಪುಟ: ೧೦೨ ಬೆಲೆ: ರೂ.೫೦/–

**ಸತೀಶ್ ಸಮಗ್ರ ಕವಿತೆಗಳು**
ಲೇ: ಸತೀರ್ಶ ಕುಲಕರ್ಣಿ
ಪುಟ: ೩೬೬ ಬೆಲೆ ರೂ.೨೦೦/–

**ಕರ್ಫ್ಯೂ**(ಕಾದಂಬರಿ)
ಮೂಲ: ವಿಭೂತಿ ಸತ್ಯನಾರಾಯಣ ರಾಯ್
ಅನು: ಹಸನ್ ನಯೀಂ ಸುರಕೋಡ
ಪು: ೯೬ ಬೆಲೆ: ರೂ. ೨೦೦/–

**ಜಯದೇವಿತಾಯಿ ಲಿಗಾಡೆ**
(ಜೀವನ ಚರಿತ್ರೆ)
ಲೇ: ಡಾ. ರಾಮಕೃಷ್ಣ ಮರಾಠೆ
ಪುಟ: ೧೩೬ ಬೆಲೆ: ರೂ. ೪೫/–

**ಜೋಳ ಜೋಳೇಶ್ವರ**
(ಲಲಿತ ಪ್ರಬಂಧಗಳು)
ಲೇ: ವೆಂಕಟೇಶ ಮಾಚಕನೂರ
ಪುಟ: ೧೪೪ ಬೆಲೆ: ರೂ.೭೫/–

**ರೂ. ೫೦೦/– ಮೊತ್ತದ ಪುಸ್ತಕಗಳಿಗೆ ಶೇ. ೧೦ರಷ್ಟು ಮತ್ತು ರೂ ೧೦೦೦/– ಮೊತ್ತದ ಪುಸ್ತಕಗಳಿಗೆ ಶೇ.೧೫ರಷ್ಟು ರಿಯಾಯ್ತಿ ನೀಡಲಾಗುವುದು. ಅಂಚೆ/ಕೊರಿಯರ್ ವೆಚ್ಚ ಪ್ರಕಾಶನದ್ದು**



## ‘ಹೊಸ ಮನುಷ್ಯ’ನಿಗೆ ಹಾರ್ದಿಕ ಶುಭಾಶಯಗಳು!

**–ಬಿ.ಸುರೇಶ ಅವರ**

# ನಾಕು ತಂತಿ

**ಪ್ರಕಾಶನ**

**ನಂ.೧೧೬೨, ೨೨ನೇ ಅಡ್ಡ ರಸ್ತೆ,**
**೨೩ನೇ ಮುಖ್ಯ ರಸ್ತೆ,**
**ಬನಶಂಕರಿ ೨ನೇ ಹಂತ**
**ಬೆಂಗಳೂರು–೫೬೦ ೦೭೦**



HOSA MANUSHYA, a kannada monthly solely owned, edited, published and printed by D. S. Nagabhushana at HIG-5, Kallahally Extension, Vinobanagara, SHIMOGA-577204 and printed in Chitrakuta Printers, Durgigudi, Shimoga-577 201

**RNI No: KARKAN/22649/10/2012-TC**
**RGD. No. MAG/ SDM/ SMG /PRB/ CR25/2012-13**


ತೆರೆದ ಅಂಚೆ

ಇವರಿಗೆ,


If undelivered, please return to D.S. Nagabhushana,
HIG-5, ‘Nudi’, Kallahalli Extension, Vinoba Nagara,
Shivamogga - 577204 (Karnataka)